ಶನಿವಾರ, ಜುಲೈ 31, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಾದರಿ ಸಂಗ್ರಹ
ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಶುಕ್ರವಾರ ಕೋವಿಡ್ ಪರೀಕ್ಷೆಗಾಗಿ ಮಹಿಳೆಯೊಬ್ಬರ ಮೂಗಿನ ದ್ರವ ಸಂಗ್ರಹಿಸಲಾಯಿತು



ಹೋರ್ಡಿಂಗ್‌ಗೆ ಅವಕಾಶ– ಸ್ಥಳೀಯ ಸರ್ಕಾರದ ಅಧಿಕಾರ ಮೊಟಕುಗೊಳಿಸುವ ನಡೆ: ಆರೋಪ

ರಾಜ್ಯ ಸರ್ಕಾರದ ಆದೇಶ ಸಂವಿಧಾನಕ್ಕೆ ವಿರುದ್ಧ

ಪ್ರಜಾವಾಣಿ ವಾರ್ತೆ

ಹೋರ್ಡಿಂಗ್ ಮಾಫಿಯಾಕ್ಕೆ ಮಣೆ 4

ಬೆಂಗಳೂರು: ಜಾಹೀರಾತು ಫಲಕ ಅಥವಾ ಹೋರ್ಡಿಂಗ್‌ಗಳನ್ನು ಹಾಕಲು ಅನುಮತಿ ನೀಡುವುದು ಅಥವಾ ಬಿಡುವುದು ಸ್ಥಳೀಯ ಸಂಸ್ಥೆಗೆ ಇರುವ ಅಧಿಕಾರ. ಬಿಬಿಎಂಪಿ ಬದಲಾಗಿ ರಾಜ್ಯ-ಸರ್ಕಾರವು ಇಂತಹ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಸಂವಿಧಾನಕ್ಕೆ ವಿರುದ್ಧ. ಇಂತಹ ವಿಷಯಗಳಲ್ಲಿ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಲೇಬಾರದು...

ಬಿಬಿಎಂಪಿ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಅಳವಡಿಸಲು ಅವಕಾಶ ನೀಡಿದ ರಾಜ್ಯಸರ್ಕಾರದ ಆದೇಶದ ವಿರುದ್ಧ ನಗರ ಯೋಜನಾ ತಜ್ಞರು, ಸಾಮಾಜಿಕ ಕಾರ್ಯಕರ್ತರು ಅಸಮಾಧಾನ ವ್ಯಕ್ತಪಡಿಸಿದ್ದು ಹೀಗೆ. ಎಲ್ಲೆಂದರಲ್ಲಿ ಹೋರ್ಡಿಂಗ್‌ಗಳನ್ನು ಹಾಕುವುದರಿಂದ ನಗರದ ಸೌಂದರ್ಯ ಹಾಳಾಗುವುದಲ್ಲದೆ, ಭ್ರಷ್ಟಾಚಾರಕ್ಕೂ ಅವಕಾಶವಾಗುತ್ತದೆ ಎಂಬ ದೂರು ತಜ್ಞರದ್ದು.



ತಾರಾ ಕೃಷ್ಣಸ್ವಾಮಿ

‘ನೀರು, ವಿದ್ಯುತ್‌ನಂತಹ ಸೇವೆಗಳನ್ನು ಒದಗಿಸುವ, ಕರ ಸಂಗ್ರಹಿಸುವ ಅಧಿಕಾರ ಸ್ಥಳೀಯ ಸಂಸ್ಥೆಗಳಿಗೆ ಇರುತ್ತದೆ. ರಾಜ್ಯ-ಸರ್ಕಾರವು ಬಿಬಿಎಂಪಿಯಿಂದ ಆ ಅಧಿಕಾರವನ್ನು ಕಸಿದುಕೊಂಡಿದೆ. ಈಗ ಜಾಹೀರಾತು ಫಲಕಗಳನ್ನು ಅಳವಡಿಸುವುದಕ್ಕೆ ಅವಕಾಶ ನೀಡಿ ಆದೇಶಿಸಿರುವುದು ಸಂವಿಧಾನಕ್ಕೆ ವಿರುದ್ಧ’ ಎಂದು ‘ಸಿಟಿಜನ್ಸ್ ಫಾರ್ ಬೆಂಗಳೂರು’ ಸಂಸ್ಥೆಯ ಸಹಸ್ಥಾಪಕಿ ತಾರಾ ಕೃಷ್ಣಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

‘ಹೋರ್ಡಿಂಗ್ ಹಾಕುವುದರ ಕುರಿತು ಬಿಬಿಎಂಪಿ ಸಾಮಾನ್ಯ ಸಭೆಯಲ್ಲಿ ಎಲ್ಲ ಸದಸ್ಯರು ವಿರುದ್ಧ ಮತ ಚಲಾಯಿಸಿದ್ದರು. ಈಗ ಸರ್ಕಾರ ಮತ್ತೆ ಅವಕಾಶ ನೀಡಿರುವುದು ಅಚ್ಚರಿ ತಂದಿದೆ’ ಎಂದರು.

‘ಬಿಬಿಎಂಪಿಗೆ ಆದಾಯ ಬರುತ್ತದೆ, ಉದ್ಯೋಗ ಸೃಷ್ಟಿಯಾಗುತ್ತದೆ ಎಂಬ ವಾದ ಮುಂದಿಡಲಾಗುತ್ತಿದೆ. ಆದರೆ, ಬಿಬಿಎಂಪಿಯಲ್ಲಿ ಶೇ 50ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಅದು ಬಿಟ್ಟು, ಹೋರ್ಡಿಂಗ್‌ಗೆ ಅವಕಾಶ ನೀಡುವ ಮೂಲಕ ಉದ್ಯೋಗ ಸೃಷ್ಟಿಯ ಅನಿವಾರ್ಯತೆ ಏನೂ ಇಲ್ಲ’ ಎಂದೂ ಅವರು ಹೇಳಿದರು.

ಭ್ರಷ್ಟಾಚಾರಕ್ಕೆ ದಾರಿ: ‘ಸರ್ಕಾರದ ಈ ನಿರ್ಧಾರದಿಂದ ಬಿಬಿಎಂಪಿಗೆ ಆದಾಯಕ್ಕಿಂತ ಹೆಚ್ಚಾಗಿ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಒಂದು ಹೋರ್ಡಿಂಗ್ ಹಾಕಲು ಅನುಮತಿ ಪಡೆದು, ಹತ್ತಾರು ಕಡೆ ಹಾಕುತ್ತಾರೆ. ಯಾವುದು ಅಧಿಕೃತ, ಯಾವುದು ಅನಧಿಕೃತ ಎಂದು ಗೊತ್ತಾಗುವುದೇ ಇಲ್ಲ’ ಎಂದು ನಗರ ಯೋಜನಾ ತಜ್ಞ ವಿ. ರವಿಚಂದರ್ ಹೇಳಿದರು.


ರವಿಚಂದರ್

‘ಎಷ್ಟೋ ಕಡೆ ಪಾದಚಾರಿ ಮೇಲ್ಸೇತುವೆಗಳನ್ನು ನಿರ್ಮಿಸಲಾಗಿದೆ. ಇವು ಜನರ ಬಳಕೆಗಿಂತ ಹೆಚ್ಚಾಗಿ ಜಾಹೀರಾತು ಫಲಕಗಳನ್ನು, ಹೋರ್ಡಿಂಗ್‌ಗಳನ್ನು ಹಾಕುವುದಕ್ಕೇ ಬಳಕೆಯಾಗುತ್ತಿವೆ. ಇವುಗಳ ಸರಿಯಾದ ಲೆಕ್ಕವೂ ಸಿಗುವು-ದಿಲ್ಲವಾದ್ದರಿಂದ ಬಿಬಿಎಂಪಿಗೆ ಆದಾಯವೂ ಹೆಚ್ಚು ಬರುವುದಿಲ್ಲ. ಖಾಸಗಿ ಜಾಹೀರಾತುದಾರರಿಗೆ ಮಾತ್ರ ಲಾಭವಾಗುತ್ತಿದೆ. ಸರ್ಕಾರದ ಆದೇಶದ ಹಿಂದೆ ಜಾಹೀರಾತು ಲಾಬಿ ಕೆಲಸ ಮಾಡಿದಂತಿದೆ’ ಎಂದೂ ದೂರಿದರು.

‘ಹೋರ್ಡಿಂಗ್‌ಗೆ ಅಡ್ಡವಾಗುತ್ತವೆ ಎಂಬ ಕಾರಣಕ್ಕೆ ಮರಗಳ ರೆಂಬೆ–ಕೊಂಬೆಗಳನ್ನು ಕತ್ತರಿಸಲಾಗುತ್ತದೆ. ಇದರಿಂದ ಪರಿಸರಕ್ಕೂ ಹಾನಿ, ನಗರದ ಸೌಂದರ್ಯಕ್ಕೂ ಧಕ್ಕೆ ಆಗುತ್ತದೆ’ ಎಂದರು.

‘ಸಾರ್ವಜನಿಕರ ಅಭಿಪ್ರಾಯ ಪಡೆದಿಲ್ಲ’


ಪ್ರಿಯಾ ಚೆಟ್ಟಿ

‘ಹೋರ್ಡಿಂಗ್ ಹಾಕುವುದಕ್ಕೆ ನಿರ್ಬಂಧ ವಿಧಿಸಿ ಹೈಕೋರ್ಟ್ ಈ ಹಿಂದೆ ತೀರ್ಪು ನೀಡಿತ್ತು. ಅಲ್ಲದೆ, ಹೋರ್ಡಿಂಗ್‌ಗೆ ಅವಕಾಶ ನೀಡಬೇಕೇ ಬೇಡವೇ ಎಂಬ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಸರ್ಕಾರ ಪಡೆದಿಲ್ಲ. ಬಿಬಿಎಂಪಿಯಲ್ಲಿ ಇದರ ವಿರುದ್ಧ ನಿರ್ಣಯ ಕೈಗೊಂಡಿದ್ದರೂ, ಈಗ ಮತ್ತೆ ಅವಕಾಶ ನೀಡಿರುವುದು ಸರಿಯಲ್ಲ’ ಎಂದು ‘ಹೆರಿಟೇಜ್ ಬೇಕು’ ಸ್ಥಾಪಕಿ ಪ್ರಿಯಾ ಚೆಟ್ಟಿ ಅಸಮಾಧಾನ ವ್ಯಕ್ತಪಡಿಸಿದರು.

‘ನಗರದ ಮೂಲಸ್ವರೂಪವನ್ನೇ ಹಾಳು ಮಾಡುವಂತಹ ಆದೇಶ ಇದು. ನಗರದಲ್ಲಿ ಅಪಘಾತ ಪ್ರಕರಣಗಳು ಹೆಚ್ಚಾಗಲೂ ಇದು ಕಾರಣವಾಗಲಿದೆ’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

‘ಹೋರ್ಡಿಂಗ್‌ಗೆ ಅವಕಾಶ ಬೇಡ ಎಂಬುದರ ಬಗ್ಗೆ ಈ ಹಿಂದೆ ನಾವು ಆನ್‌ಲೈನ್‌ನಲ್ಲಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ್ದೆವು. 1,600ಕ್ಕೂ ಹೆಚ್ಚು ಜನ ಹೋರ್ಡಿಂಗ್‌ಗೆ ಅವಕಾಶ ಬೇಡ ಎಂದು ಒತ್ತಾಯಿಸಿದ್ದರು’ ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಸಹಾಯಧನ: ಬಿಪಿಎಲ್ ಕಾರ್ಡ್ ಕಡ್ಡಾಯ ಬೇಡ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ಸಹಾಯಧನ ₹2 ಸಾವಿರ ಪಡೆಯಲು ಬಿಪಿಎಲ್ ಕಾರ್ಡ್ ಕಡ್ಡಾಯಗೊಳಿಸಿರುವ ಷರತ್ತು ಮಾರ್ಪಡಿಸುವುದು ಸೂಕ್ತ ಎಂದು ಹೈಕೋರ್ಟ್ ಹೇಳಿದೆ.

ಮನೆಗೆಲಸದ ಕಾರ್ಮಿಕರಿಗೆ ಸಹಾಯಧನ ನೀಡುವ ವಿಷಯದಲ್ಲಿ ಸಲ್ಲಿಕೆಯಾಗಿರುವ ಮಧ್ಯಂತರ ಅರ್ಜಿ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಅಭಿಪ್ರಾಯಪಟ್ಟಿದೆ.

2021 ಮೇ 21ರ ಸರ್ಕಾರಿ ಆದೇಶದಂತೆ, ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬಗಳ ಕಾರ್ಮಿಕರಿಗೆ ಈ ಸಹಾಯಧನ ಯೋಜನೆ ಸೀಮಿತಗೊಳಿಸಲಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರದ ಮನೆಗೆಲಸದ ಹಲವು ಕಾರ್ಮಿಕರು ಇದ್ದಾರೆ ಎಂದು ಅರ್ಜಿದಾರರು ವಾದಿಸಿದರು.



‘ಕೋವಿಡ್ ಒಂದು ಮತ್ತು ಎರಡನೇ ಅಲೆಯಿಂದಾಗಿ ಸಾಕಷ್ಟು ಮನೆಗೆಲಸ ಕಾರ್ಮಿಕರು ಸಂಕಷ್ಟ ಅನುಭವಿಸಿದ್ದಾ-ರೆ. ಎಪಿಎಲ್ ಪಟ್ಟಿಯಲ್ಲಿದ್ದ ಹಲವರು ಈ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಬಡತನ ರೇಖೆಗಿಂತ ಕೆಳಕ್ಕೆ ಹೋಗಿದ್ದಾರೆ. ಹೀಗಾಗಿ ಷರತ್ತು ಮಾರ್ಪಡಿಸಬ-ಹುದು’ ಎಂದು ಪೀಠ ಹೇಳಿತು. ವಿಚಾರಣೆಯನ್ನು ಆ.6ಕ್ಕೆ ಮುಂದೂಡಿತು.

ಬೆಂಗಳೂರು ನಗರ ಜಿ.ಪಂ. ಗೆ ಎನ್‌ಎಬಿಎಲ್ ಪ್ರಮಾಣಪತ್ರ

ಬೆಂಗಳೂರು: ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆಗೆ ಅನುಸರಿಸಿರುವ ಮಾನದಂಡಗಳನ್ನು ಮೆಚ್ಚಿ, ರಾಷ್ಟ್ರೀಯ ಪರೀಕ್ಷಣಾ ಮತ್ತು ಅಂಶ ಶೋಧನಾ ಪ್ರಯೋಗಶಾಲೆಯ ಮಾನ್ಯತಾ ಮಂಡಳಿಯು (ಎನ್‌ಎಬಿಎಲ್) ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಗೆ ಪ್ರಮಾಣ ಪತ್ರ ನೀಡಿದೆ.

‘ಈ ಪ್ರಮಾಣಪತ್ರ ಪಡೆದ ರಾಜ್ಯದ ಮೊದಲ ಜಿಲ್ಲೆ ದಕ್ಷಿಣ ಕನ್ನಡ. ಬೆಂಗಳೂರು ನಗರ ಜಿಲ್ಲೆ ಎರಡನೆಯದು’ ಎಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

‘ನೀರಿನ ಪರೀಕ್ಷೆ ವೇಳೆ 16 ಮಾನದಂಡಗಳನ್ನು ಅನುಸರಿಸಲಾಗು-ತ್ತಿದೆ. ಕುಡಿಯುವ ನೀರು, ಅಂತರ್ಜಲ, ಕೊಳವೆ ಬಾವಿ ನೀರು, ಮೇಲ್ಮೈ ನೀರಿನಲ್ಲಿರುವ 16 ರೀತಿಯ ಗುಣಮಟ್ಟವನ್ನು ಪರಿಶೀಲಿಸಲಾಗುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

‘ಮನೆ, ಹೊಲ, ತೋಟಗಳಲ್ಲಿ ಹಾಗೂ ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಸುವ ಸಂದರ್ಭದಲ್ಲಿ ಈ ಪರೀಕ್ಷೆಯನ್ನು ಮಾಡಿಸಬಹುದು. ಪ್ರಸ್ತುತ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಪ್ರತಿ ಹಳ್ಳಿಗಳಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು ಪರೀಕ್ಷಿಸಲಾಗುತ್ತಿದೆ. ಅಶುದ್ಧ ಕುಡಿಯುವ ನೀರಿನಿಂದ ಬರುವ ರೋಗಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ’ ಎಂದೂ ಹೇಳಿದ್ದಾರೆ.

ಸಾರ್ವಜನಿಕರು ನೀರಿನ ಗುಣಮಟ್ಟ ಪರೀಕ್ಷೆ ಮಾಡಿಸಲು ₹650 ಶುಲ್ಕ ಪಾವತಿಸಬೇಕು ಎಂದು ಸಂಗಪ್ಪ ಹೇಳಿದ್ದಾರೆ.

ಹಿಂದೂ ಕಾರ್ಯಕರ್ತರ ಕೊಲೆಗೆ ಯಾರು ಹೊಣೆ: ಬಿಜೆಪಿ

ಬೆಂಗಳೂರು: ‘ಕೊರೊನಾ ವೈರಾಣು ಸೋಂಕಿನಿಂದ ಆದ ಸಾವುಗಳಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೊಣೆ ಆಗಬೇಕಾದರೆ, ನಿಮ್ಮ ಸರ್ಕಾರದ ಅವಧಿಯಲ್ಲಿ ನಡೆದ ಹಿಂದೂ ಕಾರ್ಯಕರ್ತರ ಕೊಲೆಗಳಿಗೆ ಯಾರು ಹೊಣೆ’ ಎಂದು ಬಿಜೆಪಿ ರಾಜ್ಯ ಘಟಕವು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದೆ.

ಸಿದ್ದರಾಮಯ್ಯ ಅವರ ಹೇಳಿಕೆಗೆ ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಪ್ರತಿಕ್ರಿಯೆ ನೀಡಿದ್ದು, ‘ಕೊರೊನಾ ವೈರಾಣು ಸೋಂಕಿನಿಂದ ಆದ ಸಾವುಗಳಿಗೆ ಮೋದಿ, ಯಡಿಯೂರಪ್ಪ ಹೊಣೆ ಎಂದು ಮೀರ್ ಸಾದಿಕ್ ಬೊಬ್ಬೆ ಹೊಡೆಯುತ್ತಾರೆ. ಕೋವಿಡ್ ಸಾಂಕ್ರಾಮಿಕ ತಡೆಗೆ ಸರ್ಕಾರ ಮಾಡಿದ ಪ್ರಯತ್ನಗಳೇಕೆ ಕಣ್ಣಿಗೆ ಕಾಣುತ್ತಿಲ್ಲ’ ಎಂದು ಕೇಳಲಾಗಿದೆ.

‘ಅಮಾಯಕ ಹಿಂದೂ ಕಾರ್ಯಕರ್ತರ ಸಾವಿಗೆ ಕಾರಣರಾದ ನಿಮ್ಮನ್ನು ಜನತೆ ಎಂದೂ ಕ್ಷಮಿಸುವುದಿಲ್ಲ’ ಎಂದು ಬಿಜೆಪಿ ಹೇಳಿದೆ.

‘ಜೆಡಿಎಸ್‌ಗೆ ಹೋದಾಗ ಯತ್ನಾಳ್ ಹಿಂದುತ್ವ ಎಲ್ಲಿತ್ತು?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಈಗ ಹಿಂದುತ್ವದ ಬಗ್ಗೆ ಮಾತನಾಡುತ್ತಿ-ರುವ ಬಸನಗೌಡ ಪಾಟೀಲ ಯತ್ನಾಳ್ ಈ ಹಿಂದೆ ಜೆಡಿಎಸ್‌ಗೆ ಹೋಗಿದ್ದಾಗ ಅವರ ಸಿದ್ಧಾಂತ ಎಲ್ಲಿ ಹೋಗಿತ್ತು’ ಎಂದು ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಪ್ರಶ್ನಿಸಿದರು.


ರೇಣುಕಾಚಾರ್ಯ

‘ಹಿಂದುತ್ವದ ಬಗ್ಗೆ ಯತ್ನಾಳ್ ಮಾತನಾಡುತ್ತಾರೆ. ಈಗ ಅವರಿಗೆ ಜ್ಞಾ-ನೋದಯವಾಗಿರಬೇಕು. ಯಡಿಯೂ-ರಪ್ಪನವರು ಬಿಜೆಪಿ ಕಟ್ಟಿ ಬೆಳೆಸಿದವರು. ಅವರ ರೀತಿಯ ಪಕ್ಷಾಂತರಿಯಲ್ಲ. ಜೆಡಿಎಸ್‌ಗೆ ಹೋದಾಗ ಹಿಂದುತ್ವ ನೆನ-ಪಿರಲಿಲ್ಲವೇ’ ಎಂದು ಕುಟುಕಿದರು.

ಯಡಿಯೂರಪ್ಪನವರ ನಾಯಕ-ತ್ವದಲ್ಲಿ ಹಲವಾರು ಶಾಸಕರು ಇದ್ದಾರೆ. ರಾಷ್ಟ್ರೀಯ ನಾಯಕರ ಮಾತಿಗೆ ಬೆಲೆ ಕೊಟ್ಟ ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಅವರ ಬಗ್ಗೆ ಮಾತನಾಡುವವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಯಡಿಯೂರ-ಪ್ಪನವರ ಬಗ್ಗೆ ಮಾತನಾಡಿದರೆ ನಿಮ್ಮ ವರ್ಚಸ್ಸು ಹಾಳಾಗುತ್ತದೆ ಎಂದು ಯತ್ನಾಳ್ ಅವರನ್ನು ಉದ್ದೇಶಿಸಿ ರೇಣುಕಾಚಾರ್ಯ ಹೇಳಿದರು.

‘ಸಚಿವ ಸ್ಥಾನಕ್ಕಾಗಿ ವರಿಷ್ಠರ ಮೇಲೆ ಒತ್ತಡ ತರುವುದಿಲ್ಲ. ಅದಕ್ಕಾಗಿ ದೆಹಲಿಗೂ ಹೋಗುವುದಿಲ್ಲ. ಒತ್ತಡ ಹೇರಿ ಸ್ಥಾನ ಪಡೆಯುವುದು ನನ್ನ ಜಾಯಮಾನವಲ್ಲ. ಉನ್ನತ ಸ್ಥಾನ ಸಿಗುವುದಿದ್ದರೆ ಅದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ’ ಎಂದರು.

ಸಂಪುಟದಲ್ಲಿ ಯಾರಿಗೆ ಸ್ಥಾನ ನೀಡಬೇಕು ಎಂಬುದು ಮುಖ್ಯಮಂತ್ರಿ ಪರಮಾಧಿಕಾರ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಕ್ಷದ ವರಿಷ್ಠರ ಜತೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆ. ಸಂಪುಟ ವಿಸ್ತರಣೆ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಈಗಾಗಲೇ ಸ್ಪಷ್ಟಪಡಿ-ಸಿದ್ದಾರೆ ಎಂದೂ ಅವರು ಹೇಳಿದರು.

‘ಪಾಲು ಕೇಳುವವರಿಗೆ ಸಚಿವ ಸ್ಥಾನ ಬೇಡ’


ಶಂಕರ ಬಿದರಿ

ಯೋಜನಾ ವೆಚ್ಚದ ಶೇಕಡ 45ರಿಂದ 50ರಷ್ಟು ಲಂಚ ಕೇಳುವವರು ಮತ್ತು ಯೋಜನೆಗಳಲ್ಲಿ ಪಾಲುದಾರರ-ನ್ನಾಗಿ ಮಾಡುವಂತೆ ಬೇಡಿಕೆ ಇಡುವವರಿಗೆ ರಾಜ್ಯದ ಹೊಸ ಸಂಪುಟ ರಚನೆ ವೇಳೆ ಸ್ಥಾನ ನೀಡಬಾರದು ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ ಬಿದರಿ ಅವರು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಆರ್‌ಎಸ್‌ಎಸ್ ಮುಖಂಡರನ್ನು ಆಗ್ರಹಿಸಿದ್ದಾರೆ.

ಶುಕ್ರವಾರ ಟ್ವೀಟ್ ಮಾಡಿರುವ ಅವರು, ‘ಏನೋ ಒಂದು ಒಳ್ಳೆಯದಾಗಿದೆ. ಇನ್ನು ನಿಮ್ಮದೇ ಮೂಲಗಳಿಂದ ಮಾಹಿತಿ ಪಡೆದು ಪರಿಶೀಲಿಸಿ. ಯೋಜನಾ ವೆಚ್ಚದಲ್ಲಿ ಶೇ 45ರಿಂದ 50ರಷ್ಟು ಕೇಳುವವರು ಮತ್ತು ಅದೇ ಯೋಜನೆಗಳಲ್ಲಿ ತಮ್ಮನ್ನೂ ಪಾಲುದಾರರನ್ನಾಗಿ ಮಾಡುವಂತೆ ಬೇಡಿಕೆ ಇಡುವವರನ್ನು ಸಂಪುಟಕ್ಕೆ ಸೇರಿಸಬೇಡಿ. ಅದು ನೀವು ಕರ್ನಾಟಕದ ಒಳಿತಿಗಾಗಿ ಮಾಡುವ ಕೆಲಸವಾಗುತ್ತದೆ’ ಎಂದು ಒತ್ತಾಯಿಸಿದ್ದಾರೆ.

‘ಈಶ್ವರಪ್ಪರನ್ನು ಡಿಸಿಎಂ ಮಾಡಿ’

‘ಬಿ.ಎಸ್.ಯಡಿಯೂರಪ್ಪ ಅವರಂತೆಯೇ ಕೆ.ಎಸ್.ಈಶ್ವರಪ್ಪ ಅವರೂ ರಾಜ್ಯದಲ್ಲಿ ಬಿಜೆಪಿಯನ್ನು ಬೇರುಮಟ್ಟದಿಂದ ಸಂಘಟಿಸಿದ್ದಾರೆ. ಮೂರು ದಶಕದಿಂದ ಪಕ್ಷಕ್ಕಾಗಿ ದುಡಿದಿದ್ದಾರೆ. ಅವರನ್ನು ಉಪಮುಖ್ಯಮಂತ್ರಿಯಾಗಿ ಮಾಡಬೇಕು’ ಎಂದು ಸಂಗೊಳ್ಳಿ ರಾಯಣ್ಣ ಬ್ರಿಗೇಡ್‌ನ ವೀರೇಶ್ ಉಂಡೋಡಿ ಒತ್ತಾಯಿಸಿದ್ದಾರೆ.

‘ಪಕ್ಷದ ಸಂಘಟನೆಗೆ ಈಶ್ವರಪ್ಪ ಪಟ್ಟಿರುವ ಶ್ರಮವನ್ನು, ಯಡಿಯೂರಪ್ಪ-ನವರೇ ವಿದಾಯ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ರಾಜ್ಯದಲ್ಲಿ ಶೇ 55ರಷ್ಟಿರುವ ಹಿಂದುಳಿದ ವರ್ಗಗಳ ನಾಯಕರಾಗಿರುವ ಅವರಿಗೆ ಬಿಜೆಪಿಯು ಸೂಕ್ತ ಸ್ಥಾನ–ಮಾನ ನೀಡಬೇಕು’ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

‘ಈಶ್ವರಪ್ಪನವರ ಅರ್ಹತೆಗೆ ಸಿ.ಎಂ ಸ್ಥಾನ ನೀಡಬೇಕಾಗಿತ್ತು. ಆದರೆ, ಲಿಂಗಾಯತ ಸಮುದಾಯದವರಿಗೆ ನೀಡಲಾಯಿತು. ಇದನ್ನು ಸ್ವಾಗತಿಸುತ್ತೇವೆ. ಈಗ ಡಿಸಿಎಂ ಮಾಡಿ ಕುರುಬ ಸಮುದಾಯಕ್ಕೆ ನ್ಯಾಯ ಒದಗಿಸಿಕೊಡಬೇಕು’ ಎಂದಿದ್ದಾರೆ.



ಪ್ರಧಾನಿ ಭೇಟಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದರು –ಪಿಟಿಐ ಚಿತ್ರ

ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಪಿಐಬಿಯೂ ಪ್ರತಿವಾದಿ!

ಮಾನಹಾನಿ: ತಡೆಯಾಜ್ಞೆ ತಂದ ರೇಣುಕಾಚಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಸಿ.ಡಿ ಅಥವಾ ಮಾಹಿತಿಯ ಆಧಾರದಲ್ಲಿ ತಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ತರುವಂತಹ ಮಾನಹಾನಿಕರ ವರದಿ ಪ್ರಕಟಿಸಬಾರ-ದು ಎಂದು ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾಧ್ಯಮಗಳ ವಿರುದ್ಧ ನ್ಯಾಯಾಲಯದಿಂದ ಪ್ರತಿಬಂ-ಧಕಾಜ್ಞೆ ಪಡೆದುಕೊಂಡಿದ್ದಾರೆ.

ಸಿ.ಡಿ ಒಂದನ್ನು ಬಳಸಿಕೊಂಡು ತಮ್ಮ ವಿರುದ್ಧ ವರದಿ ಪ್ರಕಟಿಸಲು ಸಂಚು ನಡೆದಿದ್ದು, ಇದರಿಂದ ತಮ್ಮ ವರ್ಚಸ್ಸಿಗೆ ಕುಂದುಂಟಾಗಲಿದೆ ಎಂದು ದೂರಿ ರೇಣುಕಾಚಾರ್ಯ ಅವರು ನಗರದ 20ನೇ ಹೆಚ್ಚುವರಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಜುಲೈ 26ರಂದು ಅರ್ಜಿ ಸಲ್ಲಿಸಿದ್ದರು. ಪ್ರತಿವಾದಿಗಳ ಗೈರಿನಲ್ಲೇ ನ್ಯಾಯಾಲಯವು ಜುಲೈ 28ರಂದು ಮಧ್ಯಂತರ ಪ್ರತಿಬಂಧಕಾಜ್ಞೆ ನೀಡಿದೆ.

ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿವಿಧ ದಿನಪತ್ರಿಕೆಗಳು, ಸಂಜೆ ಪತ್ರಿಕೆಗಳು, ಸುದ್ದಿ ವಾಹಿನಿಗಳು, ವೆಬ್ ಸೈಟ್‌ಗಳು, ಫೇಸ್ ಬುಕ್ ಪುಟಗಳು, ಯೂ ಟ್ಯೂಬ್ ಚಾನೆಲ್‌ಗಳು, ಟ್ವಿಟರ್ ಸೇರಿದಂತೆ 71 ಮಾಧ್ಯಮ ಸಂಸ್ಥೆಗಳನ್ನು ಪ್ರತಿವಾ-ದಿಗಳನ್ನಾಗಿ ಹೆಸರಿಸಲಾಗಿದೆ. ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ವಾರ್ತಾ ಮಾಹಿತಿ ಬ್ಯೂರೊ (ಪಿಐಬಿ) ಅನ್ನೂ ಪ್ರತಿವಾದಿ ಎಂದು ಅರ್ಜಿಯಲ್ಲಿ ಹೆಸರಿಸಲಾಗಿದೆ.

‘ಸಿ.ಡಿ ಆಧಾರದಲ್ಲಿ ಮಾನಹಾನಿಕರ ವರದಿ ಪ್ರಕಟಿಸುವ ಸಾಧ್ಯತೆ ಇದೆ. ಜುಲೈ 21ರಂದು ಕೆಲವು ಮಾಧ್ಯಮಗಳು ಈ ಕುರಿತು ತಮ್ಮ ಹೆಸರನ್ನು ಉಲ್ಲೇಖಿಸಿ ವರದಿ ಮಾಡಿವೆ. ಪ್ರತಿವಾದಿಗಳು ತಮ್ಮ ತೇಜೋವಧೆ ಮಾಡುವ ಸಾಧ್ಯತೆ ಇದೆ. ಸಿ.ಡಿ ಆಧಾರದಲ್ಲಿ ವರದಿ ಪ್ರಕಟವಾದರೆ ಅಥವಾ ಪ್ರಸಾರ ಮಾಡಿದರೆ ಸಾರ್ವಜನಿಕ ಜೀವನದಲ್ಲಿರುವ ತಮ್ಮ ವ್ಯಕ್ತಿತ್ವದ ಘನತೆಗೆ ಧಕ್ಕೆಯಾಗಲಿದೆ’ ಎಂದು ರೇಣುಕಾಚಾರ್ಯ ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ 20ನೇ ಹೆಚ್ಚುವರಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ನಿಂಗೌಡ ಬಿ. ಪಾಟೀಲ್ ಅವರು ಮಧ್ಯಂತರ ಪ್ರ-ತಿಬಂಧಕಾಜ್ಞೆ ನೀಡಿ ಜುಲೈ 28ರಂದು ಆದೇಶ ಹೊರಡಿಸಿದ್ದಾರೆ.

‘ತಮ್ಮ ವಿರುದ್ಧ ಷಡ್ಯಂತ್ರ’

ತಮ್ಮ ವಿರುದ್ಧ ಕೆಲವರು ಷಡ್ಯಂತ್ರ ಮಾಡಿದ್ದಾರೆ. ಮಹಾ-ನುಭಾವರೊಬ್ಬರು ಈ ಬಗ್ಗೆ ಮಾಧ್ಯಮ ಪ್ರತಿನಿಧಿಗಳ ಬಳಿ ಏನು ಹೇಳಿದ್ದರು ಎಂಬುದು ಗೊತ್ತಿದೆ ಎಂದು ರೇಣುಕಾಚಾರ್ಯ, ಯಾರ ಹೆಸರನ್ನೂ ಉಲ್ಲೇಖಿಸದೆ ಆರೋಪಿಸಿದರು.

ಪ್ರತಿಬಂಧಕಾಜ್ಞೆ ಕುರಿತು ಪ್ರತಿಕ್ರಿಯಿಸಿದ ಅವರು, ‘ನಡೆಯುವ ಮನುಷ್ಯ ಎಡುವುವುದು ಸಹಜ. ನಾನು ಏನಾದರೂ ತಪ್ಪು ಮಾಡಿದ್ದರೆ ಅದನ್ನು ಕೇಳಬೇಕಾದವರು ನನ್ನ ಕುಟುಂಬದವರು’ ಎಂದರು.

‘ನಾನು ಯಾವುದೇ ತಪ್ಪು ಮಾಡಿಲ್ಲ. ಆದರೂ, ತಂತ್ರಜ್ಞಾನದ ಯುಗದಲ್ಲಿ ಗ್ರಾಫಿಕ್ ಬಳಸಿ ಏನಾದರೂ ಸೃಷ್ಟಿಸಬಹುದು. ರೇಣುಕಾಚಾರ್ಯ ಸಿ.ಡಿ ಇದೆ ಎಂದು ಮಹಾನುಭಾವನೊಬ್ಬ ‘ಬ್ಲಾಕ್‌ಮೇಲ್’ ಮಾಡುತ್ತಿದ್ದಾರೆ. ಅದಕ್ಕೆಲ್ಲ ನಾನು ಬಗ್ಗುವುದಿಲ್ಲ’ ಎಂದರು.

ಬಿಜೆಪಿ, ಕಾಂಗ್ರೆಸ್‌ಗೆ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನೆ

ಮೇಕೆದಾಟು ವಿಚಾರದಲ್ಲಿ ಯಾರ ಪರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಸಮಾನಾಂತರ ಅಣೆಕಟ್ಟೆ ನಿರ್ಮಾಣದ ವಿಚಾರದಲ್ಲಿ ಕರ್ನಾಟಕದ ಪರ ಇರುವವರು ಯಾರು? ಎಂದು ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಕುರಿತು ಶುಕ್ರವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಮೇಕೆದಾಟು ಯೋಜನೆ ವಿಷಯದಲ್ಲಿ ತಮಿಳುನಾಡಿನ ವಿರೋಧ ಪಕ್ಷ ಎಐಎಡಿಎಂಕೆ ಕೇಂದ್ರದ ಎನ್‌ಡಿಎ ಸರ್ಕಾರದ ಮೇಲೆ ಒತ್ತಡ ತರುತ್ತಿದೆ. ಅಲ್ಲಿನ ಆಡಳಿತ ಪಕ್ಷ ಡಿಎಂಕೆ ನಾಯಕರು ಕಾಂಗ್ರೆಸ್ ಮೇಲೆ ಒತ್ತಡ ತರುತ್ತಿದ್ದಾರೆ. ಇಲ್ಲಿ ಬಿಜೆಪಿ, ಕಾಂಗ್ರೆಸ್ ಎರಡೂ ಪಕ್ಷಗಳು ಯೋಜನೆ ಜಾರಿಯಾಗಲೇಬೇಕು ಎನ್ನುತ್ತಿವೆ. ಯಾರು? ಯಾರ ಪರ ಇದ್ದೀರಿ’ ಎಂದು ಕೇಳಿದ್ದಾರೆ.


ಎಚ್‌.ಡಿ. ಕುಮಾರಸ್ವಾಮಿ

ತಮಿಳುನಾಡಿನ ಆಡಳಿತ ಮತ್ತು ವಿರೋಧ ಪಕ್ಷಗಳು ಮೇಕೆದಾಟು ಯೋಜನೆ ವಿರೋಧಿಸುತ್ತಿವೆ. ಅಲ್ಲಿನ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಉಪವಾಸ ಸತ್ಯಾಗ್ರಹ ನಡೆಸಲು ಹೊರಟಿದ್ದಾರೆ. ಮೇಕೆದಾಟು ವಿಚಾರದಲ್ಲಿ ತಮಿಳುನಾಡಿನಲ್ಲಿ ರಾಜಕೀಯ ಒಗ್ಗಟ್ಟು ಪ್ರದರ್ಶನವಾ-ದರೆ, ರಾಜ್ಯದಲ್ಲಿ ಒಡಕು ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಹೇಳಿದ್ದಾರೆ.

‘ಅಣೆಕಟ್ಟೆ ನಿರ್ಮಾಣ ಖಚಿತ ಎಂದು ಮುಖ್ಯಮಂತ್ರಿ ಒಬ್ಬರೇ ಹೇಳಿದರೆ ಸಾಲದು. ಆಡಳಿತ ಅದರ ಪರ ಇರುವುದಾಗಿ ಕೆಲಸದ ಮೂಲಕ ಸಾಬೀತುಪಡಿಸಬೇಕು. ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೂಡ ಹೀಗೆಯೇ ಹೇಳುತ್ತಿದ್ದರು. ಆದರೆ, ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿಯನ್ನೇ ಪಡೆಯಲಿಲ್ಲ. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಹಾಗೆ ಮಾಡಬಾರದು. ಕೇಂದ್ರ ಸರ್ಕಾರದ ಮನವೊಲಿಸಿ ಯೋಜನೆಗೆ ಅನುಮತಿ ಪಡೆಯಬೇಕು’ ಎಂದು ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

‘ಮೀಸಲಾತಿ: ಬಿಜೆಪಿ ಪಾಠ ಬೇಕಿಲ್ಲ’

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯ ಕಾಲೇಜುಗಳಲ್ಲಿನ ಶೇ 15ರಷ್ಟು ಸೀಟುಗಳನ್ನು ಅಖಿಲ ಭಾರತ ಕೋಟಾದಡಿ ಕಸಿದುಕೊಂಡಿರುವ ಕೇಂದ್ರ ಸರ್ಕಾರ, ನ್ಯಾಯಾಲಯದ ಸಂಭಾವ್ಯ ಚಾಟಿಯಿಂದ ಪಾರಾಗಲು ಹಿಂದುಳಿದ ವರ್ಗದವರಿಗೆ ಶೇ 27ರಷ್ಟು ಮೀಸಲಾತಿ ಘೋಷಿಸಿದೆ. ಮೀಸಲಾತಿ ವಿರೋಧಿಸುತ್ತಲೇ ಬಂದ ಬಿಜೆಪಿಯವರಿಂದ ನಮಗೆ ಪಾಠ ಬೇಕಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

‘ಮೀಸಲಾತಿ ನೀಡುವ ಮೋದಿ ಸರ್ಕಾರದ ತೀರ್ಮಾನವನ್ನು ಸ್ವಾಗ-ತಿಸುತ್ತೇನೆ. ಹಿಂದುಳಿದ ಜಾತಿಯವರ ಬಗ್ಗೆ ಪ್ರಧಾನಿಯವರ ಈ ಕಾಳಜಿಯ ನಾಟಕಕ್ಕೆ ಉತ್ತರಪ್ರದೇಶ ವಿಧಾನಸಭಾ ಚುನಾವಣೆ ಕಾರಣವಾಗಿರಬ-ಹುದು’ ಎಂದು ಕುಟುಕಿದ್ದಾರೆ.


ಸಿದ್ದರಾಮಯ್ಯ

‘ರಾಜ್ಯದ ವೈದ್ಯಕೀಯ ಕಾಲೇಜುಗಳಿಂದ ಶೇ 15ರಷ್ಟು ಸೀಟುಗಳನ್ನು ಅಖಿಲ ಭಾರತ ಕೋಟಾಕ್ಕಾಗಿ ಕಿತ್ತು-ಕೊಂಡಿರುವುದೇ ಮಹಾದ್ರೋಹ. ಕೇಂದ್ರದ ಈ ತೀರ್ಮಾನವನ್ನು ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ಆಗಸ್ಟ್ 3ರಂದು ಇದು ವಿಚಾರಣೆಗೆ ಬರಲಿದೆ. ಈ ವೇಳೆ ಮುಖ ಉಳಿಸಿಕೊಳ್ಳಲು ಮುಂದಾಗಿರುವ ಕೇಂದ್ರ ಸರ್ಕಾರ, ಹಿಂದುಳಿದವರಿಗೆ ಮೀಸಲಾತಿ ಘೋಷಿಸುವ ತೀರ್ಮಾನ ಕೈಗೊಂಡಿದೆ ಎಂದು ಅವರು ಹೇಳಿದ್ದಾರೆ.

ಪ್ರಧಾನಿಯವರಿಗೆ ಜುಲೈ 3ರಂದು ಪತ್ರ ಬರೆದಿದ್ದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ, ‘ಮೀಸಲಾತಿ ನಿರಾಕರಿಸಿದ್ದರಿಂದಾಗಿ 2017ರಿಂದ 11,000 ವಿದ್ಯಾರ್ಥಿಗಳು ಅವಕಾಶ ವಂಚಿತರಾಗಿದ್ದಾರೆ’ ಎಂದು ಉಲ್ಲೇಖಿ-ಸಿದ್ದರು ಎಂದಿದ್ದಾರೆ.

‘ಆರ್‌ಎಸ್‌ಎಸ್ ಪ್ರಮುಖರಾದ ಮೋಹನ್ ಭಾಗವತ ಅವರು ಮೀಸಲಾತಿಯನ್ನು ಬಹಿರಂಗವಾಗಿಯೇ ವಿರೋಧಿಸಿದ್ದರು. ದಿವಂಗತ ನ್ಯಾಯಮೂರ್ತಿ ರಾಮಾ ಜೋಯಿಸ್ ಅವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ವಿರೋಧಿಸಿ ನ್ಯಾಯಾಲಯಕ್ಕೆ ಹೋಗಿದ್ದರು. ಹುಟ್ಟಿನಿಂದಲೇ ಮೀಸಲಾತಿ ವಿರೋಧಿಯಾದ ಬಿಜೆಪಿ ಈಗ ರಾಜಕೀಯ ಅನಿವಾರ್ಯಕ್ಕೆ ಸಿಕ್ಕಿ ಮೀಸಲಾತಿಯನ್ನು ಒಪ್ಪಿಕೊಂಡಿದೆ ಅಷ್ಟೆ. ನಮ್ಮದು ಬದ್ಧತೆ, ಬಿಜೆಪಿಯದ್ದು ಆತ್ಮವಂಚನೆಯ ನಾಟಕ’ ಎಂದೂ ಅವರು ಪ್ರತಿಪಾದಿಸಿದ್ದಾರೆ.

ಮಂಗಗಳ ಹತ್ಯೆ: ವಿಚಾರಣೆ ಕೈಗೆತ್ತಿಕೊಂಡ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿ ನಡೆದಿದ್ದ ಮಂಗಗಳ ಮಾರಣಹೋಮದ ಬಗ್ಗೆ ಹೈಕೋರ್ಟ್ ಶುಕ್ರವಾರ ಸ್ವಯಂ ಪ್ರೇರಿತ ಸಾರ್ವಜನಿಕ ಅರ್ಜಿ ದಾಖಲಿಸಿಕೊಂಡಿದೆ. ಮಂಗಗಳ ಹತ್ಯೆ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾ-ಗಿದ್ದ ವರದಿ ನೋಡಿ ಕಳವಳಗೊಂಡಿದ್ದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರು ವಿಚಾರಣೆ ಕೈಗೆತ್ತಿಕೊಂ-ಡಿದ್ದಾರೆ.

‘ಮಾಧ್ಯಮಗಳ ವರದಿ ಪ್ರಕಾರ, ಮಂಗಗಳನ್ನು ಹತ್ಯೆ ಮಾಡಿ ಚೀಲದಲ್ಲಿ ತುಂಬಿ ಬಿಸಾಡಲಾಗಿದೆ. ಸುಪ್ರೀಂ ಕೋರ್ಟ್ ಆದೇಶಗಳ ಆಧಾರದಲ್ಲಿ ಈ ಪ್ರಕರಣದ ವಿಚಾರಣೆ ಅಗತ್ಯವಿದೆ. ಈ ಘಟನೆಯು ಪ್ರಾಣಿಗಳ ಬದುಕುವ ಹಕ್ಕನ್ನು ಕಸಿದುಕೊಂಡಿದೆ’ ಎಂದು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪ-ಟ್ಟಿತು.

ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಹಾಸನದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಪ್ರಾಣಿ ಕಲ್ಯಾಣ ಮಂಡಳಿಯನ್ನು ಪ್ರತಿವಾದಿಗಳಾಗಿಸ-ಲು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಪೀಠ ನಿರ್ದೇಶನ ನೀಡಿತು.

‘ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ 1960ರ ಸೆಕ್ಷನ್ 3 ಮತ್ತು 11ರ ಸಂಪೂರ್ಣ ಉಲ್ಲಂಘನೆಯಾಗಿದೆ. ಮಂಗಗಳ ಹತ್ಯೆಗೆ ಕಾರಣರಾದವರ ವಿರುದ್ಧ ಕ್ರಮ ಜರುಗಬೇಕು. ಇಂತಹ ಅಮಾನವೀಯ, ಆಘಾತಕಾರಿ ಘಟನೆಗಳು ಮರುಕಳಿಸದಂತೆ ತಡೆಗಟ್ಟಲು ಮಾರ್ಗಸೂಚಿಗಳನ್ನು ರೂಪಿಸುವ ಅಗತ್ಯ ಇದೆ’ ಎಂದು ಪೀಠ ಹೇಳಿತು.

‘ಇಡೀ ಘಟನೆ ಮತ್ತು ಅದಕ್ಕೆ ಕಾರಣರಾದ ವ್ಯಕ್ತಿಗಳ ವಿರುದ್ಧ ಕೈಗೊಂಡ ಕ್ರಮಗಳ ಬಗ್ಗೆ ವರದಿ ಸಲ್ಲಿಸಲು ಹಾಸನ ಜಿಲ್ಲಾಧಿಕಾರಿಗೆ ಮಾಹಿತಿ ರವಾನಿಸುವಂತೆ ಸರ್ಕಾರದ ಪರ ವಕೀಲರಿಗೆ ಪೀಠ ನಿರ್ದೇಶನ ನೀಡಿತು. ಆಗಸ್ಟ್ 4ರಂದು ವರದಿಯನ್ನು ಸರ್ಕಾರದ ವಕೀಲರು ಮಂಡಿಸಬೇಕು’ ಎಂದು ತಿಳಿಸಿತು.

ಬೇಲೂರು ತಾಲ್ಲೂಕಿನ ಚೌಡನಹಳ್ಳಿ ರಸ್ತೆ ಬದಿಯಲ್ಲಿ ಬುಧವಾರ ರಾತ್ರಿ ಬಿಸಾಡಿದ್ದ ಚೀಲದಲ್ಲಿ 38 ಮೃತಪಟ್ಟ ಮಂಗಗಳು, ಸಾವು–ಬದುಕಿನ ನಡುವೆ ಸೆಣಸುತ್ತಿದ್ದ 15 ಮಂಗಗಳು ಕಂಡುಬಂದಿದ್ದವು.

ಆರ್‌.ಶಂಕರ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನ ಪರಿಷತ್ ಸದಸ್ಯ ಆರ್‌.ಶಂಕರ್ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು’ ಎಂದು ರಾಣೆಬೆನ್ನೂರು ಹಿತರಕ್ಷಣಾ ವೇದಿಕೆ ಅಧ್ಯಕ್ಷ ಜಗದೀಶ್ ಯಲಿಗಾರ್ ಒತ್ತಾಯಿಸಿದ್ದಾರೆ.

‘ಆರ್‌.ಶಂಕರ್ ಅವರ ತ್ಯಾಗದ ಫಲವಾಗಿ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಯಡಿಯೂರಪ್ಪ ಅವರ ನೇತೃತ್ವದಲ್ಲಿ ತೋಟಗಾರಿಕೆ ಮತ್ತು ರೇಷ್ಮೆ ಸಚಿವರಾಗಿಯೂ ಕಾರ್ಯ ನಿರ್ವಹಿಸಿರುವ ಶಂಕರ್ ಅವರಿಗೆ ಮತ್ತೊಮ್ಮೆ ಸಚಿವ ಸ್ಥಾನ ನೀಡಬೇಕು’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನೆಲಮಂಗಲ ತಾಲ್ಲೂಕು ಬ್ರಾಹ್ಮಣ ಮಹಾಸಭಾ ವತಿಯಿಂದ ರಾಮಮಂದಿರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಲಕ್ಷ್ಮೀಕಾಂತ ಅವರು ಬಡವರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಭಾಕರ್, ಉಪಾಧ್ಯಕ್ಷರಾದ ಮೋಹನ್, ರಾಮಪ್ರಸಾದ್, ತಾಲ್ಲೂಕು ಘಟಕದ ಅಧ್ಯಕ್ಷ ಜಗನ್ನಾಥ್, ವೆಂಕಟಸುಬ್ಬಯ್ಯ ಇದ್ದಾರೆ.

ಕಾಂಗ್ರೆಸ್‌ನಿಂದ ಲೋಕಾಯುಕ್ತರಿಗೆ ದೂರು

ರಸ್ತೆ ಕಾಮಗಾರಿಗಳಲ್ಲಿ ಅಕ್ರಮದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅತಿಯಾದ ಸಂಚಾರ ದಟ್ಟಣೆಯ 12 ಮಾರ್ಗಗಳಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಹೆಸರಿನಲ್ಲಿ ₹ 1,200 ಕೋಟಿ ವೆಚ್ಚದ ಯೋಜನೆಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಅವರಿಗೆ ಕಾಂಗ್ರೆಸ್ ದೂರು ನೀಡಿದೆ.

ಮಾಜಿ ಮೇಯರ್ ಎಂ. ರಾಮಚಂದ್ರಪ್ಪ ಅವರು ಪಕ್ಷದ ಪರವಾಗಿ ಲೋಕಾಯುಕ್ತರಿಗೆ ಶುಕ್ರವಾರ ದೂರು ಸಲ್ಲಿಸಿದ್ದಾರೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯನ್ನು ಪ್ರತಿವಾದಿ ಎಂದು ದೂರಿನಲ್ಲಿ ಹೆಸರಿಸಲಾಗಿದೆ.

‘ಮೈಸೂರು ರಸ್ತೆಯಿಂದ ತುಮಕೂರು ರಸ್ತೆ, ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆ, ಬಳ್ಳಾರಿ ರಸ್ತೆಯಿಂದ ಕೆ.ಆರ್‌.ಪುರ ರಸ್ತೆ, ಕೆ.ಆರ್‌.ಪುರ ರಸ್ತೆಯಿಂದ ಹೊಸೂರು ರಸ್ತೆಯ-ವರಿಗಿನ ‘ಲಿಂಕ್’ ರಸ್ತೆಗಳು, ನಗರದ ಒಳ ಭಾಗದಲ್ಲಿರುವ ರಾಜಾಜಿನಗರ, ಮೇಖ್ರಿ ರಸ್ತೆ, ಮೈಸೂರು ರಸ್ತೆ ಸೇರಿದಂತೆ 190 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ಬೃಹತ್ ಪ್ರಮಾಣದ ಅಕ್ರಮಕ್ಕೆ ಪ್ರಯತ್ನ ನಡೆಯುತ್ತಿದೆ’ ಎಂದು ಆರೋಪಿಸಲಾಗಿದೆ.

190 ಕಿ.ಮೀ. ಉದ್ದದ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕಾಮಗಾರಿಗಳಿಗೆ ಮೂರು ಪ್ಯಾಕೇಜ್‌ಗಳಲ್ಲಿ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ. ₹ 500 ಕೋಟಿ ರಸ್ತೆ ಅಭಿವೃದ್ಧಿಗೆ ಮತ್ತು ₹ 700 ಕೋಟಿ ನಿರ್ವಹಣೆಗೆ ಮೀಸಲಿಡಲಾಗಿದೆ. ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳನ್ನೇ ಮತ್ತೆ ಕೈಗೊಳ್ಳಲು ಹೊರಟಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸದ ಕೋಟ್ಯಂತರ ರೂಪಾಯಿ ಲೂಟಿಗೆ ಅವಕಾಶವಾಗಲಿದೆ ಎಂದು ದೂರಿದ್ದಾರೆ.

ಈಗ ಟೆಂಡರ್ ನಡೆಸುತ್ತಿರುವ ಕಾಮಗಾರಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಳ್ಳಲಾಗಿದೆ. ಆದರೂ, ಮತ್ತೆ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. ಕಳಪೆ ಕಾಮಗಾರಿ ನಡೆಸಿ ಕಪ್ಪು ಪಟ್ಟಿ-ಯಲ್ಲಿರುವ ಕೆಲವು ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲು ಟೆಂಡರ್ ದಾಖಲೆಗಳನ್ನು ತಿರುಚುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ. ಕಾಂಗ್ರೆಸ್ ಮುಖಂಡರಾದ ಮನೋಹರ್, ಸಲೀಂ ಇದ್ದರು.


ಈ ಕಾರಿಡಾರ್ ಕಾಮಗಾರಿಯ ಅಕ್ರಮದ ಬಗ್ಗೆ ‘ಪ್ರಜಾವಾಣಿ’ ಸರಣಿ ವರದಿಗಳನ್ನು ಪ್ರಕಟಿಸಿತ್ತು.

● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಡಿಜಿಟಲ್ ಕೌಶಲದ ಕೊರತೆಯಿಂದ ಮಹಿಳೆಯರು ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಹಾಗಾದರೆ ಡಿಜಿಟಲ್ ಅಂತರವನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ?...



ಸೆನ್ಸೆಕ್ಸ್	ನಿಫ್ಟಿ	₹/$
52,586 ▼	15,763 ▼	74.42 ▼

ಗಡಿ ಜಿಲ್ಲೆಗಳಲ್ಲಿ ಸೋಂಕು ದೃಢ ಪ್ರಮಾಣ ಏರಿಕೆ ● ಅಗತ್ಯ ಮುನ್ನೆಚ್ಚರಿಕೆ ಕ್ರಮಕ್ಕೆ ಸೂಚನೆ

ಬಂತೇ ಕೋವಿಡ್ 3ನೇ ಅಲೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಕದ ರಾಜ್ಯ ಕೇರಳದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದ ಬೆನ್ನಲ್ಲೇ, ಗಡಿ ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿದೆ. ಇದು ಮೂರನೇ ಅಲೆಯ ಮುನ್ಸೂಚನೆಯೇ ಎಂಬ ವಿಶ್ಲೇಷಣೆಗಳು ವೈದ್ಯಕೀಯ ವಲಯದಲ್ಲಿ ಶುರುವಾಗಿವೆ.

ಮೊದಲ ಎರಡು ಅಲೆಯಲ್ಲಿ ಕೇರಳ ಹಾಗೂ ಮಹಾರಾಷ್ಟ್ರದಲ್ಲಿ ಸೋಂಕು ಹೆಚ್ಚಳವಾದ ಬಳಿಕ ಕರ್ನಾಟಕದಲ್ಲೂ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿತ್ತು. ಹೀಗಾಗಿ, ಸಂಭಾವ್ಯ ಮೂರನೇ ಅಲೆಯ ಹೊತ್ತಿಗೆ ಗಡಿಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರಕ್ಕೆ ಈ ಹಿಂದೆಯೇ ಶಿಫಾರಸು ಮಾಡಿದ್ದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ, 'ನೆರೆಯ ರಾಜ್ಯಗಳಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆಯುತ್ತಿರುವಂತೆ ಮೂರನೇ ಅಲೆ ಎದುರಿಸಲು ಸನ್ನದ್ಧವಾಗಿರಬೇಕು' ಎಂದೂ ಸೂಚಿಸಿತ್ತು.

ಕಳೆದೊಂದು ತಿಂಗಳ ಹಿಂದಷ್ಟೇ ಕೋವಿಡ್ ಎರಡನೇ ಅಲೆಯು ರಾಜ್ಯದಲ್ಲಿ ನಿಯಂತ್ರಣಕ್ಕೆ ಬಂದಿದೆ. ಎಲ್ಲ ನಿರ್ಬಂಧಗಳನ್ನು ತೆರವು ಮಾಡಲಾಗಿದ್ದು, ಜನರ ಓಡಾಟ ಮಾಮೂಲಿಗೆ ಬಂದಿದೆ. ಎರಡನೇ ಅಲೆಯ ಅಪಾಯದ ಮುನ್ನೆಚ್ಚರಿಕೆಯನ್ನು ತಾಂತ್ರಿಕ ಸಲಹಾ ಸಮಿತಿ ನೀಡಿದ್ದರೂ ಆಗ, ಸರ್ಕಾರ ಎಚ್ಚೆತ್ತುಕೊಳ್ಳದೇ ಅಪಾಯವನ್ನು ರಾಜ್ಯಕ್ಕೆ ತಂದೊಟ್ಟಿತ್ತು. ಈಗಲೂ ತಾಂತ್ರಿಕ ಸಮಿತಿಯ ಸಲಹೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಆ ಕಾರಣಕ್ಕೆ ಅಗತ್ಯ ಸಿದ್ಧತೆ ಮಾಡಿಕೊಂಡಿಲ್ಲ ಎಂಬ ವಿಶ್ಲೇಷಣೆಗಳು ತಜ್ಞರ ಮಧ್ಯೆ ಶುರುವಾಗಿವೆ.

ಮೂರನೇ ಅಲೆಯು ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಕಾಣಿಸಿಕೊಳ್ಳುವ ಬಗ್ಗೆ ವೈದ್ಯಕೀಯ ತಜ್ಞರು ಲೆಕ್ಕಾಚಾರ ಹಾಕಿದ್ದರು. ಆ ವೇಳೆಗೆ ಶೇ 70ರಷ್ಟು ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಲ್ಲಿ ಸಾವು–ನೋವನ್ನು ತಡೆಯಲು ಸಾಧ್ಯ ಎಂದು ಹೇಳಿದ್ದರು. ಆದರೆ, ರಾಜ್ಯದಲ್ಲಿ ಈವರೆಗೆ ಶೇ 35.6ರಷ್ಟು ಮಂದಿ ಮಾತ್ರ ಒಂದು ಡೋಸ್ ಲಸಿಕೆ ಪಡೆದಿದ್ದಾರೆ. ಅವರಲ್ಲಿ ಶೇ 9.6ರಷ್ಟು ಮಂದಿ ಎರಡೂ ಡೋಸ್ ಲಸಿಕೆ ಪೂರ್ಣಗೊಳಿಸಿದ್ದಾರೆ.

ಕೇಂದ್ರ ಸರ್ಕಾರವು ಬೇಡಿಕೆಯಷ್ಟು ಲಸಿಕೆ ಪೂರೈಕೆ ಮಾಡದಿರುವುದರಿಂದ ಲಸಿಕಾ ಅಭಿಯಾನಕ್ಕೆ ಹಿನ್ನಡೆಯಾಗಿದ್ದು, ಕಳೆದೊಂದು ತಿಂಗಳಿನಿಂದ ಪ್ರತಿನಿತ್ಯ ಸರಾಸರಿ 2.5 ಲಕ್ಷ ಮಂದಿಗೆ ಲಸಿಕೆ ಒದಗಿಸಲಾಗುತ್ತಿದೆ.

9ನೇ ಪುಟ ನೋಡಿ

ಗಡಿ ಕಟ್ಟೆಚ್ಚರ: ಬೊಮ್ಮಾಯಿ ಸಭೆ ಇಂದು

'ಕೊರೊನಾ ಹರಡುವುದನ್ನು ತಡೆಯಲು ಆದ್ಯತೆಯ ಕೆಲಸವಾಗಿದ್ದು, ಜಿಲ್ಲಾಡಳಿತದ ಜತೆ ಶನಿವಾರ ಸಂಜೆ ವಿಡಿಯೊ ಸಂವಾದ ನಡೆಸುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರು ನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಮೈಸೂರು, ಚಾಮರಾಜನಗರ, ಕೊಡಗು, ಶಿವಮೊಗ್ಗ ಜಿಲ್ಲಾಡಳಿತದ ಜತೆ ಸಂಜೆ 5.30ಕ್ಕೆ ಸಭೆ ನಿಗದಿಯಾಗಿದೆ.

ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸುವ ಮೂಲಕ ಬೇರೆ ರಾಜ್ಯಗಳಿಂದ ಬರುವವರ ಮೇಲೂ ನಿಗಾ ವಹಿಸಲಾಗುವುದು. ರಾಜ್ಯ ಪ್ರವೇಶಿಸುವವರನ್ನು ಕಡ್ಡಾಯವಾಗಿ ಕೊರೊನಾ ಪರೀಕ್ಷೆಗೆ ಒಳಪಡಿಸಲು ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ರೈಲುಗಳ ಮೂಲಕ ಬರುವವರನ್ನೂ ನಿಲ್ದಾಣದಲ್ಲೇ ಪರೀಕ್ಷೆಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಉತ್ತರ ಕರ್ನಾಟಕ ಭಾಗದ ಗಡಿ ಜಿಲ್ಲೆಗಳಾದ ಬೆಳಗಾವಿ, ವಿಜಯಪುರ, ಬೀದರ್, ಬಳ್ಳಾರಿ, ರಾಯಚೂರು, ಕಲಬುರ್ಗಿ ಹಾಗೂ ಕೋಲಾರ ಗಡಿಗಳಲ್ಲೂ ಕಟ್ಟೆಚ್ಚರ ವಹಿಸಲು ನಿರ್ದೇಶನ ನೀಡಲಾಗುವುದು ಎಂದರು.

ನಿರ್ಬಂಧ ಜಾರಿ: ಡಿ.ಸಿಗೆ ಅಧಿಕಾರ

ಬೆಂಗಳೂರು: ಕೋವಿಡ್ ಪ್ರಕರಣಗಳು ಏರಿಕೆ ಕಂಡ ಬೆನ್ನಲ್ಲೇ ಸೋಂಕು ನಿಯಂತ್ರಿಸಲು ಅಗತ್ಯವಿರುವ ಹೆಚ್ಚುವರಿ ನಿರ್ಬಂಧಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೀಡಿ ಶುಕ್ರವಾರ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್ ಆದೇಶ ಹೊರಡಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,03,137 ▼	ಒಟ್ಟು ಸೋಂಕಿತರು (29,01,247 ನಿನ್ನೆಯ ವಿವರ)
23,478 ▲	ಸಕ್ರಿಯ ಪ್ರಕರಣಗಳು
28,43,110 ▲	ಗುಣಮುಖರಾದವರು
36,525 ▲	ಒಟ್ಟು ಸಾವು

ದಿನದ ಏರಿಕೆ		
ಹೊಸ ಪ್ರಕರಣ	1,890	▼
ಗುಣಮುಖ	1,631	▲
ಸಾವು	34	▼

ಪ್ರಜಾವಾಣಿ ಗ್ರಾಫಿಕ್ಸ್

ಸೋಂಕು ದೃಢ ಪ್ರಮಾಣವು ಶೇ 5ರ ಗಡಿ ದಾಟಿದರೆ ಆತಂಕ ಪಡಬೇಕಾಗುತ್ತದೆ. ಈ ಬಗ್ಗೆ ಈಗಲೇ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ
ಡಾ.ವಿ. ರವಿ
ವೈರಾಣು ತಜ್ಞ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಪದಕ ಪಥದಲಿ ಲವ್ಲಿನಾ, ಸಿಂಧು..



ಟೋಕಿಯೊ: ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಮತ್ತು ಬಾಕ್ಸರ್ ಲವ್ಲಿನಾ ಬೋರ್ಗೊಹೈನ್ ಅವರು ಭಾರತಕ್ಕೆ ಒಲಿಂಪಿಕ್ಸ್ ಪದಕದ ಭರವಸೆ ಮೂಡಿಸಿದ್ದಾರೆ. ಮಹಿಳೆಯರ ಸಿಂಗಲ್ಸ್‌ನಲ್ಲಿ ಜಪಾನ್‌ನ ಅಕಾನೆ ಯಾಮಗುಚಿ ವಿರುದ್ಧ ಗೆದ್ದು ಸಿಂಧು ಸೆಮಿಫೈನಲ್ ಪ್ರವೇಶಿಸಿದ್ದಾರೆ. ಲವ್ಲಿನಾ 69 ಕೆಜಿ ವಿಭಾಗದಲ್ಲಿ ಚೀನಾ ತೈಪೆಯ ನೀನ್ ಚಿನ್ ಚೆನ್ ಎದುರು ಜಯ ಗಳಿಸಿ ಅಂತಿಮ ನಾಲ್ಕರ ಘಟ್ಟಕ್ಕೆ ಲಗ್ಗೆ ಇರಿಸಿದ್ದಾರೆ.

ಪರಿಸರ ನಿಯಮ ಉಲ್ಲಂಘನೆ: ₹31 ಕೋಟಿ ದಂಡ

ಅಪಾರ್ಟ್‌ಮೆಂಟ್ ಕೆಡವಲು ಹಸಿರು ಪೀಠ ಆದೇಶ

ನವದೆಹಲಿ (ಪಿಟಿಐ): ಗೋದ್ರೆಜ್ ಪ್ರಾಪರ್ಟೀಸ್ ಲಿ. ಮತ್ತು ವಂಡರ್ ಪ್ರಾಜೆಕ್ಟ್ಸ್ ಡೆವಲಪ್‌ಮೆಂಟ್ ಪ್ರೈ.ಲಿ. ಬೆಂಗಳೂರಿನಲ್ಲಿ ಅಭಿವೃದ್ಧಿಪಡಿಸಿರುವ ಐಷಾರಾಮಿ, ಬಹುಮಹಡಿ ಕಟ್ಟಡಕ್ಕೆ ನೀಡಲಾಗಿದ್ದ ಪರಿಸರ ಅನುಮೋದನೆಯನ್ನು ರಾಷ್ಟ್ರೀಯ ಹಸಿರು ಪೀಠವು (ಎನ್‌ಜಿಟಿ) ಶುಕ್ರವಾರ ರದ್ದುಪಡಿಸಿದೆ. ಈ ಕಟ್ಟಡವನ್ನು ತಕ್ಷಣವೇ ಕೆಡವಲು ಆದೇಶಿಸಿದೆ.

ಅಪಾರ್ಟ್‌ಮೆಂಟ್ ನಿರ್ಮಾಣ ಮಾಡಿದ ಕಂಪನಿಗಳಿಗೆ ₹31 ಕೋಟಿ ದಂಡವನ್ನೂ ವಿಧಿಸಲಾಗಿದೆ. ಕಟ್ಟಡವನ್ನು ಕೆಡವಲು, ಈ ಪ್ರದೇಶವು ಮೂಲದಲ್ಲಿ ಹೇಗಿತ್ತೋ ಅದೇ ಸ್ಥಿತಿ ಮರುಸ್ಥಾಪಿಸಲು, ಕೈಕೊಂಡನಹಳ್ಳಿ ಕೆರೆಯ ಪ್ರದೇಶದ ಪುನಶ್ಚೇತನ ಮತ್ತು ಅರಣ್ಯೀಕರಣಕ್ಕೆ ಈ ಮೊತ್ತವನ್ನು ಬಳಸಬೇಕು ಎಂದು ಪೀಠವು ಸೂಚಿಸಿದೆ.

ಅಪಾರ್ಟ್‌ಮೆಂಟ್ ಯೋಜನೆಯನ್ನು ಕೈಗೆತ್ತಿಕೊಳ್ಳಲಾದ ಜಾಗದ ಮಧ್ಯದಲ್ಲಿದ್ದ ಮಳೆ ನೀರು ಚರಂಡಿಯ ದಿಕ್ಕು ಬದಲಿಸಲು ಅನುಮತಿ ನೀಡಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ₹10 ಲಕ್ಷ ದಂಡ ವಿಧಿಸಲಾಗಿದೆ.

2018ರ ಜನವರಿ 10ರಂದು ಯೋಜನೆಗೆ ಪರಿಸರ ಅನುಮತಿ ನೀಡಲಾಗಿತ್ತು. ಆ ಅನುಮತಿ ಈಗ ರದ್ದಾಗಿದೆ ಎಂದು ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯಲ್ ನೇತೃತ್ವದ ಪೀಠವು ಹೇಳಿದೆ.

ಬೆಂಗಳೂರು ನಿವಾಸಿ ಎಚ್.ಪಿ.ರಾಜಣ್ಣ ಅವರು ಯೋಜನೆಯ ವಿರುದ್ಧ ದೂರು ನೀಡಿದ್ದರು. ಬೆಂಗಳೂರು ನಗರ ಜಿಲ್ಲೆಯ ವರ್ತೂರು ಹೋಬಳಿಯ ಕಸವನಹಳ್ಳಿ ಗ್ರಾಮದಲ್ಲಿ ಗೋದ್ರೆಜ್ ರಿಫ್ಲೆಕ್ಷನ್ಸ್ ಎಂಬ ಹೆಸರಿನ ವಸತಿ ಸಂಕೀರ್ಣವು ನಿರ್ಮಾಣವಾಗಿದೆ.

ಮೇಲ್ಮನವಿ: 'ನಮ್ಮ ಪೂರ್ಣ ವಾದವನ್ನು ಗಣನೆಗೆ ತೆಗೆದುಕೊಳ್ಳದೆಯೇ ಆದೇಶ ನೀಡಲಾಗಿದೆ. ನಮ್ಮದು ಜವಾಬ್ದಾರಿಯುತ ಉದ್ಯಮ ಸಂಸ್ಥೆ. ಎಲ್ಲ ನಿಯಮಗಳನ್ನೂ ನಾವು ಪಾಲಿಸುತ್ತೇವೆ. ಈ ಯೋಜನೆಯಲ್ಲಿಯೂ ನಿಯಮಗಳನ್ನು ಪಾಲಿಸಲಾಗಿದೆ ಎಂಬ ವಿಶ್ವಾಸವಿದೆ. ಆದೇಶವನ್ನು ಪ್ರಶ್ನಿಸುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ಗೋದ್ರೆಜ್ ಪ್ರಾಪರ್ಟೀಸ್ ಲಿ. ನ ವಕ್ತಾರರು ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 3B

'ನೀರು ಹಾಳು ಮಾಡಿದವರು ನರಕಕ್ಕೆ'

ಕೊಳ, ಬಾವಿ ಅಥವಾ ಕೆರೆಗಳನ್ನು ಹಾಳು ಮಾಡುವ ಜನರು ನರಕಕ್ಕೆ ಹೋಗುತ್ತಾರೆ ಎಂದು ವೇದ ಮತ್ತು ಪುರಾಣಗಳನ್ನು ಉಲ್ಲೇಖಿಸಿ ಎನ್‌ಜಿಟಿ ಹೇಳಿದೆ. ಪ್ರತಿ ಮನುಷ್ಯ ದೇಹವು ಪಂಚಭೂತಗಳಿಂದಾಗಿದೆ. ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿಯು ಅದರಲ್ಲಿ ಒಳಗೊಂಡಿದೆ. ಪ್ರತಿ ಜೀವಿಯಲ್ಲಿಯೂ ಈ ಎಲ್ಲದರ ಸಮತೋಲನವನ್ನು ಪ್ರಕೃತಿಯು ರೂಪಿಸಿದೆ ಎಂಬುದನ್ನು ವೇದವು ತಿಳಿಸುತ್ತದೆ ಎಂದು ಪೀಠ ಹೇಳಿದೆ. ನೀರಿಗೆ ವೇದಗಳಲ್ಲಿ ಬಹುದೊಡ್ಡ ಸ್ಥಾನವನ್ನು ನೀಡಲಾಗಿದೆ ಎಂದೂ ತಿಳಿಸಿದೆ.



'ಗೋದ್ರೆಜ್ ರಿಫ್ಲೆಕ್ಷನ್ಸ್' ನಿರ್ಮಾಣ ಪ್ರದೇಶ

ವಾರದೊಳಗೆ ಸಂಪುಟ ವಿಸ್ತರಣೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದಲ್ಲಿ ಪ್ರವಾಹ ಮತ್ತು ಕೊರೊನಾ ತೃತೀಯ ಅಲೆಯ ಆತಂಕ ಇರುವುದರಿಂದ ಮುಂದಿನ ಒಂದು ವಾರದೊಳಗೆ ಸಚಿವ ಸಂಪುಟವನ್ನು ವಿಸ್ತರಿಸಲಾಗುವುದು ಎಂದು ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಪ್ರಮಾಣ ವಚನ ಸ್ವೀಕರಿಸಿದ ನಂತರ ಶುಕ್ರವಾರ ಮೊದಲ ಬಾರಿಗೆ ಇಲ್ಲಿಗೆ ಬಂದಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಹಾಗೂ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

ತ್ವರಿತವಾಗಿ ಸಂಪುಟ ವಿಸ್ತರಣೆ ಮಾಡಬೇಕೆಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಸಂಕ್ಷಿಪ್ತವಾಗಿ ಚರ್ಚೆ ನಡೆಸಲಾಗಿದೆ. ಸಂಪುಟದಲ್ಲಿ ಎಷ್ಟು ಜನ ಇರಲಿದ್ದಾರೆ, ಯಾರೆಲ್ಲ ಸೇರ್ಪಡೆ ಆಗಲಿದ್ದಾರೆ ಎಂಬ ಬಗ್ಗೆ ವಿವರವಾದ ಚರ್ಚೆ ನಡೆಸಲಾಗಿಲ್ಲ ಎಂದು ಅವರು ಹೇಳಿದರು.

3B ಪುಟ ನೋಡಿ

ಪೆಗಾಸಸ್: ನ್ಯಾಯಾಂಗ ತನಿಖೆ ಕೋರಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ

ಪತ್ರಕರ್ತರ ಅರ್ಜಿ ವಿಚಾರಣೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪೆಗಾಸಸ್ ಗೂಢಚರ್ಯೆಯನ್ನು ಸುಪ್ರೀಂ ಕೋರ್ಟ್‌ನ ಹಾಲಿ ಅಥವಾ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸ್ವತಂತ್ರ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಎಂದು ಹಿರಿಯ ಪತ್ರಕರ್ತರಾದ ಎನ್.ರಾಮ್ ಮತ್ತು ಶಶಿ ಕುಮಾರ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಮುಂದಿನ ವಾರ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಶುಕ್ರವಾರ ಒಪ್ಪಿಕೊಂಡಿದೆ.

ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಅರ್ಜಿಯ ವಿಚಾರವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಮತ್ತು ನ್ಯಾಯಮೂರ್ತಿ ಸೂರ್ಯ ಕಾಂತ್ ಅವರ ಪೀಠದ ಮುಂದೆ ಶುಕ್ರವಾರ ಮಂಡಿಸಿದರು.

'ನಾಗರಿಕರು, ರಾಜಕಾರಣಿಗಳು, ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು ಮತ್ತು ನ್ಯಾಯಾಲಯದ ಸಿಬ್ಬಂದಿಯನ್ನು ಗೂಢಚರ್ಯೆಗೆ ಗುರಿ ಮಾಡಲಾಗಿದೆ. ಈ ವಿಚಾರ ದೇಶದಾದ್ಯಂತ, ವಿಶ್ವದಾದ್ಯಂತ ಭಾರಿ ಸದ್ದು ಮಾಡುತ್ತಿದೆ. ಹೀಗಾಗಿ ಈ ಅರ್ಜಿಯನ್ನು ತಕ್ಷಣವೇ ವಿಚಾರಣೆಗೆ ಎತ್ತಿಕೊಳ್ಳಬೇಕು' ಎಂದು ಪ್ರತಿಪಾದಿಸಿದ್ದರು.

'ಈ ಅರ್ಜಿಯನ್ನು ತುರ್ತು ವಿಚಾರಣೆ ಕೋರಿಕೆ ಪಟ್ಟಿಗೆ ಸೇರಿಸಲು ನ್ಯಾಯಾಲಯದ ಸಿಬ್ಬಂದಿ ಸಿದ್ಧರಿರಲಿಲ್ಲ' ಎಂದು ಮತ್ತೊಬ್ಬ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಪೀಠದ ಮುಂದೆ ಹೇಳಿದರು.

ಅರ್ಜಿದಾರರ ಪರ ವಕೀಲರ ಪ್ರತಿಪಾದನೆಯನ್ನು ಕೇಳಿದ ಪೀಠವು, 'ಮುಂದಿನ ವಾರ ಅರ್ಜಿಯ ವಿಚಾರಣೆ ಕೈಗೆತ್ತಿಕೊಳ್ಳುತ್ತೇವೆ' ಎಂದು ಹೇಳಿತು.

ಸಿಪಿಎಂ ರಾಜ್ಯಸಭಾ ಸದಸ್ಯ ಜಾನ್ ಬ್ರಿಟಾಸ್ ಅವರು ಸುಪ್ರೀಂ ಕೋರ್ಟ್‌ಗೆ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಅರ್ಜಿಯು ಇನ್ನಷ್ಟೇ ಪೀಠದ ಮುಂದೆ ಬರಬೇಕಿದೆ.

ಇಸ್ರೇಲ್‌ನಲ್ಲಿ ತನಿಖೆ ಆರಂಭ (ಪಿಟಿಐ ವರದಿ): ಪೆಗಾಸಸ್ ಕುತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಮಾರಾಟ ಮಾಡಿರುವ ಎನ್‌ಎಸ್‌ಒ ಗ್ರೂಪ್ ಕಂಪನಿಯ ವಿರುದ್ಧ ಆದೇಶಿಸಲಾಗಿದ್ದ ತನಿಖೆಗೆ ಇಸ್ರೇಲ್‌ನ ತನಿಖಾ ಸಂಸ್ಥೆಗಳು ಶುಕ್ರವಾರ ಚಾಲನೆ ನೀಡಿವೆ.

'ಗೂಢಚರ್ಯೆ ತಂತ್ರಾಂಶ ಮಾರಾಟಕ್ಕೆ ನೀಡಲಾಗಿದ್ದ ಅನುಮತಿ ಮತ್ತು ಸೂಚಿಸಲಾಗಿದ್ದ ಷರತ್ತುಗಳನ್ನು ಎನ್‌ಎಸ್‌ಒ ಗ್ರೂಪ್ ಉಲ್ಲಂಘಿಸಿದೆಯೇ ಎಂಬುದನ್ನು ಶುಕ್ರವಾರ ಪರಿಶೀಲಿಸಲಾಗಿದೆ. ಇದಕ್ಕಾಗಿ ಎನ್‌ಎಸ್‌ಒ ಗ್ರೂಪ್ ಕಚೇರಿಯಲ್ಲಿ ಶೋಧ ಕಾರ್ಯ ನಡೆಸಲಾಗಿದೆ' ಎಂದು ತನಿಖಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಆದರೆ ಹೆಚ್ಚಿನ ವಿವರ ನೀಡಿಲ್ಲ.

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಇದೇ ಬುಧವಾರ ನಡೆಯಬೇಕಿದ್ದ ಮಾಹಿತಿ ತಂತ್ರಜ್ಞಾನ ಸಂಸದೀಯ ಸ್ಥಾಯಿ ಸಮಿತಿ ಸಭೆಗೆ ಹಾಜರಾಗಲು ನಿರಾಕರಿಸಿದ ಸರ್ಕಾರದ ವಿವಿಧ ಸಚಿವಾಲಯಗಳ ಕಾರ್ಯದರ್ಶಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಸಮಿತಿಯ ಅಧ್ಯಕ್ಷ ಶಶಿ ತರೂರ್ ಅವರು ಲೋಕಸಭೆಯ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಅವರನ್ನು ಒತ್ತಾಯಿಸಿ ಪತ್ರ ಬರೆದಿದ್ದಾರೆ. '28ರಂದು (ಬುಧವಾರ) ಸಭೆಗೆ ಹಾಜರಾಗುವಂತೆ ಗೃಹ ಸಚಿವಾಲಯ, ದೂರಸಂಪರ್ಕ ಸಚಿವಾಲಯ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿಗಳಿಗೆ ಜುಲೈ 20ರಂದೇ ನೋಟಿಸ್ ನೀಡಲಾಗಿತ್ತು. ಸಭೆಗೆ ಹಾಜರಾಗಲು ಮೂರೂ ಸಚಿವಾಲಯಗಳ ಕಾರ್ಯದರ್ಶಿಗಳು ಒಪ್ಪಿಗೆ ನೀಡಿದ್ದರು. ಆದರೆ 28ರ ಮಧ್ಯಾಹ್ನ 2.30ರ ನಂತರ ಸಭೆಗೆ ಹಾಜರಾಗಲು ಸಾಧ್ಯವಿಲ್ಲ ಎಂದು ಇ-ಮೇಲ್ ಮಾಡಿದ್ದಾರೆ. ಇದು ಸಂಸತ್ ನಿಂದನೆಗೆ ಅರ್ಹವಾದ ನಡವಳಿಕೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ' ಎಂದು ತರೂರ್ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಒಳ ಪುಟಗಳು



ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶನಿವಾರದ ಉಷ್ಣಾಂಶ
30° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಭಾಗಶಃ ಮೋಡ ಕವಿದ ವಾತಾವರಣ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಮಳೆ ಸಾಧ್ಯತೆ

ಹವಾಮಾನ

ಭಾನುವಾರ	ಸೋಮವಾರ	ಮಂಗಳವಾರ
30° 21°	29° 21°	29° 21°

ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಗಾಗಿ ತರಬೇತಿ ಮತ್ತು ಮಾರ್ಗದರ್ಶನಕ್ಕಾಗಿ ಅರ್ಹ ಮತ್ತು ಪ್ರತಿಭಾನ್ವಿತ ಅಭ್ಯರ್ಥಿಗಳಿಂದ ಕೃಷಿಕ್ ಸರ್ವೋದಯ ಫೌಂಡೇಷನ್ ಅರ್ಜಿ ಆಹ್ವಾನಿಸಿದೆ.

ತರಬೇತಿ ಪಡೆಯ ಬಯಸುವ ಅಭ್ಯರ್ಥಿಗಳ ಆಯ್ಕೆಗಾಗಿ ಪ್ರತಿಷ್ಠಾನವು ಆ.28ರಂದು ಪ್ರವೇಶ ಪರೀಕ್ಷೆಯನ್ನು ಆಯೋಜಿಸಿದೆ.

ಅರ್ಹ ಅಭ್ಯರ್ಥಿಗಳು ಆ.27ರೊಳಗೆ www.ksfkarnataka.com ನಲ್ಲಿ ಹೆಸರು ನೋಂದಾಯಿಸುವಂತೆ ಪ್ರಕಟಣೆ ತಿಳಿಸಿದೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವ ಜೊತೆಗೆ, ಕೋರ್ಸ್ ಶುಲ್ಕದಲ್ಲಿ ರಿಯಾಯಿತಿಯನ್ನು ಕೊಡಲಾಗುವುದು ಎಂದು ಫೌಂಡೇಷನ್ ಹೇಳಿದೆ.

ಮಾಹಿತಿಗೆ: 76250 00990.

ನಮ್ಮ ಮೆಟ್ರೊ: ಹೊರ ವರ್ತುಲ ರಸ್ತೆ–ವಿಮಾನ ನಿಲ್ದಾಣ ಮಾರ್ಗ

ಆರು ನಿಲ್ದಾಣಗಳ ವಿನ್ಯಾಸ ಬದಲು?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ಹೊರವರ್ತುಲ ರಸ್ತೆ ಮತ್ತು ವಿಮಾನ ನಿಲ್ದಾಣ ಸಂಪರ್ಕಿಸುವ ಎತ್ತರಿಸಿದ ಮಾರ್ಗದಲ್ಲಿ ಐದು ಮೆಟ್ರೊ ನಿಲ್ದಾಣಗಳ ಮೂಲ ವಿನ್ಯಾಸವನ್ನು ಬದಲಿಸಲು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಮುಂದಾಗಿದೆ.

ಎರಡೂ ಮಾರ್ಗಗಳನ್ನು ಸಂಪರ್ಕಿಸಲು ಒಂದೇ ಪ್ಲಾಟ್‌ಫಾರಂ ನಿರ್ಮಾಣ ಮಾಡುವ ರೀತಿಯಲ್ಲಿ ಆರು ನಿಲ್ದಾಣಗಳ ವಿನ್ಯಾಸ ಬದಲಾಗಲಿದೆ ಎಂದು ನಿಗಮದ ಮೂಲಗಳು ತಿಳಿಸಿವೆ.

ಎಲ್ಲವೂ ಯೋಜನೆಯಂತೆ ನಡೆದರೆ, ನಗರದಲ್ಲಿನ ಎತ್ತರಿಸಿದ ನಿಲ್ದಾಣಗಳಲ್ಲಿ ಈ ಮಾದರಿಯ ಪ್ಲಾಟ್‌ಫಾರಂಗಳು ಮೊದಲ ಬಾರಿ ನಿರ್ಮಾಣವಾದಂತಾಗುತ್ತದೆ. ಪೂರ್ವ–ಪಶ್ಚಿಮ ಕಾರಿಡಾರ್‌ನ (ಬೈಯಪ್ಪನ ಹಳ್ಳಿ ಮತ್ತು ಮೈಸೂರು ರಸ್ತೆ) ಸುರಂಗ ಮಾರ್ಗದಲ್ಲಿ ಕಬ್ಬನ್ ಪಾರ್ಕ್, ಸರ್. ಎಂ.ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣಗಳಲ್ಲಿ ಈ ರೀತಿಯ ಪ್ಲಾಟ್‌ಫಾರಂಗಳು ಈಗಾಗಲೇ ಇವೆ.

ವಿನ್ಯಾಸ ಬದಲಿಸಲು ಉದ್ದೇಶಿಸಿರುವ ನಿಲ್ದಾಣಗಳಲ್ಲಿ ಈಗಾಗಲೇ ಹೆಚ್ಚುವರಿಯಾಗಿ ಭೂಸ್ವಾಧೀನಪಡಿಸಿಕೊಳ್ಳುವ ಕಾರ್ಯವೂ ನಡೆದಿದೆ ಎಂದು ನಿಗಮದ ಮೂಲಗಳು ತಿಳಿಸಿವೆ.

'ಈಗ ಕಾರ್ಯಾಚರಣೆ ನಡೆಯುತ್ತಿರುವ ಎತ್ತರಿಸಿದ ಮಾರ್ಗದ ಎಲ್ಲ ನಿಲ್ದಾಣಗಳು ಎರಡು ಬದಿ ಪ್ಲಾಟ್‌ಫಾರಂಗಳನ್ನು ಹೊಂದಿವೆ. ಅಂದರೆ, ಈ ಪ್ಲಾಟ್‌ಫಾರಂಗಳಲ್ಲಿ ಯಾವುದಾದರೂ ಒಂದು ಮಾರ್ಗದ ಕಡೆಗೆ ಹೋಗುವ ರೈಲನ್ನು ಮಾತ್ರ ಹತ್ತಬಹುದು. ಮತ್ತೊಂದು ಮಾರ್ಗಕ್ಕೆ ಹೋಗಬೇಕೆಂದರೆ, ಮೆಟ್ಟಿಲುಗಳನ್ನು ಬಳಸಿಕೊಂಡು ಬೇರೆ ಪ್ಲಾಟ್‌ಫಾರಂಗೆ ಹೋಗಬೇಕು' ಎಂದು ನಿಗಮದ ಅಧಿಕಾರಿಯೊಬ್ಬರು ತಿಳಿಸಿದರು.

'ಕಬ್ಬನ್ ಪಾರ್ಕ್ ಅಥವಾ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣದ ಮಾದರಿಯಲ್ಲಿ, ವಿಮಾನ ನಿಲ್ದಾಣದ ಎತ್ತರಿಸಿದ ಮಾರ್ಗದಲ್ಲಿಯೂ ಇಂತಹ ಪ್ಲಾಟ್‌ಫಾರಂಗಳನ್ನು ನಿರ್ಮಿಸುವ ಉದ್ದೇಶವಿದೆ. ಪ್ಲಾಟ್‌ಫಾರಂನ ಎರಡೂ ಬದಿಯಲ್ಲಿ, ಎರಡು ಮಾರ್ಗದ ಕಡೆಗೆ ಸಾಗುವ ರೈಲುಗಳು ಲಭ್ಯವಾಗುವ ನಿಟ್ಟಿನಲ್ಲಿ ವಿನ್ಯಾಸ ಬದಲಿಸಲಾಗುತ್ತದೆ' ಎಂದರು.

'ಎಲ್ಲ ನಿಲ್ದಾಣಗಳ ಬಳಿಯೂ ಪಾದಚಾರಿ ಮೇಲ್ಸೇತುವೆ ನಿರ್ಮಿಸುವ ಪ್ರಸ್ತಾವವೂ ಇದೆ. ಆದರೆ, ಈ ವಿನ್ಯಾಸ ಇನ್ನೂ ಅಂತಿಮವಾಗಿಲ್ಲ' ಎಂದು ಅವರು ಹೇಳಿದರು.

ವಿನ್ಯಾಸ ಬದಲಾಗಲಿರುವ ನಿಲ್ದಾಣಗಳು
- ಕೊಡಿಗೆಹಳ್ಳಿ
- ಜಕ್ಕೂರು ಅಡ್ಡರಸ್ತೆ
- ಯಲಹಂಕ
- ಬಾಗಲೂರು ಅಡ್ಡರಸ್ತೆ
- ಬೆಟ್ಟಹಲಸೂರು
- ದೊಡ್ಡಜಾಲ

ಕಸಾಪ: ಪುಸ್ತಕಗಳಿಗೆ ರಿಯಾಯಿತಿ ಘೋಷಣೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಪ್ರಯುಕ್ತ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ತನ್ನ ಪ್ರಕಟಣೆಯ ಎಲ್ಲ ಪುಸ್ತಕಗಳಿಗೆ ಶೇ 10ರಿಂದ ಶೇ 75ರವರೆಗೆ ರಿಯಾಯಿತಿ ಘೋಷಿಸಿದೆ.

ಈ ಕೊಡುಗೆ ಆ.1ರಿಂದ ಆ.31ರವರೆಗೆ ಇರಲಿದೆ. ರಜಾ ದಿನಗಳು ಸೇರಿದಂತೆ ವಾರದ ಎಲ್ಲ ದಿನಗಳು ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಪರಿಷತ್ತಿನ ಪುಸ್ತಕ ಮಾರಾಟ ವಿಭಾಗದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ.

ಕನ್ನಡ ರತ್ನಕೋಶ, ಸಂಕ್ಷಿಪ್ತ ಕನ್ನಡ ನಿಘಂಟು ಹಾಗೂ ಸಂಕ್ಷಿಪ್ತ ಕನ್ನಡ ಇಂಗ್ಲಿಷ್ ನಿಘಂಟಿಗೆ ಶೇ 10ರಷ್ಟು ರಿಯಾಯಿತಿ ಸಿಗಲಿದೆ. ಬೃಹತ್ ಕನ್ನಡ–ಕನ್ನಡ ನಿಘಂಟು ಪರಿಷತ್ತಿನ ಸದಸ್ಯರಿಗೆ ಶೇ 25ರಷ್ಟು ಹಾಗೂ ಸದಸ್ಯತ್ವ ಹೊಂದಿಲ್ಲದವರಿಗೆ ಶೇ 20ರಷ್ಟು ರಿಯಾಯಿತಿ ನಿಗದಿಪಡಿಸಲಾಗಿದೆ. ಪರೀಕ್ಷಾ ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಉಳಿದ ಪುಸ್ತಕಗಳಿಗೆ ಶೇ 50ರಷ್ಟು ಹಾಗೂ ಸ್ಮರಣ ಸಂಚಿಕೆಗಳಿಗೆ ಶೇ 75ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಪುಸ್ತಕ ಮಾರಾಟಗಾರರು, ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು, ಸಂಶೋಧಕರು, ಜನಸಾಮಾನ್ಯರು ಈ ಯೋಜನೆಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮನವಿ ಮಾಡಿದ್ದಾರೆ.

ವಿಳಾಸ: ಪುಸ್ತಕ ಮಾರಾಟ ವಿಭಾಗ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.

ದೇಣಿಗೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಮೀಪದ ರಾಮೋಹಳ್ಳಿಯ ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ಪ್ರತಿಷ್ಠಾಪಿಸಲು ಸಿದ್ಧಾರೂಢ ಸ್ವಾಮಿ ಹಾಗೂ ರಾಮಕೃಷ್ಣ ಪರಮಹಂಸರ ಫೈಬರ್ ಮೂರ್ತಿಗಳನ್ನು ಬೆಳಗಾವಿಯಲ್ಲಿ ಮಾಡಿಸಲಾಗುತ್ತಿದೆ.

ಮೂರ್ತಿಗಳಿಗೆ ತಲಾ ₹1 ಲಕ್ಷ ವೆಚ್ಚ ತಗುಲಬಹುದು. ಭಕ್ತರು ಹಾಗೂ ಆಸಕ್ತರು ದೇಣಿಗೆ ನೀಡುವ ಮೂಲಕ ಮೂರ್ತಿಗಳನ್ನು ಪ್ರಾಯೋಜಿಸಲು ಕೋರಿದೆ.

ಬ್ಯಾಂಕ್ ಖಾತೆಯ ವಿವರ: ಶ್ರೀಸಿದ್ಧಾರೂಢ ಮಿಷನ್, ಕೆನರಾ ಬ್ಯಾಂಕ್, ರಾಮೋಹಳ್ಳಿ, ಖಾತೆ ಸಂಖ್ಯೆ–0673220000 6319, ಐಎಫ್‌ಎಸ್‌ಸಿ–CNRB 0010673 ಅಥವಾ 9731004160 ಸಂಖ್ಯೆಗೆ ಗೂಗಲ್ ಪೇ ಮೂಲಕವೂ ದೇಣಿಗೆ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೆರೆ, ರಾಜಕಾಲುವೆ ಒತ್ತುವರಿ ವಿರುದ್ಧ ಕ್ರಮಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಆದೇಶ

ಬಹುಮಹಡಿ ಕಟ್ಟಡಗಳ ಬುಡಕ್ಕೆ ಸಂಚಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆ ಸಂರಕ್ಷಣೆಗೆ ಸಂಬಂಧಿಸಿದ ಕಾನೂನುಗಳನ್ನು ಉಲ್ಲಂಘಿಸಿರುವ ಕಟ್ಟಡ ನೆಲಸಮಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನೀಡಿರುವ ಆದೇಶ, ಬೆಂಗಳೂರಿನಲ್ಲಿ ಕೆರೆ ಮತ್ತು ರಾಜಕಾಲುವೆಗಳ ಬದಿಯಲ್ಲಿ ನಿಯಮ ಉಲ್ಲಂಘಿಸಿ ನಿರ್ಮಾಣವಾಗಿರುವ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಬುಡ ಅಲುಗಾಡುವಂತೆ ಮಾಡಿದೆ.

'₹310 ಕೋಟಿ ವೆಚ್ಚದಲ್ಲಿ ಗೋದ್ರೆಜ್ ಪ್ರಾಪರ್ಟಿಸ್ ಲಿಮಿಟೆಡ್ ಮತ್ತು ವಂಡರ್ ಪ್ರಾಜೆಕ್ಟ್ಸ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ನಿರ್ಮಿಸಿರುವ ಬಹುಮಹಡಿ ಕಟ್ಟಡಕ್ಕೆ ನೀಡಲಾಗಿದ್ದ ಪರಿಸರ ಅನುಮೋದನೆ ರದ್ದುಪಡಿಸಿರುವ ಎನ್‌ಜಿಟಿ, ಕಟ್ಟಡ ನೆಲಸಮಕ್ಕೆ ಆದೇಶಿಸಿದೆ. ಬೆಂಗಳೂರಿನ ಮಟ್ಟಿಗೆ ಇದೊಂದು ಐತಿಹಾಸಿಕ ಆದೇಶವಾಗಿದ್ದು, ಕೆರೆ ಮತ್ತು ರಾಜಕಾಲುವೆಗಳ ಸಂರಕ್ಷಣೆ ವಿಷಯದಲ್ಲಿ ಇದೊಂದು ಮೈಲುಗಲ್ಲು' ಎಂದು ಪರಿಸರವಾದಿಗಳು ವಿಶ್ಲೇಷಿಸಿದ್ದಾರೆ.

'ಕಟ್ಟಡ ನೆಲಸಮ ಮಾತ್ರವಲ್ಲದೇ ಯೋಜನಾ ವೆಚ್ಚ (ಸ್ವಾಧೀನಾನುಭವ ಪತ್ರ ಪಡೆಯಲು ಕಂಪನಿಯೇ ದಾಖಲಿಸಿರುವ ಮೊತ್ತ) ₹310 ಕೋಟಿಯಲ್ಲಿ ಶೇ 10ರಷ್ಟನ್ನು ಅಂದರೆ ₹31 ಕೋಟಿಯನ್ನು ಕಟ್ಟಡ ನೆಲಸಮ ಮಾಡಿದ ಬಳಿಕ ಆ ಜಾಗವನ್ನು ಅದೇ ಸ್ಥಿತಿಗೆ ಮರುಸ್ಥಾಪಿಸಲು ಕಂಪನಿಗಳೇ ದಂಡವಾಗಿ ನೀಡಬೇಕು ಎಂದು ಆದೇಶಿಸಿದೆ. ಗೋದ್ರೆಜ್ ಕಂಪನಿಯ ಕಟ್ಟಡವಲ್ಲದೇ ಇತರ ಎರಡು ಕಟ್ಟಡಗಳನ್ನೂ ಎನ್‌ಜಿಟಿ ಉಲ್ಲೇಖಿಸಿದೆ. ಆ ಕಟ್ಟಡಗಳ ಮೇಲೂ ಈ ಆದೇಶದ ಪರಿಣಾಮ ಬೀರಲಿದೆ. ಪರಿಹಾರ ಮೊತ್ತವನ್ನು ಲೆಕ್ಕಾಚಾರ ಮಾಡುವಂತೆ ತಿಳಿಸಿದೆ' ಎಂದು ಅರ್ಜಿದಾರರ ಪರ ವಾದ ಮಂಡಿಸಿದ ಸುಪ್ರೀಂ ಕೋರ್ಟ್ ವಕೀಲ ರಾಮ್ ಪ್ರಸಾದ್ ತಿಳಿಸಿದರು.

'ಪರಿಸರ ಅನುಮೋದನೆ ನೀಡುವ ವಿಷಯದಲ್ಲಿ ಗೋದ್ರೆಜ್ ಕಂಪನಿ ಮಾತ್ರವಲ್ಲ. ಬಿಬಿಎಂಪಿ ಅಧಿಕಾರಿಗಳು ಒಟ್ಟುಗೂಡಿ ರಾಜಕಾಲುವೆಯ ದಿಕ್ಕು ಬದಲಿಸಿದ್ದಾರೆ ಎಂಬುದನ್ನು ಎನ್‌ಜಿಟಿ ಪರಿಗಣಿಸಿದೆ. ಒಟ್ಟು 230 ಪುಟಗಳ ಆದೇಶ ನೀಡಿದೆ' ಎಂದು ವಿವರಿಸಿದರು.

'ಪರಿಸರ ನಿಯಮಗಳ ಉಲ್ಲಂಘನೆ ಕಾರಣಕ್ಕೆ ಕಟ್ಟಡ ನೆಲಸಮಕ್ಕೆ ಆದೇಶ ನೀಡಿರುವ ಬೆಂಗಳೂರಿನ ಮೊದಲ ಪ್ರಕರಣ ಇದಾಗಿದೆ. ಮೂರು ದಿನಗಳಲ್ಲಿ 21 ಗಂಟೆಗಳ ಕಾಲ ವಾದ ಮಂಡಿಸಿ ಎನ್‌ಜಿಟಿಗೆ ಮನವರಿಕೆ ಮಾಡಿಸಲಾಯಿತು. ನಿರಂತರ ಹೋರಾಟಕ್ಕೆ ಜಯ ಸಿಕ್ಕಿದೆ. ಇದೇ ರೀತಿಯ ಉಲ್ಲಂಘನೆಗಳು ಕಸವನಹಳ್ಳಿ ಕೆರೆಯ ಸುತ್ತಲೂ ಆಗಿವೆ. ಇವುಗಳ ವಿರುದ್ಧವೂ ಕಾನೂನು ಹೋರಾಟ ಮುಂದುವರಿದಿದೆ' ಎಂದರು.

'ಆದೇಶವನ್ನು ಕೂಡಲೇ ಪಾಲನೆ ಮಾಡಬೇಕು'

'ಕೆರೆಗಳು ಮತ್ತು ಮೀಸಲು ವಲಯ ಸಂರಕ್ಷಣೆ ವಿಷಯದಲ್ಲಿ ಎನ್‌ಜಿಟಿ ಒಳ್ಳೆಯ ಆದೇಶವೊಂದನ್ನು ನೀಡಿದೆ' ಎಂದು ಜಲ ಸಂರಕ್ಷಣೆಗಾಗಿ ಒಕ್ಕೂಟದ ಸಂಚಾಲಕ ಸಂದೀಪ್ ಅನಿರುದ್ಧನ್ ಅಭಿಪ್ರಾಯಪಟ್ಟರು.

'ಪುಣೆ ಮತ್ತು ಮುಂಬೈ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಪರಿಸರ ನಿಯಮಗಳನ್ನು ಉಲ್ಲಂಘಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡಗಳು ನಿರ್ಮಾಣವಾಗಿವೆ. ಈ ರೀತಿಯ ಆದೇಶಗಳು ರಿಯಲ್ ಎಸ್ಟೇಟ್ ಉದ್ಯಮದವರಿಗೆ ಮತ್ತು ಅದಕ್ಕೆ ಸಹಕಾರ ನೀಡುವ ಆಡಳಿತ ವರ್ಗಕ್ಕೆ ಭಯ ಹುಟ್ಟಲಿದೆ' ಎಂದರು.

ಎನ್‌ಜಿಟಿ ಆದೇಶವನ್ನು ಕೂಡಲೇ ಪಾಲನೆ ಮಾಡಬೇಕು. ಬೇರೆ ಕೆರೆಗಳ ಬಳಿಯೂ ಆಗಿರುವ ಒತ್ತುವರಿ ತೆರವುಗೊಳಿಸಬೇಕು ಎಂದು ಒತ್ತಾಯಿಸಿದರು.

'ಹೊರವಲಯದಲ್ಲೇ ಹೆಚ್ಚು ಉಲ್ಲಂಘನೆ'

ಈ ರೀತಿಯ ಉಲ್ಲಂಘನೆಗಳು ಬೆಂಗಳೂರಿನ ಹೊರ ವಲಯದಲ್ಲೇ ಹೆಚ್ಚು ಎಂದು ಪರಿಸರ ಹೋರಾಟಗಾರ ವಿಷ್ಣು ಪ್ರಸಾದ್ ಹೇಳಿದರು.

ಎನ್‌ಜಿಟಿ ನೀಡಿರುವ ಆದೇಶ ಬೆಂಗಳೂರಿಗೆ ದೊಡ್ಡ ಮೈಲಿಗಲ್ಲು. ಬಿಬಿಎಂಪಿ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ಪ್ರಕರಣ ಬೆಂಗಳೂರಿಗೆ ಮಾದರಿಯಾಗುವಂತೆ ಮಾಡಬೇಕು ಎಂದರು.

'ಎಲ್ಲರ ವಿರುದ್ಧವೂ ಕ್ರಮ ಆಗಬೇಕು'

'ಪರಿಸರ ನಿಯಮಗಳ ಉಲ್ಲಂಘನೆಗೆ ಕಟ್ಟಡ ನಿರ್ಮಾಣ ಮಾಡಿರುವ ಕಂಪನಿಗಳು ಮಾತ್ರ ಕಾರಣರಲ್ಲ. ಬಿಬಿಎಂಪಿ ಮುಖ್ಯ ಎಂಜಿನಿಯರ್ ಆದಿಯಾಗಿ ಎಲ್ಲ ಅಧಿಕಾರಿಗಳ ಪಾಲೂ ಇದೆ' ಎಂದು ಪರಿಸರವಾದಿ ಲಿಯೊ ಸಲ್ಡಾನ ಹೇಳಿದರು.

'ತಹಶೀಲ್ದಾರ್, ಸರ್ವೆಯರ್‌ಗಳು ಮುಖ್ಯ ಪಾತ್ರ ವಹಿಸುತ್ತಾರೆ. ಅಂತವರ ವಿರುದ್ಧವೂ ಕ್ರಮಗಳು ಜರುಗಬೇಕು. ಆಗ ಮಾತ್ರ ಈ ರೀತಿಯ ಉಲ್ಲಂಘನೆಗಳನ್ನು ತಡೆಯಬಹುದು' ಎಂದರು.

'ಕೆರೆಗಳ ಒತ್ತುವರಿ ಕುರಿತು ಸರ್ವೆ ನಡೆಸಲು ಹೈಕೋರ್ಟ್ ಕೂಡ ಆದೇಶಿಸಿದೆ. ಎಲ್ಲ ಒತ್ತುವರಿಗಳನ್ನು ಮುಲಾಜಿಲ್ಲದೆ ತೆರವುಗೊಳಿಸಬೇಕು. ಬಡವರು ಮನೆ ಕಟ್ಟಿಕೊಂಡಿದ್ದರೆ ಸರ್ಕಾರ ಅವರಿಗೆ ಪುನರ್ವಸತಿ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

'ವಾರದೊಳಗೆ ಸಂಪುಟ ವಿಸ್ತರಣೆ'

ಒಂದನೇ ಪುಟದಿಂದ...

'ಸಚಿವರಿಲ್ಲದೆ ರಾಜ್ಯದ ಸ್ಥಿತಿಗತಿಯ ನಿರ್ವಹಣೆ ಕಷ್ಟಕರವಾಗಲಿದೆ. ಆದಷ್ಟು ಬೇಗ ಈ ಬಗ್ಗೆ ನಿರ್ಧಾರ ಕೈಗೊಳ್ಳುವಂತೆ ಮನವರಿಕೆ ಮಾಡಿದ್ದೇನೆ. ಅವರಿಂದಲೂ ಸೂಕ್ತ ಸ್ಪಂದನೆ ವ್ಯಕ್ತವಾಗಿದೆ. ಮೂರ್ನಾಲ್ಕು ದಿನಗಳಲ್ಲಿ ಮತ್ತೆ ಬಂದು ವರಿಷ್ಠರೊಂದಿಗೆ ಸಮಗ್ರ ಚರ್ಚೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಅವರು ವಿವರಿಸಿದರು.

'ಮುಖ್ಯವಾಗಿ, ಅನುಭವಿಗಳನ್ನೂ, ಹೊಸತನದ ಚಿಂತನೆಯವರನ್ನೂ ಒಳಗೊಂಡ ಕ್ರಿಯಾಶೀಲ ತಂಡವನ್ನು ಕಟ್ಟಲಿದ್ದೇನೆ. ನಾನು ಆಶಾವಾದಿ, ಆಯಾ ಸನ್ನಿವೇಶದ ಲಾಭ ಪಡೆಯಲಾರೆ ಎನ್ನಲಾರೆ' ಎಂದು ಮಾರ್ಮಿಕವಾಗಿ ನುಡಿದರು.

ಜನಪರ, ದಕ್ಷ, ಸ್ವಚ್ಛ, ಉತ್ತಮ ಆಡಳಿತ ನೀಡುವ ನಿಟ್ಟಿನಲ್ಲಿ ಅಧಿಕಾರಶಾಹಿಗೆ ಚುರುಕು ಮೂಡಿಸಲಾಗುವುದು. ಬಡವರು, ಮಹಿಳೆಯರು, ದಲಿತರು, ಹಿಂದುಳಿದ ವರ್ಗಗಳ ಜನತೆಗೆ ಸರ್ಕಾರದ ಯೋಜನೆಗಳ ಲಾಭ ತಲುಪಿಸುವುದು ಈ ಸರ್ಕಾರದ ಮೊದಲ ಆದ್ಯತೆ ಎಂದು ಬೊಮ್ಮಾಯಿ ಹೇಳಿದರು.

'ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಸಿದ್ದರಾಮಯ್ಯ ಅವರು ಆರೋಪಿಸಿದ್ದರಲ್ಲಿ ಸತ್ಯಾಂಶವಿಲ್ಲ. ಅವರ ಐದು ವರ್ಷಗಳ ಭ್ರಷ್ಟ ಆಡಳಿತಕ್ಕೆ ಬೇಸತ್ತು ಜನ ಅವರನ್ನು ತಿರಸ್ಕರಿಸಿದ್ದಾರೆ. ನಮ್ಮ ಸರ್ಕಾರದ ಬಗ್ಗೆ ಆರೋಪ ಮಾಡಲು ಅವರಿಗೆ ಹಕ್ಕಿಲ್ಲ' ಎಂದು ಅವರು ಪ್ರತಿಕ್ರಿಯೆ ನೀಡಿದರು.

'ನಾನು ರಬ್ಬರ್ ಸ್ಟ್ಯಾಂಪ್ ಎಂದು ವಿರೋಧ ಪಕ್ಷದವರು ಆರೋಪಿಸಿದ್ದಾರೆ. ನಾನು ಏನಿದ್ದರೂ ಬಿಜೆಪಿ ಸ್ಟ್ಯಾಂಪ್. ಮೋದಿ, ಅಮಿತ್ ಶಾ, ರಾಜನಾಥ ಸಿಂಗ್ ಹಾಗೂ ಬಿ.ಎಸ್. ಯಡಿಯೂರಪ್ಪ ಅವರ ಜನಪರ ಯೋಜನೆಗಳ ಸ್ಟ್ಯಾಂಪ್' ಎಂದು ಬೊಮ್ಮಾಯಿ ಸ್ಪಷ್ಟಪಡಿಸಿದರು.

ಎಚ್–1ಬಿ ವೀಸಾ: ಲಾಟರಿ ಮೂಲಕ ಆಯ್ಕೆ

ವಾಷಿಂಗ್ಟನ್(ಪಿಟಿಐ): ಎಚ್–1ಬಿ ವೀಸಾ ನೀಡಲು ಲಾಟರಿ ಮೂಲಕ ಆಯ್ಕೆ ಮಾಡಲು ಅಮೆರಿಕ ನಿರ್ಧರಿಸಿದೆ.

ಇದರಿಂದ ಭಾರತದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ವೃತ್ತಿಪರರಿಗೆ ಅನುಕೂಲವಾಗಲಿದೆ. ಮೊದಲನೇ ಬಾರಿ ಆಯ್ಕೆಯಾಗದವರಿಗೆ ಈ ಬಾರಿ ವೀಸಾ ಲಭ್ಯವಾಗುವ ಸಾಧ್ಯತೆಗಳಿವೆ.

ಈ ವರ್ಷದ ಆರಂಭದಲ್ಲಿ ವೀಸಾಗೆ ಆಯ್ಕೆ ಪ್ರಕ್ರಿಯೆ ನಡೆದಿತ್ತು. ಆದರೆ, ಸಂಸತ್ ನಿಗದಿಪಡಿಸಿದ ಸಂಖ್ಯೆಯಷ್ಟು ಆಯ್ಕೆ ಮಾಡಲು ಸಾಧ್ಯವಾಗಲಿಲ್ಲ. ಹೀಗಾಗಿ, ಲಾಟರಿ ಮೂಲಕ ಆಯ್ಕೆ ಮಾಡಲಾಗುತ್ತಿದೆ ಎಂದು ಅಮೆರಿಕ ಪೌರತ್ವ ಮತ್ತು ವಲಸೆ ಸೇವೆಗಳ ಇಲಾಖೆ ತಿಳಿಸಿದೆ.

ಸಿಬಿಎಸ್‌ಇ 12ನೇ ತರಗತಿ ಫಲಿತಾಂಶ: ಶೇ 99.37ರಷ್ಟು ತೇರ್ಗಡೆ

ನವದೆಹಲಿ (ಪಿಟಿಐ): ಕೇಂದ್ರ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಈ ವರ್ಷದ 12ನೇ ತರಗತಿ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದೆ. 70,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ 95ಕ್ಕೂ ಅಧಿಕ ಅಂಕಗಳಿಸಿದ್ದಾರೆ. ಒಟ್ಟು ತೇರ್ಗಡೆ ಪ್ರಮಾಣವು ಶೇ 99.37ರಷ್ಟಿದೆ.

'ಈ ವರ್ಷ ಮೆರಿಟ್ ಪಟ್ಟಿಯನ್ನು ಪ್ರಕಟಿಸಿಲ್ಲ. ಬಾಲಕಿಯರ ಉತ್ತೀರ್ಣ ಪ್ರಮಾಣವು ಬಾಲಕರಿಗಿಂತಲೂ ಶೇ 0.54ರಷ್ಟು ಹೆಚ್ಚಿದೆ' ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

12ನೇ ತರಗತಿಯ ಫಲಿತಾಂಶವನ್ನು ಅಂತಿಮಗೊಳಿಸಲು ವಿದ್ಯಾರ್ಥಿಗಳು 10 ಮತ್ತು 11ನೇ ತರಗತಿಯಲ್ಲಿ ಪಡೆದಿದ್ದ ಅಂಕಗಳು ಹಾಗೂ 12ನೇ ತರಗತಿಯ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಗಣಿಸಲಾಗಿದೆ ಎಂದು ತಿಳಿಸಿದರು.

'70,004 ವಿದ್ಯಾರ್ಥಿಗಳು ಶೇ 95ಕ್ಕಿಂತಲೂ ಅಧಿಕ, 1,50,152 ವಿದ್ಯಾರ್ಥಿಗಳು ಶೇ 90ಕ್ಕೂ ಅಧಿಕ ಅಂಕಗಳಿಸಿದ್ದಾರೆ. 6,149 ಮಂದಿ ಕಂಪಾರ್ಟ್‌ಮೆಂಟ್‌ನಲ್ಲಿದ್ದಾರೆ (ತೇರ್ಗಡೆಯಾಗದವರು). ಕಳೆದ ವರ್ಷ ಈ ಸಂಖ್ಯೆ 87,000 ಆಗಿತ್ತು. 14,30,188 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು ಎಂದು ಸಿಬಿಎಸ್‌ಇ ಪ್ರಕಟಿಸಿದೆ.

ಇನ್ನೂ 65,184 ವಿದ್ಯಾರ್ಥಿಗಳ ಫಲಿತಾಂಶವನ್ನು ಅಂತಿಮಗೊಳಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಇದನ್ನು ಆಗಸ್ಟ್ 5ರಂದು ಪ್ರಕಟಿಸಲಾಗುವುದು ಎಂದು ಹಿರಿಯ ಅಧಿಕಾರಿ ಮಾಹಿತಿ ನೀಡಿದರು.

ಕೋವಿಡ್ ಪರಿಸ್ಥಿತಿಯ ಕಾರಣದಿಂದಾಗಿ ಈ ವರ್ಷ 12ನೇ ತರಗತಿ ಪರೀಕ್ಷೆಗಳನ್ನು ಮಂಡಳಿಯು ರದ್ದುಪಡಿಸಿದ್ದು, ಪರ್ಯಾಯ ಮೌಲ್ಯಮಾಪನ ಕ್ರಮ ಆಧರಿಸಿ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಅಭಿನಂದನೆ, ಪ್ರಧಾನಿ ಟ್ವೀಟ್: ತೇರ್ಗಡೆಯಾಗಿರುವ ವಿದ್ಯಾರ್ಥಿಗಳಿಗೆ ಅಭಿನಂದಿಸಿ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, 'ನಿಮಗೆ ಉಜ್ವಲ ಭವಿಷ್ಯ ಕಾಯುತ್ತಿದೆ. ನೀವೆಲ್ಲರೂ ಪ್ರತಿಭಾಸಂಪನ್ನರು. ಕೋವಿಡ್‌ನಿಂದ ಉದ್ಭವಿಸಿದ ವಿಭಿನ್ನ ಪರಿಸ್ಥಿತಿಯಲ್ಲಿ ಈ ವರ್ಷ ನೀವುಗಳು ಪರೀಕ್ಷೆಯನ್ನು ಎದುರಿಸಿದ್ದೀರಿ' ಎಂದು ತಿಳಿಸಿದ್ದಾರೆ.

ಬೆಂಗಳೂರು ವಲಯಕ್ಕೆ ಶೇ 99.83 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 12ನೇ ತರಗತಿಯ ಫಲಿತಾಂಶ ಪ್ರಕಟಗೊಂಡಿದ್ದು, ಬೆಂಗಳೂರು ವಲಯ ಅಥವಾ ಪ್ರಾಂತ್ಯವು ಉತ್ತಮ ಸಾಧನೆ ಮಾಡಿದೆ. ಪ್ರದೇಶದ ಶೇ 99.83ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ದೇಶದಲ್ಲಿಯೇ ಬೆಂಗಳೂರು ನಾಲ್ಕನೇ ಸ್ಥಾನ ಪಡೆದಿದೆ.

ಕಳೆದ ವರ್ಷ ಬೆಂಗಳೂರು ವಿಭಾಗದ ಶಾಲೆಗಳಲ್ಲಿ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳಲ್ಲಿ ಶೇ 98.23ರಷ್ಟು ಮಂದಿ ಉತ್ತೀರ್ಣರಾಗಿದ್ದರು. ಈ ಬಾರಿ ಶೇ 1.6ರಷ್ಟು ಫಲಿತಾಂಶ ಏರಿಕೆಯಾಗಿದೆ. ಈ ಮಧ್ಯೆ, ತಾಂತ್ರಿಕ ಕಾರಣಗಳಿಂದ ಕೆಲ ಶಾಲಾ ಮಕ್ಕಳ ಫಲಿತಾಂಶ ಇನ್ನೂ ಪ್ರಕಟಿಸಲಾಗಿಲ್ಲ. ಫಲಿತಾಂಶ ಬಾಕಿ ಇರುವ 65 ಸಾವಿರ ವಿದ್ಯಾರ್ಥಿಗಳ ಫಲಿತಾಂಶವನ್ನು ಆ.5ರಂದು ಪ್ರಕಟಿಸಲಾಗುವುದು ಎಂದು ಮಂಡಳಿ ಹೇಳಿದೆ.

ಕೋವಿಡ್ ಕಾರಣದಿಂದ ಸಿಬಿಎಸ್‌ಇ 12ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಲಾಗಿತ್ತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 12ನೇ ತರಗತಿಯ ಕಿರು ಪರೀಕ್ಷೆಗಳು, ಅರ್ಧವಾರ್ಷಿಕ ಮತ್ತು ಪೂರ್ವಸಿದ್ಧತಾ ಪರೀಕ್ಷೆಗಳ ಶೇ 40ರಷ್ಟು ಅಂಕ, ಪ್ರಥಮ ಪಿಯುಸಿಯ ಶೇ 30ರಷ್ಟು ಮತ್ತು ಎಸ್ಸೆಸ್ಸೆಲ್ಸಿಯ ಶೇ 30ರಷ್ಟು ಅಂಕಗಳ ಆಧಾರದ ಮೇಲೆ ಈ ಬಾರಿಯ ಫಲಿತಾಂಶ ಪ್ರಕಟಿಸುವುದಾಗಿ ಮಂಡಳಿ ಹೇಳಿತ್ತು. ಇದಕ್ಕೆ ಸುಪ್ರೀಂ ಕೋರ್ಟ್ ಕೂಡ ಒಪ್ಪಿಗೆ ನೀಡಿತ್ತು. ಅದರಂತೆ ಫಲಿತಾಂಶ ಪ್ರಕಟಿಸಿದೆ.

ವಿಜ್ಞಾನ ವಿಭಾಗದಲ್ಲಿ ಹೆಚ್ಚು: ಪರೀಕ್ಷೆ ಇಲ್ಲದೆ ಹಿಂದಿನ ತರಗತಿಗಳ ಫಲಿತಾಂಶ ಆಧರಿಸಿ ಪ್ರಕಟಿಸಿರುವ ಫಲಿತಾಂಶದ ಬಗ್ಗೆ ಬಹುಪಾಲು ಶಾಲೆಗಳು ಮತ್ತು ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದ್ದಾರೆ. ಅದರಲ್ಲೂ ವಿಜ್ಞಾನ ವಿಭಾಗದಲ್ಲಿ ಹೆಚ್ಚಿನ ಫಲಿತಾಂಶ ಬಂದಿದೆ ಎಂದು ವಿವಿಧ ಶಾಲೆಗಳ ಪ್ರಾಂಶುಪಾಲರು ಹೇಳಿದ್ದಾರೆ.

ಸಿಎಂಆರ್ ನ್ಯಾಷನಲ್ ಪಬ್ಲಿಕ್ ಶಾಲೆಯ ಮುಖ್ಯಸ್ಥರಾದ ಸ್ವಾತಿ ಸೋನಿ, 'ಸಿಬಿಎಸ್‌ಇ ಈ ಬಾರಿಯ ಹೊಸ ಮಾದರಿ ಮೌಲ್ಯಮಾಪನ ಪದ್ಧತಿ ರೂಪಿಸಿದರೂ ಅದು ನಿಖರವಾಗಿದೆ. ಕಳೆದ ವರ್ಷ ಶೇ 35ರಷ್ಟು ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದರು. ಈ ವರ್ಷ ಶೇ 45ರಷ್ಟು ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಇದರಿಂದ ಯಾವುದೇ ಪ್ರತಿಭಾವಂತ ಮಕ್ಕಳಿಗೆ ಫಲಿತಾಂಶದಲ್ಲಿ ಅನ್ಯಾಯವಾಗಿಲ್ಲ ಎಂಬುದು ತಿಳಿಯುತ್ತದೆ' ಎಂದು ಹೇಳಿದರು.

ಐಟಿಪಿಎಲ್ ಶಾಲೆಯ ಮುಖ್ಯಸ್ಥರಾದ ಜ್ಯೋತಿ ಮೆನನ್, 'ಹೊಸ ಮೌಲ್ಯಮಾಪನ ಪದ್ಧತಿಯಿಂದ ಶೇ 95ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗಿದೆ. ಇದು ನ್ಯಾಯಯುತ ಮಾದರಿ. ಫಲಿತಾಂಶದ ಬಗ್ಗೆ ತೃಪ್ತಿ ಇರದ ಮಕ್ಕಳು, ಮುಂದಿನ ದಿನಗಳಲ್ಲಿ ಮತ್ತೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವನ್ನೂ ಕಲ್ಪಿಸಲಾಗಿದೆ' ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಕನ್ನಡ ಜಾಗೃತಿ ಸಮಿತಿ ಸದಸ್ಯರ ರಾಜ್ಯ ಮಟ್ಟದ ಕಾರ್ಯಾಗಾರ

‘ಕನ್ನಡಕ್ಕೆ ತೋರಣದ ಜತೆಗೆ ಹೂರಣವೂ ಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ಕಾರ್ಯಕ್ರಮಗಳು ಭಾಷೆಗೆ ತೋರಣಗಳಂತೆ ಕಾಣುತ್ತಿವೆ. ಕನ್ನಡಕ್ಕೆ ತೋರಣದ ಜತೆಗೆ ಹೂರಣವೂ ಬೇಕಿದೆ’ ಎಂದು ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅಭಿಪ್ರಾಯಪಟ್ಟರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಶುಕ್ರವಾರ ಆಯೋಜಿಸಿದ್ದ ಕನ್ನಡ ಜಾಗೃತಿ ಸಮಿತಿ ಸದಸ್ಯರ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಭಾಷೆಗೆ ಇನ್ನಷ್ಟು ಹೂರಣ ತುಂಬುವ ಕೆಲಸ ಆಗಬೇಕಿದೆ. ಸರ್ಕಾರದ ಆದೇಶ ಅಥವಾ ಒತ್ತಾಯಗಳಿಂದ ಕನ್ನಡ ಕಲಿಸಲು ಆಗುವುದಿಲ್ಲ. ಜನರ ಹೃದಯದಲ್ಲಿ ಕನ್ನಡ ಕಲಿಯುವ ಇಚ್ಛೆ ಮೂಡಬೇಕು. ಸಾಹಿತಿಗಳು ಜನ ಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಬರೆಯಬೇಕು. ಹೀಗೆ ರಚಿತಗೊಂಡ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುವ ಕೆಲಸ ಆಗಬೇಕು’ ಎಂದು ಹೇಳಿದರು.

‘ಜೀವನ ಮಾರ್ಗಕ್ಕಾಗಿ ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ಮುಂದಾಗುತ್ತಿದ್ದಾರೆ. ಕನ್ನಡದಿಂದಲೂ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂಬುದನ್ನು ಪೋಷಕರಿಗೆ ಅರ್ಥ ಮಾಡಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲೆಗೊಂದು ಕನ್ನಡ ಮಾಧ್ಯಮ ಮಾದರಿ ಶಾಲೆಯನ್ನು ಸರ್ಕಾರ ತೆರೆಯಬೇಕು. ತಾಂತ್ರಿಕ ಹಾಗೂ ವೈದ್ಯಕೀಯ ಪರೀಕ್ಷೆಯಲ್ಲೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಯಶಸ್ವಿಯಾಗುತ್ತಾರೆ ಎಂಬುದನ್ನು ಸಾಬೀತುಪಡಿಸಬೇಕು. ಆಗ ಪೋಷಕರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ಶಾಲೆಗಳಿಗೆ ದಾಖಲಿಸುತ್ತಾರೆ’ ಎಂದರು.



ಕಾರ್ಯಾಗಾರವನ್ನು ಡಾ.ಗುರುರಾಜ ಕರಜಗಿ ಮತ್ತು ಟಿ.ಎಸ್. ನಾಗಾಭರಣ ಉದ್ಘಾಟಿಸಿದರು. ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ಲ, ಸದಸ್ಯರಾದ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ನಟ ಸುಚೇಂದ್ರ ಪ್ರಸಾದ್ ಇದ್ದರು –ಪ್ರಜಾವಾಣಿ ಚಿತ್ರ

‘ಆಡಳಿತ ಭಾಷೆಯಾಗಿ ಬೆಳೆಯಬೇಕು’

‘ಮಾತೃಭಾಷೆಯ ಬದಲಿಗೆ ಆಡಳಿತ ಭಾಷೆಯಾಗಿ ಕನ್ನಡ ಹೆಚ್ಚು ಅನುಷ್ಠಾನಗೊಳ್ಳಬೇಕು’ ಎಂದು ಪ್ರಾಧಿಕಾರದ ಸದಸ್ಯ ಪ್ರೊ. ಎಂ. ಅಬ್ದುಲ್ ರೆಹಮಾನ್ ಪಾಷಾ ಅಭಿಪ್ರಾಯಪಟ್ಟರು.

‘ಆಂಧ್ರ ಪ್ರದೇಶ ಸರ್ಕಾರವು ತೆಲುಗು ಭಾಷೆಯನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಪರಿಣಾಮಕಾರಿ ಕಲಿಸುತ್ತಿದೆ. ಆ ಕೆಲಸ ಕರ್ನಾಟಕದಲ್ಲೂ ಆಗಬೇಕು. ಕನ್ನಡ ಶಾಲೆಗಳನ್ನು ಮುಚ್ಚಿ ನೂರಾರು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯಲು ಅನುಮತಿ ನೀಡುತ್ತಿರುವುದು ಬೇಸರದ ಸಂಗತಿ. ಮದರಸಗಳಲ್ಲೂ ಕನ್ನಡ ಕಲಿಸುವ ಕೆಲಸವಾಗಬೇಕು’ ಎಂದರು.

ನಟ ಸುಚೇಂದ್ರ ಪ್ರಸಾದ್, ‘ಅಭಿವೃದ್ಧಿ ಪ್ರಾಧಿಕಾರವು ಜಾಗೃತಿ ಸಮಿತಿಗಳನ್ನು ರಚಿಸಿದಾಗಲೇ ಕನ್ನಡಿಗರು ಜಾಗೃತಗೊಳ್ಳಬೇಕಿತ್ತು. ಇದಾಗದಿರುವುದು ದುರದೃಷ್ಟಕರ. ಭಾಷೆ ಉಳಿಸಿ ಬೆಳೆಸಲು ಬದ್ಧತೆಯ ಕೆಲಸಗಳನ್ನು ಮರೆತು ಅಧಿಕಾರದ ಗಾದಿಗಾಗಿ ಹೆಚ್ಚಿನವರು ಮುಗಿ ಬೀಳುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ‘ಕನ್ನಡ ಜಾಗೃತಿ ಸಮಿತಿ ಸದಸ್ಯರು ಕನ್ನಡದ ಕಾವಲು ಪಡೆಯಂತೆ ಕೆಲಸ ಮಾಡಬೇಕು. ಆಶಯಗಳನ್ನು ಗುರುತಿಸಿಕೊಂಡು ಕನ್ನಡದ ಕೆಲಸ ಮಾಡಬೇಕು’ ಎಂದರು.

‘ರಾಜ್ಯದ ಕಲಾವಿದರಿಗೆ ಸಿಗದ ಕೇಂದ್ರ ಗೌರವ’

ಬೆಂಗಳೂರು: ‘ರಾಜ್ಯದ ಮೇರು ಕಲಾವಿದರು ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಕೇಂದ್ರ ಸರ್ಕಾರದಿಂದ ಪ್ರಶಸ್ತಿ, ಪುರಸ್ಕಾರಗಳು ಲಭ್ಯವಾಗುತ್ತಿಲ್ಲ. ಕರ್ನಾಟಕದ ಧ್ವನಿ ದೂರದ ದೆಹಲಿಯಲ್ಲಿ ಕ್ಷೀಣವಾಗಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಶುಕ್ರವಾರ ಪರಿಷತ್ತು ಆಯೋಜಿಸಿದ ಕಾರ್ಯಕ್ರಮದಲ್ಲಿ ‘ಕೆ. ಮೋಹನ್‌ದೇವ್ ಆಳ್ವ ಹಾಗೂ ಡಾ.ಎಂ.ಕೆ. ಶೈಲಜಾ ಆಳ್ವ ದತ್ತಿ ಪ್ರಶಸ್ತಿ’ಯನ್ನು ಗಾಯಕರಾದ ಬಿ.ಕೆ. ಸುಮಿತ್ರಾ ಮತ್ತು ಪ್ರೊ.ಟಿ.ಎನ್. ಪದ್ಮಾ ಅವರಿಗೆ ಪ್ರದಾನ ಮಾಡಿದರು. ಈ ಪ್ರಶಸ್ತಿಗಳು ತಲಾ ₹ 30 ಸಾವಿರ ನಗದು ಒಳಗೊಂಡಿವೆ.

‘ನಾಡಿನ ಶ್ರೇಷ್ಠ ಸಂಗೀತಗಾರರಾದ ಪುಟ್ಟರಾಜ ಗವಾಯಿ, ಆರ್.ಕೆ. ಶ್ರೀಕಂಠನ್ ಅವರಿಗೆ ‘ಪದ್ಮಭೂಷಣ ಪ್ರಶಸ್ತಿ’ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ನಾನು ಐದಾರು ಬಾರಿ ಶಿಫಾರಸು ಮಾಡಿದೆ. ಆಮೇಲೆ ಅವರಿಗೆ ಪ್ರಶಸ್ತಿ ದೊರಕಿತು. ತಮಿಳುನಾಡಿನವರಿಗೆ ಈ ಪ್ರಶಸ್ತಿಗಳಲ್ಲಿ ಸಿಂಹಪಾಲು ಸಲ್ಲುತ್ತಿವೆ. ಕರ್ನಾಟಕದವರ ಸಾಧನೆಗೆ, ಅರ್ಹತೆಗೆ ತಕ್ಕ ಮನ್ನಣೆ ಸಿಗಬೇಕಾಗಿದೆ. ದೆಹಲಿಯಲ್ಲಿ ನಮ್ಮ ರಾಜ್ಯದ ಸಾಹಿತಿ-ಕಲಾವಿದರ ಸಾಧನೆಯನ್ನು ಸೂಕ್ತವಾಗಿ ಮನವರಿಕೆ ಮಾಡಿಕೊಡಬೇಕಾಗಿದೆ’ ಎಂದರು.



ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಶುಕ್ರವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ‘ಕೆ. ಮೋಹನ್‌ದೇವ್ ಆಳ್ವ ಹಾಗೂ ಡಾ.ಎಂ.ಕೆ. ಶೈಲಜಾ ಆಳ್ವ ದತ್ತಿ ಪ್ರಶಸ್ತಿ’ಯನ್ನು ಗಾಯಕರಾದ ಬಿ.ಕೆ. ಸುಮಿತ್ರಾ ಮತ್ತು ಪ್ರೊ.ಟಿ.ಎನ್. ಪದ್ಮಾ ಅವರಿಗೆ ಪ್ರದಾನ ಮಾಡಲಾಯಿತು. ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ, ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಮನು ಬಳಿಗಾರ್, ಕೆ. ಮೋಹನ್‌ದೇವ ಆಳ್ವ ಹಾಗೂ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ಇದ್ದರು.

ದತ್ತಿದಾನಿ ಕೆ. ಮೋಹನ್ ದೇವ ಆಳ್ವ ಮಾತನಾಡಿ, ‘ಶಾಸ್ತ್ರೀಯ ಸಂಗೀತಕ್ಕೆ ಜಾನಪದವೇ ಮೂಲಬೇರು. ಬಾಲ್ಯದಿಂದಲೇ ಸಂಗೀತದ ಜೊತೆಗೆ ಅವಿನಾಭಾವ ಸಂಬಂಧವನ್ನು ನಾನು ಹೊಂದಿದ್ದೆ. ಹಾಗಾಗಿ, ಸಂಗೀತಕ್ಕೆ ಸಂಬಂಧಿಸಿದ ದತ್ತಿನಿಧಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು, ಗಾಯನ ಸಮಾಜ ಸೇರಿದಂತೆ ವಿವಿಧೆಡೆ ಸ್ಥಾಪಿಸಿದ್ದೇನೆ. ಬಿ.ಕೆ. ಸುಮಿತ್ರಾ ಮತ್ತು ಟಿ.ಎನ್. ಪದ್ಮಾ ಅವರು ಇದುವರೆಗೂ ಯಾವ ಪ್ರಶಸ್ತಿಗಾಗಿಯು ಸರ್ಕಾರದ ಅಥವಾ ಸಾಂಸ್ಕೃತಿಕ ಸಂಸ್ಥೆಗಳ ಕದ ಬಡಿದಿಲ್ಲ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಕಪ್ಪು ಶಿಲೀಂಧ್ರ: ಬಾಲಕಿ ಗುಣಮುಖ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿಗೆ ನಗರದ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಬಳ್ಳಾರಿಯ 14 ವರ್ಷದ ಬಾಲಕಿ ಚೇತರಿಸಿಕೊಂಡಿದ್ದಾಳೆ.

ಕೋವಿಡ್‌ನಿಂದ ಚೇತರಿಸಿಕೊಂಡಿದ್ದ ಬಾಲಕಿಗೆ ಎರಡು ತಿಂಗಳ ಹಿಂದೆ ಕಪ್ಪು ಶಿಲೀಂಧ್ರ ಸೋಂಕು ತಗಲಿರುವುದು ದೃಢಪಟ್ಟಿತ್ತು. ಮೇ 29ರಂದು ಇಲ್ಲಿನ ಬೌರಿಂಗ್ ಆಸ್ಪತ್ರೆಗೆ ದಾಖಲಾಗಿದ್ದಳು. ಎರಡು ತಿಂಗಳಿಂದ ನಿರಂತರ ಚಿಕಿತ್ಸೆ ನೀಡಲಾಗುತ್ತಿತ್ತು. ಈಗ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡು, ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾಳೆ.

‘ಶಿಲೀಂಧ್ರ ಸೋಂಕು ಬಾಲಕಿಯ ಕಣ್ಣು ಮತ್ತು ಮಿದುಳಿಗೆ ಆವರಿಸಿತ್ತು. ಇದರಿಂದಾಗಿ ಅವಳು ಎಡಗಣ್ಣಿನ ದೃಷ್ಟಿ ಕಳೆದುಕೊಂಡಿದ್ದಳು. ಕಣ್ಣು, ಮಿದುಳು, ದವಡೆ ಸೇರಿದಂತೆ ಐದು ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿದ್ದಾಳೆ. ಇನ್ನೂ ಎರಡು ಶಸ್ತ್ರಚಿಕಿತ್ಸೆಗಳು ಬಾಕಿಯಿದ್ದು, ಮೂರು ತಿಂಗಳ ನಂತರ ನಡೆಸಲಾಗುವುದು’ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಕುವೆಂಪು ನಗರ ವಾರ್ಡ್: 20 ಮಂದಿಗೆ ಕೋವಿಡ್ ದೃಢ



ಬೆಂಗಳೂರು: ಯಲಹಂಕ ವಲಯ ವ್ಯಾಪ್ತಿಯ ಕುವೆಂಪುನಗರ ವಾರ್ಡ್ ವ್ಯಾಪ್ತಿಯಲ್ಲಿ ಬಿಬಿಎಂಪಿ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತರು ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಮನೆ ಮನೆ ಸಮೀಕ್ಷೆ ನಡೆಸಿದರು.

ವಾರ್ಡ್‌ನ ಸಿಂಗಾಪುರ, ಶ್ರೀನಿಧಿ ಹಾಗೂ ಸೋಮಣ್ಣ ಬಡಾವಣೆಗಳಲ್ಲಿ ಜನರಿಗೆ ಕೋವಿಡ್ ಪರೀಕ್ಷೆಯನ್ನೂ ನಡೆಸಲಾಯಿತು. ಪರೀಕ್ಷೆಗೆ ಒಳಪಟ್ಟವರ ಪೈಕಿ 20 ಜನರಿಗೆ ಸೋಂಕು ತಗುಲಿರುವುದು ದೃಢಪಟ್ಟಿತು. ಸೋಂಕಿತರ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರನ್ನೂ ಪರೀಕ್ಷೆಗೆ ಒಳಪಡಿಸಲಾಯಿತು.

ಸೋಂಕಿನ ಲಕ್ಷಣಗಳ ಬಗ್ಗೆ ಮತ್ತು ಅದಕ್ಕೆ ತೆಗೆದುಕೊಳ್ಳಬಹುದಾದ ಚಿಕಿತ್ಸೆ ಹಾಗೂ ಕ್ರಮಗಳ ಕುರಿತು ಜನರಲ್ಲಿ ಅರಿವು ಮೂಡಿಸಲಾಯಿತು.

‘ಸೋಂಕು ದೃಢಪಟ್ಟಿರುವವರ ಮನೆಗಳನ್ನು ಸೀಲ್ ಮಾಡಲಾಗಿದೆ. ವಾರ್ಡ್‌ನ ಬಡಾವಣೆಗಳಲ್ಲಿ ಸೋಂಕು ಮುಕ್ತ ದ್ರಾವಣ ಸಿಂಪಡಿಸಲಾಗುತ್ತಿದೆ. ಈ ಪ್ರದೇಶಗಳಲ್ಲಿ ಹೆಚ್ಚು ಜನರಿಗೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಅಲ್ಲದೆ, ಜನರಲ್ಲಿ ಅರಿವು ಮೂಡಿಸಲು ಆಟೊ ಮೂಲಕ ಪ್ರಚಾರ ಮಾಡಲಾಗುತ್ತಿದೆ’ ಎಂದು ಬಿಬಿಎಂಪಿ ಉಪ ಆರೋಗ್ಯಾಧಿಕಾರಿ ಡಾ. ಕಲ್ಪನಾ ತಿಳಿಸಿದರು.

ಕಸಾಪ: 48 ದತ್ತಿ ಪ್ರಶಸ್ತಿಗಳು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 2020ನೇ ಸಾಲಿನ 48 ದತ್ತಿ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಇವು ₹ 250ರಿಂದ 10 ಸಾವಿರದ ವರೆಗೆ ನಗದು ಬಹುಮಾನ ಒಳಗೊಂಡಿವೆ.

ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಅವರು ಶುಕ್ರವಾರ ವಿವಿಧ ಪ್ರಶಸ್ತಿಗಳಿಗೆ ಆಯ್ಕೆಯಾದ ಕೃತಿಗಳು ಹಾಗೂ ಲೇಖಕರ ಹೆಸರನ್ನು ಘೋಷಿಸಿದ್ದಾರೆ.

‘ಬಿಸಲೇರಿ ಜಯಣ್ಣ ಮತ್ತು ಬಿಸಲೇರಿ ಬ್ರದರ್ಸ್ ದತ್ತಿ ಪ್ರಶಸ್ತಿ’ಗೆ ಎಸ್.ಪಿ. ಯೋಗಣ್ಣ ಅವರ ‘ಆರೋಗ್ಯ ಎಂದರೇನು?’ ಕೃತಿ ಆಯ್ಕೆಯಾಗಿದೆ. ‘ವಿ. ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳ ಸಾಹಿತ್ಯ ಪ್ರಶಸ್ತಿ’ಗೆ ವಾಸುದೇವ ಬಡಿಗೇರ ಅವರ ‘ದೇವರ ದಾಸಿಮಯ್ಯ-ಮರುಚಿಂತನೆ’ ಕೃತಿ, ‘ಭಾರತಿ ಮೋಹನ ಕೋಟಿ ದತ್ತಿ ಅನುವಾಧ ಸಾಹಿತ್ಯ ಪ್ರಶಸ್ತಿ’ಗೆ ಓ.ಎಲ್. ನಾಗಭೂಷಣಸ್ವಾಮಿ ಅವರ ‘ಕೆಂಪು ಮುಡಿಯ ಹೆಣ್ಣು’ ಕೃತಿ ಆಯ್ಕೆಯಾಗಿದೆ. ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿವೆ.

‘ಹೊಳಲ್ಕೆರೆ ಪದ್ಮಾವತಮ್ಮ ಶ್ರೀಪಾಲಶೆಟ್ಟಿ ಡಾ. ಮದನಕೇರಿ ಜೈನ ದತ್ತಿ ಪ್ರಶಸ್ತಿ’ಗೆ ಎಸ್.ಬಿ. ಮುನ್ನೊಳ್ಳಿ ಅವರ ‘ದಶರತ್ನಗಳು’ ಕೃತಿ ಭಾಜನವಾಗಿದ್ದು, ಈ ಪ್ರಶಸ್ತಿಯು ₹ 7,500 ನಗದು ಒಳಗೊಂಡಿದೆ. ‘ಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ದತ್ತಿ ಪ್ರಶಸ್ತಿ’ಗೆ ಪ್ರೊ. ಜೀವಂಧರಕುಮಾರ್ ಅವರ ‘ವಿದೇಶಗಳಲ್ಲಿ ಜೈನ ಧರ್ಮ’ ಕೃತಿ (₹ 6 ಸಾವಿರ ನಗದು) ಆಯ್ಕೆಯಾಗಿದೆ.

‘ವಸುದೇವ ಭೂಪಾಲಂ ದತ್ತಿ’ಗೆ ಅಮರೇಶ ನುಗಡೋಣಿ ಅವರ ‘ದಂದುಗ’ ಕಾದಂಬರಿ (₹ 5 ಸಾವಿರ ನಗದು), ಶರತ್ ಕಲ್ಕೋಡ್ ಅವರ ‘ಶಿಸ್ತು ಮತ್ತು ಇತರ ಕಥೆಗಳು’ ಕೃತಿ (₹ 3 ಸಾವಿರ ನಗದು), ಮಕ್ಕಳ ಸಾಹಿತ್ಯ ವಿಭಾಗದಲ್ಲಿ ಜೀನಹಲ್ಲಿ ಸಿದ್ಧಲಿಂಗಪ್ಪ ಅವರ ‘ಅಮ್ಮ ಮತ್ತು ಮೇಡಂ’ ಕೃತಿ (₹ 2 ಸಾವಿರ ನಗದು) ಮತ್ತು ವೈಚಾರಿಕಾ ವಿಭಾಗದಲ್ಲಿ ಅಶೋಕ ನರೋಡೆ ಅವರ ‘ಬಂಡಾಯ ಸಾಹಿತ್ಯದ ವಿಭಿನ್ನ ನೆಲೆಗಳು’ ಕೃತಿ (₹ 2 ಸಾವಿರ ನಗದು) ಭಾಜನವಾಗಿದೆ.

‘ಡಿ. ಮಾಣಿಕರಾವ್ ಸ್ಮರಣಾರ್ಥ ಹಾಸ್ಯ ಸಾಹಿತ್ಯ ದತ್ತಿ’ ಪ್ರಶಸ್ತಿಗೆ ಎನ್. ರಾಮನಾಥ್ ಅವರ ‘ನಿದ್ರಾಂಗನೆಯ ಸೆಳೆವಿನಲ್ಲಿ’ ಕೃತಿ, ‘ದಿವಂಗತ ಡಾ.ಎ.ಎಸ್. ಧರಣೇಂದ್ರಯ್ಯ-ಮನೋವಿಜ್ಞಾನ ದತ್ತಿ ಪ್ರಶಸ್ತಿ’ಗೆ ಎಚ್.ಎಸ್. ಅನುಪಮಾ ಅವರ ‘ಮುಟ್ಟ’ ಕೃತಿ, ‘ಭಾರತೀಸುತ ಸ್ಮಾರಕ ದತ್ತಿ ಪ್ರಶಸ್ತಿ’ಗೆ ಜಿ.ಎಸ್. ಭಟ್ಟ ಅವರ ‘ಮಂಜೀ ಮಹೇವನ ಗಂಜೀ ಪುರಾಣ’ ಕೃತಿ, ‘ಲಕ್ಷ್ಮೀದೇವಿ ಶಾಂತರಸ ಹೆಂಬೇರಾಳು ದತ್ತಿ ಪ್ರಶಸ್ತಿ’ಗೆ ಶಾಂತಿ ಕೆ. ಅಪ್ಪಣ್ಣ ಅವರ ‘ಮನಸು ಅಭಿಸಾರಿಕೆ’ ಕೃತಿ ಆಯ್ಕೆಯಾಗಿದೆ.

‘ಪ್ರಕಾಶಕ ಆರ್.ಎನ್. ಹಬ್ಬು ದತ್ತಿ ಪ್ರಶಸ್ತಿ’ಗೆ ಬೆಂಗಳೂರಿನ ಮೈತ್ರಿ ಪ್ರಕಾಶನ ಪ್ರಕಟಿಸಿದ ‘ಕೂರ್ಗ್ ರೆಜಿಮೆಂಟ್’ ಕೃತಿ, ‘ನಿಡಸಾಲೆ ಪುಟ್ಟಸ್ವಾಮಯ್ಯ ಸಾಹಿತ್ಯ ಪ್ರಶಸ್ತಿ’ಗೆ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಅವರ ‘ಸಂಕ್ಷಿಪ್ತಪಾಲಿ-ಕನ್ನಡ ನಿಂಘಟು’ ಕೃತಿ, ‘ಅಮೃತ ಮಹೋತ್ಸವ ಸಾ.ಸಮ್ಮೇಳನದ ಸವಿ ನೆನಪಿನ ದತ್ತಿ ಪ್ರಶಸ್ತಿ’ಗೆ ಪ್ರಭುಲಿಂಗ ನೀಲೂರೆ ಅವರ ‘ಸುಬೇದಾರ್ ರಾಮಜಿ ಸಕ್ಪಾಲ್’ ಕೃತಿ, ‘ಗುಬ್ಬಿ ಸೋಲೂರು ಮುರುಗಾರಾಧ್ಯ ದತ್ತಿ ಪ್ರಶಸ್ತಿ’ಗೆ ಬಿ. ಜನಾರ್ದನ ಭಟ್ಟ ಅವರ ‘ಬೂಬರಾಜ ಸಾಮ್ರಾಜ್ಯ’ ಕೃತಿ ಭಾಜನವಾಗಿದೆ.

‘ಗಂಗಮ್ಮ ಶ್ರೀ ಬಿ. ಶಿವಣ್ಣ ದತ್ತಿ ಪ್ರಶಸ್ತಿಗೆ’ ಎಚ್.ಎಸ್. ಸತ್ಯನಾರಾಯಣ ಅವರ ‘ಕುವೆಂಪು ಅಲಕ್ಷಿತರೆದೆಯ ದೀಪ’ ಭಾಜನವಾಗಿದೆ. ಈ ಪ್ರಶಸ್ತಿಗಳು ತಲಾ ₹ 5 ಸಾವಿರ ನಗದು ಒಳಗೊಂಡಿವೆ. 48 ದತ್ತಿ ಪ್ರಶಸ್ತಿಗಳ ಪಟ್ಟಿಯನ್ನು ಪರಿಷತ್ತು ತನ್ನ ವೆಬ್‌ಸೈಟ್ www.kasapa.in ನಲ್ಲಿ ಪ್ರಕಟಿಸಿದೆ.

ಪೆಗಾಸಸ್: ‘ಪ್ರಧಾನಿ ಮೌನ ಮುರಿಯಲಿ’

ಮೈಸೂರು: ‘ಪೆಗಾಸಸ್ ಗೂಢಚಾರಿಕೆ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿ ಮೌನ ಮುರಿದು ಮಾತಾಡಬೇಕು’ ಎಂದು ಕೆಪಿಸಿಸಿ ವಕ್ತಾರ ಪ್ರೊ. ಬಿ.ಕೆ.ಚಂದ್ರಶೇಖರ್ ಒತ್ತಾಯಿಸಿದರು.

‘ಭಯೋತ್ಪಾದಕರ ಮೇಲೆ ಗೂಢಚಾರಿಕೆ ನಡೆಯಬೇಕೇ ಹೊರತು ರಾಜಕಾರಣಿಗಳು ಹಾಗೂ ಪತ್ರಕರ್ತರ ಮೇಲಲ್ಲ. ಆ ಬಗ್ಗೆ ಸುಪ್ರೀಂಕೋರ್ಟ್ ಛೀಮಾರಿ ಹಾಕಿದೆ. ಫ್ರಾನ್ಸ್ ಅಧ್ಯಕ್ಷರು ಈ ಬಗ್ಗೆ ಈಗಾಗಲೇ ತನಿಖೆ ನಡೆಸಿದ್ದಾರೆ. ವರದಿ ಕೊಡುವಂತೆ ಇಸ್ರೇಲ್ ಪ್ರಧಾನಿಗೂ ಹೇಳಿದ್ದಾರೆ. ಆದರೆ, ನರೇಂದ್ರ ಮೋದಿ ಮಾತ್ರ ಸುಮ್ಮನಿದ್ದಾರೆ’ ಎಂದು ಅವರು ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಕಿಡಿ ಕಾರಿದರು.

‘ನರೇಂದ್ರ ಮೋದಿ 7 ವರ್ಷದಲ್ಲಿ ಪತ್ರಿಕಾಗೋಷ್ಠಿಯನ್ನೇ ನಡೆಸದೇ ತಮ್ಮ ವೈಫಲ್ಯಗಳನ್ನು ಮುಚ್ಚಿಡುತ್ತಿದ್ದಾರೆ. ಒಂದು ವೇಳೆ ಅವರಿಗೆ ಪತ್ರಿಕಾಗೋಷ್ಠಿ ನಡೆಸಲು ಭಯವಿದ್ದರೆ, ಪತ್ರಿಕಾಗೋಷ್ಠಿ ನಡೆಸಲೆಂದೇ ಉಪಪ್ರಧಾನಿಯೊಬ್ಬರನ್ನು ನೇಮಿಸಿಕೊಳ್ಳಲಿ’ ಎಂದು ಸಲಹೆ ನೀಡಿದರು.


ಬಿ.ಕೆ.ಚಂದ್ರಶೇಖರ್

‘ಕೋವಿಡ್ ಲಸಿಕೆಗಾಗಿ ಜನ ಪರದಾಡುತ್ತಿದ್ದಾರೆ. ಶೇ 5.50ರಷ್ಟು ಮಂದಿಗೆ ಮಾತ್ರ ಲಸಿಕೆ ದೊರೆತಿದೆ. ಡಿಸೆಂಬರ್ ವೇಳೆಗೆ ಎಲ್ಲರಿಗೂ ಲಸಿಕೆ ಸಿಗುವುದು ಕಷ್ಟಸಾಧ್ಯ. ಹೀಗಿದ್ದರೂ, ನರೇಂದ್ರ ಮೋದಿ ಲಸಿಕೆಯ ಪ್ರಮಾಣಪತ್ರದಲ್ಲೂ ತಮ್ಮ ಚಿತ್ರ ಹಾಕಿಕೊಂಡಿರುವುದು ನಾಚಿಕೆಗೇಡು’ ಎಂದು ಚಾಟಿ ಬೀಸಿದರು.

‘ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆದ ತಕ್ಷಣ ಎಲ್ಲವೂ ಸರಿ ಹೋಗುವುದಿಲ್ಲ. ಹಣಕಾಸು ಇಲಾಖೆಗೆ ದಕ್ಷ ಅಧಿಕಾರಿಗಳನ್ನು ನೇಮಕ ಮಾಡಬೇಕು. ಆಸ್ಪತ್ರೆಗಳಿಗೆ ಮೂಲಸೌಕರ್ಯ ಒದಗಿಸಿಕೊಡಬೇಕು’ ಎಂದು ಆಗ್ರಹಿಸಿದರು.

ನಾಳೆಯಿಂದ ‘ನನ್ನ ಭಾರತ’ ಅಭಿಯಾನ

ಬೆಂಗಳೂರು: ದಿಶಾ ಭಾರತ್ ಸಂಸ್ಥೆಯು ಸ್ವಾತಂತ್ರ್ಯ ದಿನದ ಅಂಗವಾಗಿ ಆಗಸ್ಟ್ 1 ರಿಂದ 15ರವರೆಗೆ ‘ನನ್ನ ಭಾರತ’ ಎಂಬ ರಾಷ್ಟ್ರಮಟ್ಟದ ಯುವ ಅಭಿಯಾನವನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿದೆ.

ಪ್ರತಿದಿನ ಬೆಳಗ್ಗೆ 11 ಗಂಟೆಯಿಂದ ವಿದ್ಯಾರ್ಥಿಗಳಿಂದ ದೇಶಭಕ್ತಿ ಕಾರ್ಯಕ್ರಮ, ರಾಜ್ಯದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಂದ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಕಥಾಮಾಲಿಕೆ, ರಾಷ್ಟ್ರೀಯ ವಿಚಾರಗಳ ಕುರಿತು ಭಾಷಣ, ದೇಶಭಕ್ತಿ ಗೀತೆಗಳ ಗಾಯನ, ಸಾಮಾಜಿಕ ವಿಷಯಗಳ ಕುರಿತು ಏಕಪಾತ್ರಾಭಿನಯ, ರಾಷ್ಟ್ರಭಾವ ಜಾಗರಣದ ನೃತ್ಯ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಪ್ರತಿದಿನ ಸಂಜೆ 6ಕ್ಕೆ ಉಪನ್ಯಾಸ ಸರಣಿ ಇರಲಿದೆ.

ಆಗಸ್ಟ್ 1ರಂದು ಸಂಜೆ 6ಕ್ಕೆ ಉಪನ್ಯಾಸ ಸರಣಿಯ ಉದ್ಘಾಟನಾ ಭಾಷಣವನ್ನು ನವದೆಹಲಿಯ ಡಾ.ಅನಿರ್ಬನ್ ಗಂಗೂಲಿ ಮಾಡಲಿದ್ದಾರೆ. ಆಗಸ್ಟ್ 15ರ ಸಮಾರೋಪ ಭಾಷಣದಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಮಾಡಲಿದ್ದಾರೆ.

ಅಭಿಯಾನದ ಎಲ್ಲ ಕಾರ್ಯಕ್ರಮಗಳು ದಿಶಾ ಭಾರತ್ ಫೇಸ್‌ಬುಕ್ ಪುಟ www.facebook.com/DishaBharat ಮೂಲಕ ನೇರ ಪ್ರಸಾರವಾಗಲಿದೆ.

ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ: ಅಭಿಯಾನದ ಅಂಗವಾಗಿ ‘ಸ್ವರಾಜ್ಯ-75: ಸ್ವಾತಂತ್ರ್ಯ ನಂತರದ ಭಾರತ’ ಕುರಿತು ಪ್ರಬಂಧ ಸ್ಪರ್ಧೆಯನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಏರ್ಪಡಿಸಲಾಗಿದೆ. ಶಾಲೆ ಮತ್ತು ಕಾಲೇಜು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. 2,500 ಪದಮಿತಿಯಲ್ಲಿ ಬರೆದ ಪ್ರಬಂಧವನ್ನು ಆಗಸ್ಟ್ 15ರೊಳಗೆ ಸಂಸ್ಥೆಯ ವಿಳಾಸಕ್ಕೆ ತಲುಪಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ: ಈಸ್ಟ್ ವೆಸ್ಟ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಿ.ಇ.ಎಲ್ ಬಡಾವಣೆ, ವಿಶ್ವನೀಡಂ ಅಂಚೆ, ಅಂಜನಾನಗರ, ಬೆಂಗಳೂರು

ಸಂಪರ್ಕ: 9483150527, 8861938180

ಸಂಜೀವ್ ಕಿಶೋರ್ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ



ಬೆಂಗಳೂರು: ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕರಾಗಿ ಸಂಜೀವ್ ಕಿಶೋರ್ ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡರು. ಈ ಮೊದಲು, ಅವರು ರೈಲ್ವೆ ಮಂಡಳಿಯ ಹೆಚ್ಚುವರಿ ಸದಸ್ಯರಾಗಿದ್ದರು. ಈಶಾನ್ಯ ರೈಲ್ವೆಯಲ್ಲಿ ಹಲವು ಉನ್ನತ ಹುದ್ದೆಗಳನ್ನು ನಿಭಾಯಿಸಿದ ಅನುಭವ ಸಂಜೀವ್ ಅವರಿಗೆ ಇದೆ. ಯಲಹಂಕದ ರೈಲು ಗಾಲಿ ಕಾರ್ಖಾನೆಯಲ್ಲಿ ಹಲವು ಜವಾಬ್ದಾರಿಯನ್ನು ಅವರು ನಿಭಾಯಿಸಿದ್ದಾರೆ.

ರೋಹಿಣಿ ಸಿಂಧೂರಿ ಅಮಾನತಿಗೆ ಆಗ್ರಹ: ಸಾ.ರಾ.ಮಹೇಶ್ ಪತ್ರ

ಮೈಸೂರು: ‘ಕರ್ತವ್ಯಲೋಪದ ಆರೋಪ ಎದುರಿಸುತ್ತಿರುವ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರನ್ನು ಸೇವೆಯಿಂದ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದೆ’ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

‘ಜಿಲ್ಲೆಯಲ್ಲಿ ಕೊರೊನಾ ಸಾವಿನ ಅಂಕಿ ಅಂಶವನ್ನು ಅವರು ಸಮರ್ಪಕವಾಗಿ ಪ್ರಕಟಿಸಲಿಲ್ಲ. ಅನುಮತಿ ಇಲ್ಲದೇ ಅಧಿಕೃತ ನಿವಾಸದಲ್ಲಿ ಈಜುಕೊಳ ನಿರ್ಮಿಸಿದರು ಎಂಬ ಆರೋಪಗಳ ಕುರಿತು ವಿವಿಧ ಇಲಾಖೆಯ ಅಧಿಕಾರಿಗಳು ನೀಡಿರುವ ವರದಿ ಆಧರಿಸಿ ದೋಷಾರೋಪ ನಿಗದಿ ಮಾಡಿ ವಿಚಾರಣೆ ನಡೆಸಬೇಕು. ಸರ್ಕಾರಕ್ಕೆ ಆಗಿರುವ ನಷ್ಟವನ್ನು ವಸೂಲು ಮಾಡಿ ಸೇವೆಯಿಂದ ವಜಾಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ನನ್ನ ವಿರುದ್ಧದ ಭೂ ಹಗರಣದ ಆರೋಪಗಳೆಲ್ಲವೂ ಸುಳ್ಳೆಂದು ಸಾಬೀತಾಗಿರುವುದರಿಂದ ಸಿಂಧೂರಿ ಅವರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮಾನನಷ್ಟ ಪ್ರಕರಣಗಳನ್ನೂ ದಾಖಲಿಸಿದ್ದೇನೆ’ ಎಂದು ತಿಳಿಸಿದರು.



ಸಾ.ರಾ.ಮಹೇಶ್

‘ಸುಪ್ರೀಂನಲ್ಲಿ ರಾಜ್ಯವನ್ನು ಪ್ರತಿನಿಧಿಸುವ ವಕೀಲರನ್ನು ಬಿಟ್ಟು ಖಾಸಗಿ ವಕೀಲರಿಗೆ ಮುಡಾದಲ್ಲಿದ್ದ ₹ 24 ಲಕ್ಷ ಹಣ ನೀಡಿ ಕುರುಬಾರಹಳ್ಳಿ ಸರ್ವೆ ನಂಬರ್ 4ಕ್ಕೆ ಸಂಬಂಧಿಸಿದಂತೆ ನೇಮಿಸಿಕೊಂಡಿದ್ದರು. ಆದರೆ, ಅರ್ಜಿ ವಿಚಾರಣೆಗೆ ಅಂಗೀಕಾರವೇ ಆಗಲಿಲ್ಲ. ಅದಾದ ಎರಡೇ ದಿನಕ್ಕೆ ಪ್ರಕರಣದಲ್ಲಿ ಜಯ ಗಳಿಸಿದ ರಾಜವಂಶಸ್ಥರೊಂದಿಗೆ ಫೋಟೊ ತೆಗೆಸಿಕೊಂಡರು. ಏನಿದರ ಮರ್ಮ? ಸರ್ವೆ ನಂಬರ್ 4ರಲ್ಲಿ ತಮ್ಮ ಪತಿಯ ಸ್ನೇಹಿತರಿಗೆ ಸೇರಿದ ಎಷ್ಟು ಎಕರೆ ಭೂಮಿ ಇದೆ ಎಂಬುದನ್ನು ಅವರು ಬಹಿರಂಗಪಡಿಸಬೇಕು’ ಎಂದು ಒತ್ತಾಯಿಸಿದರು.

ಜೆಡಿಎಸ್ ಸೇರ್ಪಡೆ: ಸತ್ಯಕ್ಕೆ ದೂರ

ಕೋಲಾರ: ‘ನನಗೆ ಕಾಂಗ್ರೆಸ್ ಮೇಲೆ ಇರುವಷ್ಟು ನಂಬಿಕೆ ಬೇರೆ ಪಕ್ಷಗಳ ಮೇಲೆ ಇಲ್ಲ. ನಾನು ಜೆಡಿಎಸ್ ಪಕ್ಷಕ್ಕೆ ಸೇರುತ್ತೇನೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ’ ಎಂದು ಮಾಜಿ ಶಾಸಕ ವರ್ತೂರು ಪ್ರಕಾಶ್ ಸ್ಪಷ್ಟಪಡಿಸಿದರು.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣಾ ಸಿದ್ಧತೆ ಸಂಬಂಧ ಶುಕ್ರವಾರ ಬೆಂಬಲಿಗರ ಜತೆ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ‘ಮುಂಬರುವ ವಿಧಾನಸಭಾ ಚುನಾವಣೆಗೆ ಪಕ್ಷೇತರನಾಗಿ ಸ್ಪರ್ಧಿಸುವ ಬಗ್ಗೆ ಇನ್ನು ನಿರ್ಧರಿಸಿಲ್ಲ. ಚುನಾವಣೆಗೆ ಸ್ಪರ್ಧಿಸಿದರೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತೇನೆಯೇ ಹೊರತು ಬೇರೆ ಪಕ್ಷಗಳಿಗೆ ಹೋಗುವುದಿಲ್ಲ’ ಎಂದರು.






ಮೈಸೂರು ರಸ್ತೆಯ ಪಟೇಲ್ ಗುಳ್ಳಪ್ಪ ಪದವಿ ಕಾಲೇಜಿನ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಿರಿನಗರ ಭಾಗದ ಖಾಸಗಿ ಶಾಲಾ ಕಾಲೇಜುಗಳ ಶಿಕ್ಷಕರಿಗೆ ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ದಿನಸಿ ಕಿಟ್‌ಗಳನ್ನು ವಿತರಿಸಿದರು. ಶಿಕ್ಷಣ ತಜ್ಞ ಬಿ.ಎಂ.ಪಟೇಲ್ ಪಾಂಡು, ಹನುಮಂತನಗರದ ಜೈನ್ ಸಂಘದ ಪ್ರಕಾಶ್ ಹಾಗೂ ಇತರರು ಇದ್ದರು.

‘ಜನ ಬಯಸಿದರೆ ರಾಜಕೀಯಕ್ಕೆ’

ಮದ್ದೂರು: ‘ತಂದೆ ಅಂಬರೀಷ್ ಮತ್ತು ನನ್ನ ಅಭಿಮಾನಿಗಳು, ಜಿಲ್ಲೆಯ ಜನ ಬಯಸಿದಾಗ ರಾಜಕೀಯಕ್ಕೆ ಬರುವ ಬಗ್ಗೆ ಚಿಂತಿಸುತ್ತೇನೆ. ಆದರೆ, ಸದ್ಯಕ್ಕೆ ಆ ಬಗ್ಗೆ ನಿರ್ಧಾರ ಮಾಡಿಲ್ಲ’ ಎಂದು ನಟ ಅಭಿಷೇಕ್ ಅಂಬರೀಷ್ ತಿಳಿಸಿದರು.

ತಾಲ್ಲೂಕಿನ ಹುಳಗನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಮುಂದಿನ ದಿನಗಳಲ್ಲಿ ಏನಾಗುತ್ತದೆ ಎಂದು ಈಗ ಹೇಳಲಾಗದು. ಅಭಿಮಾನಿಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಒತ್ತಾಯಿಸುತ್ತಿದ್ದಾರೆ. ಆ ಬಗ್ಗೆ ತೀರ್ಮಾನಿಸಿಲ್ಲ’ ಎಂದರು.



ಜಿಲ್ಲಾ ತೋಟಗಾರಿಕೆ ಇಲಾಖೆಯಿಂದ ರೈತರಿಗೆ ನೆರವು

ಹಣ್ಣು, ತರಕಾರಿ ಮಾರಾಟಕ್ಕೆ ‘ರೈತ ಸೇತು’


• ಕೆ.ಜೆ. ಮರಿಯಪ್ಪ

ಪ್ರಜಾವಾಣಿ ವಿಶೇಷ

ತುಮಕೂರು: ತೋಟಗಾರಿಕೆ ಬೆಳೆಗಳಿಗೆ ಅಂಗೈನಲ್ಲೇ ಮಾರುಕಟ್ಟೆ ಸೃಷ್ಟಿಸಿಕೊಳ್ಳುವ ಅವಕಾಶವನ್ನು ಜಿಲ್ಲಾ ತೋಟಗಾರಿಕೆ ಇಲಾಖೆ ರೈತರಿಗೆ ಕಲ್ಪಿಸಿಕೊಟ್ಟಿದ್ದು, ಅದಕ್ಕಾಗಿ ‘ರೈತ ಸೇತು’ ಆ್ಯಪ್ ಅನ್ನು ಇದೇ ಮೊದಲ ಬಾರಿಗೆ ತಂತ್ರಜ್ಞರ ನೆರವು ಪಡೆದು ಇಲಾಖೆಯು ಅಭಿವೃದ್ಧಿಪಡಿಸಿದೆ.

ಈ ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಂಡು ರೈತರು ತಮ್ಮ ಉತ್ಪನ್ನಗಳನ್ನು ಮಧ್ಯವರ್ತಿ ಇಲ್ಲದೆ ನೇರವಾಗಿ ಆನ್‌ಲೈನ್ ಮೂಲಕ ಮಾರಾಟ ಮಾಡಬಹುದಾಗಿದೆ. ವರ್ತಕರೂ ರೈತರಿಂದಲೇ ನೇರವಾಗಿ ಖರೀದಿಸಲು ಇದು ಸಹಕಾರಿಯಾಗಲಿದೆ.

ಹಣ್ಣು, ತರಕಾರಿ, ಹೂವು, ಮಸಾಲೆ ಪದಾರ್ಥಗಳು, ಸಿರಿಧಾನ್ಯ, ಎಣ್ಣೆ ಕಾಳುಗಳು, ಜೈವಿಕ ಗೊಬ್ಬರ, ತೆಂಗಿನ ಉತ್ಪನ್ನಗಳು ಹಾಗೂ ತೋಟಗಾರಿಕೆ ಬೆಳೆಗಳಿಂದ ಸಂಸ್ಕರಿಸಿದ ಉತ್ಪನ್ನಗಳ ಮಾರಾಟಕ್ಕೆ ವೇದಿಕೆಯಾಗಿದೆ. ರೈತ ಹಲವು ವರ್ತಕರನ್ನು ಹಾಗೂ ವರ್ತಕ ಹಲವು ರೈತರನ್ನು ಏಕ ಕಾಲದಲ್ಲಿ ಸಂಪರ್ಕಿಸಬಹುದು. ಬೆಳೆ ಕಟಾವಿಗೆ ಮುನ್ನ ಮಾರುಕಟ್ಟೆ ಸೃಷ್ಟಿಸಿಕೊಳ್ಳಲು ನೆರವಾಗಲಿದೆ.



ರೈತ ಸೇತು ಆ್ಯಪ್

ರೈತರು ಏನು ಮಾಡಬೇಕು?: ರೈತರು ಮೊದಲಿಗೆ ‘ರೈತ ಸೇತು’ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ತಮ್ಮ ಮೊಬೈಲ್ ನಂಬರ್ ಸಹಿತ ನೋಂದಣಿ ಮಾಡಿಕೊಂಡು, ಕೆಲ ಪ್ರಾಥಮಿಕ ಮಾಹಿತಿ ದಾಖಲಿಸಬೇಕು. ಎಷ್ಟು ಪ್ರದೇಶದಲ್ಲಿ ಬೆಳೆ (ಹಣ್ಣು, ತರಕಾರಿ, ಹೂ ಇತ್ಯಾದಿ) ಬೆಳೆಯಲಾಗಿದೆ, ಕಟಾವು ಯಾವಾಗ, ಎಷ್ಟು ಇಳುವರಿ ಬರಬಹುದು, ಬಣ್ಣ, ಗಾತ್ರ, ತಳಿ, ಮಾದರಿ ಮೊದಲಾದ ವಿವರಗಳನ್ನು ನಮೂದಿಸಬೇಕು.

ಬೆಳೆಯ ಚಿತ್ರ ಅಥವಾ ವಿಡಿಯೊ ತೆಗೆದು ಅಪ್‌ಲೋಡ್ ಮಾಡುವ ಅವಕಾಶಗಳಿವೆ. ಪ್ರಮುಖವಾಗಿ ಬೆಲೆ ನಿಗದಿಯ ಅವಕಾಶವೂ ರೈತರಿಗೆ ಇರುತ್ತದೆ. ಮಾರುಕಟ್ಟೆಯನ್ನು ಅಂದಾಜಿಸಿ ಬೆಲೆ ನಮೂದಿಸಿ ಸೇವ್ ಮಾಡಿದರೆ ಅವರ ಕೆಲಸ ಮುಗಿಯಿತು.

ಈ ಆ್ಯಪ್‌ನಲ್ಲಿ ಈ ವಿವರಗಳನ್ನು ಗಮನಿಸುವ ವರ್ತಕರು ಕಾಲ ಕಾಲಕ್ಕೆ ರೈತರನ್ನು ಸಂಪರ್ಕಿಸಿ ವ್ಯವಹರಿಸುತ್ತಾರೆ. ಅಗತ್ಯವಿದ್ದರೆ ಸ್ಥಳಕ್ಕೆ ಭೇಟಿ ನೀಡಿ ಉತ್ಪನ್ನಗಳ ಗುಣಮಟ್ಟ ಪರಿಶೀಲಿಸಿ ಮಾತುಕತೆ ನಡೆಸಬಹುದು. ರೈತರು, ವರ್ತಕರಿಗೆ ಪರಸ್ಪರ ಒಪ್ಪಿಗೆಯಾದ ನಂತರ ಮಾರಾಟ–ಕೊಳ್ಳುವ ಪ್ರಕ್ರಿಯೆ ಮುಂದುವರಿಸಬಹುದು.

ಮಾಹಿತಿಗೆ ಮೊಬೈಲ್ 94489 99217 ಸಂಪರ್ಕಿಸಬಹುದು.

ಕನ್ನಡದಲ್ಲೂ ಮಾಹಿತಿ



ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ವಿವರ ಲಭ್ಯ. ಮಾಹಿತಿ ನಮೂದಿಸುವುದು ಸರಳವಾಗಿದೆ. ‘ರೈತ ಸೇತು’ ಆ್ಯಪ್‌ನಲ್ಲಿ ಎಪಿಎಂಸಿ ಧಾರಣೆಯ ವಿವರಗಳು ಲಭ್ಯವಾಗುತ್ತವೆ. ಮಾರುಕಟ್ಟೆಯ ಆಗುಹೋಗುಗಳನ್ನು ಗಮನಿಸಿ ರೈತರು ತಮ್ಮ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸಿ ಮಾರಾಟ ಮಾಡಬಹುದು. ಇದರ ಆಧಾರದ ಮೇಲೆ ವರ್ತಕರು ಮಾತುಕತೆ ನಡೆಸಿ ಖರೀದಿಸಲು ನೆರವಾಗಲಿದೆ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಬಿ. ರಘು ‘ಪ್ರಜಾವಾಣಿ’ಗೆ ತಿಳಿಸಿದರು.

ಮೊದಲ ಪ್ರಯತ್ನವಾಗಿ ಜಿಲ್ಲೆಯ ಮಟ್ಟಿಗೆ ಆ್ಯಪ್ ಬಳಕೆಯಾಗಲಿದೆ. ಮುಂದೆ ಹೊರ ಜಿಲ್ಲೆ ಹಾಗೂ ರಾಜ್ಯಮಟ್ಟಕ್ಕೂ ವಿಸ್ತರಿಸಬಹುದು. ಹೊರಗಿನವರೂ ಜಿಲ್ಲೆಗೆ ಬಂದು ಖರೀದಿಸಲು ಸಹಕಾರಿಯಾಗಿದೆ. ಇಲ್ಲಿ ಮಧ್ಯವರ್ತಿಗಳ ಪಾತ್ರ ಇರುವುದಿಲ್ಲ. ರೈತರ ಬಳಿ ಸ್ಮಾರ್ಟ್ ಫೋನ್ ಇಲ್ಲದಿದ್ದರೂ ಸ್ನೇಹಿತರು, ಸಂಬಂಧಿಕರು, ಸೇವಾ ಸಿಂಧು ಕೇಂದ್ರಗಳ ನೆರವು ಪಡೆದು ವಿವರ ನಮೂದಿಸಬಹುದು ಎಂದರು.

ನಗರದಲ್ಲಿ ಇಂದು

‘ಬೆಂಗಳೂರಿನ ವಾರ್ಡ್ ಸಮಿತಿಯ ಪಾಠಗಳು’ ಕುರಿತು ಚರ್ಚೆ: ಭಾಗವಹಿಸುವವರು–ಕೆ.ಮಾಯಣ್ಣ ಗೌಡ, ವಿ.ಕೆ.ರಮಾಮಣಿ, ಬಿ.ಆರ್. ರವಿಕುಮಾರ್, ಸ್ವರೂಪ ಕಾಕುಮನು, ತಾರಕ್ ಕೃಷ್ಣಮೂರ್ತಿ, ಜಗದೀಶ್ ರೆಡ್ಡಿ, ಗಿರೀಶ ಶಂಕರ್, ಅನಿತಾ, ಪ್ರತಿಮಾ ಕಾಕನೂರ್, ಆಯೋಜನೆ–ಜನಾಗ್ರಹ, ಬೆಳಿಗ್ಗೆ 10.30

ರಾಷ್ಟ್ರೀಯ ರೇಷ್ಮೆ ಪ್ರದರ್ಶನ ಮತ್ತು ಮಾರಾಟ: ಸ್ಥಳ–ವೈಟ್ ಪೆಟಲ್ಸ್, ಮಾರುತಿ ಮಂದಿರ ಸಮೀಪ, ವಿಜಯನಗರ, ಬೆಳಿಗ್ಗೆ 11ರಿಂದ ರಾತ್ರಿ 8

‘ಪಾಬ್ಲೋ ನೆರೂಡ ನೆನಪುಗಳು ಆತ್ಮಕಥೆ’ ಕುರಿತು ತಿಂಗಳ ಮಾತುಕತೆ: ಭಾಗವಹಿಸುವವರು–ಕೆ.ಕೇಶವ ಶರ್ಮ, ಓ.ಎಲ್. ನಾಗಭೂಷಣಸ್ವಾಮಿ, ಆಯೋಜನೆ–ಪುಸ್ತಕ ಪ್ರೀತಿ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)


ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ

ಹಿರಿಯ ಲೇಖಕಿ ಪ್ರೇಮಾ ಭಟ್ ಅವರ ಕೃತಿಗಳ ವಿಚಾರ ಸಂಕಿರಣ: ಪ್ರಬಂಧ ಮಂಡನೆ–ಸಂಪದಾ ಕೆರಿಮನಿ, ಜಯಶ್ರೀ ರಾಜು, ಅಧ್ಯಕ್ಷತೆ–ವನಮಾಲಾ ಸಂಪನ್ನಕುಮಾರ್, ಆಯೋಜನೆ–ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)


ವನಮಾಲಾ

‘ಕೃತಜ್ಞ ಪ್ರಶಸ್ತಿ’ ಪ್ರದಾನ ಮತ್ತು ವೈದ್ಯರಿಗೆ ಸನ್ಮಾನ: ಅತಿಥಿ–ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಶೋಕ್ ಖೇಣಿ, ಆಯೋಜನೆ–ಕಾವೇರಿ ಆಸ್ಪತ್ರೆ, ಸ್ಥಳ–ಗ್ರಾಂಡ್ ಬಾಲ್ ರೂಮ್, ಲಲಿತ್ ಅಶೋಕ ಹೋಟೆಲ್, ಸಂಜೆ 5


ಡಾ. ಅಶ್ವತ್ಥ ನಾರಾಯಣ



ಬಸವನಪುರ ವಾರ್ಡಿನ ಶೀಗೆಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಬಿಬಿಎಂಪಿ ಮತ್ತು ಅಪ್ಸರಾ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಲಸಿಕಾ ಅಭಿಯಾನಕ್ಕೆ ಪಾಲಿಕೆಯ ಮಾಜಿ ಸದಸ್ಯ ಬಿ.ಎನ್. ಜಯಪ್ರಕಾಶ್ ಚಾಲನೆ ನೀಡಿದರು. ಮುಖಂಡರಾದ ರವಿ, ಜಗನ್ನಾಥ್, ಅನಿಲ್ ಇದ್ದರು.

ಏಳು ವರ್ಷದ ಬಾಲಕಿ ಅಪಹರಿಸಿ ಹತ್ಯೆ; ಅಪರಾಧಿಗೆ ಜೀವಾವಧಿ ಶಿಕ್ಷೆ

ಅಕ್ಕನ ಮಗಳ ಕೊಲೆ: ಹೊದಿಕೆಯಲ್ಲಿ ಸುತ್ತಿಟ್ಟಿದ್ದ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಕನ ಮಗಳನ್ನೇ ಅಪಹರಿಸಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ಅಪರಾಧಿ ಸಯ್ಯದ್ ಸಲ್ಮಾನ್ ಷಾ ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ ಸಿಸಿಎಚ್‌-51ನೇ ನ್ಯಾಯಾಲಯ ಆದೇಶ ಹೊರಡಿಸಿದೆ.

ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ 2014ರಲ್ಲಿ ನಡೆದಿದ್ದ ಕೃತ್ಯದ ಬಗ್ಗೆ ನ್ಯಾಯಾಧೀಶರಾದ ಬಿ.ಕೆ. ಕೋಮಲಾ ವಿಚಾರಣೆ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಎಸ್. ವೀಣಾ ವಾದಿಸಿದ್ದರು.

ಅಪರಾಧ ಸುದ್ದಿ


ಸಲ್ಮಾನ್ ಷಾ

ಪ್ರಕರಣದ ವಿವರ: 7 ವರ್ಷದ ಬಾಲಕಿ ರಶೀಭಾ ನಿಸ್ಸಾರ್ ಅಶೋಕನಗರ ಬಳಿಯ ಶಾಲೆಯೊಂದರಲ್ಲಿ ಓದುತ್ತಿದ್ದಳು. ಅಕ್ಕನ ಮಗಳಾದ ಆಕೆಯನ್ನು ಅಪಹರಿಸಿ ₹ 10 ಲಕ್ಷ ವಸೂಲಿ ಮಾಡಲು ಆರೋಪಿ ಸಲ್ಮಾನ್ ಸಂಚು ರೂಪಿಸಿದ್ದ. 2014ರ ಜುಲೈ 9ರಂದು ಪತ್ನಿಯನ್ನು ಶಾಲೆಗೆ ಕಳುಹಿಸಿದ್ದ ಆತ, ಅಜ್ಜಿಗೆ ಹುಷಾರಿಲ್ಲವೆಂದು ಹೇಳಿ ಬಾಲಕಿಯನ್ನು ತನ್ನ ಮನೆಗೆ ಕರೆದುಕೊಂಡು ಬರುವಂತೆ ಮಾಡಿದ್ದ.

ಭಾರತಿನಗರದ ತಿಮ್ಮಯ್ಯ ರಸ್ತೆಯಲ್ಲಿರುವ ಅಂಗಾಳ್ ಈಶ್ವರಿ ಅಮ್ಮನ್ ದೇವಸ್ಥಾನ ಬಳಿಯ ಮನೆಯಲ್ಲಿ ಬಾಲಕಿಯನ್ನು ಅಕ್ರಮ ಬಂಧನದಲ್ಲಿರಿಸಲಾಗಿತ್ತು. ಅಕ್ಕನಿಗೆ ವಾಟ್ಸ್‌ಆ್ಯಪ್‌ನಲ್ಲಿ ಅಪರಿಚಿತನ ಹೆಸರಿನಲ್ಲಿ ಸಂದೇಶ ಕಳುಹಿಸಿದ್ದ ಆರೋಪಿ, 'ರತೀಭಾಳನ್ನು ಅಪಹರಣ ಮಾಡಿದ್ದು, ಈಗ ನನ್ನ ಬಳಿ ಇದ್ದಾಳೆ. ಆಕೆಯನ್ನು ಬಿಡುಗಡೆ ಮಾಡಬೇಕಾದರೆ ₹ 10 ಲಕ್ಷ ಕೊಡಬೇಕು' ಎಂದು ಬೇಡಿಕೆಯಿಟ್ಟಿದ್ದ. ಆದರೆ, ಪೋಷಕರಿಂದ ಹಣ ನೀಡಲು ಸಾಧ್ಯವಾಗಿರಲಿಲ್ಲ.

ಅಷ್ಟಕ್ಕೆ ಕೋಪಗೊಂಡ ಅಪರಾಧಿ ಸಲ್ಮಾನ್, ರಶೀಭಾ ಕುತ್ತಿಗೆ ಬಿಗಿದು ಕೊಂದಿದ್ದ. ನಂತರ ಮೃತದೇಹವನ್ನು ಹೊದಿಕೆಯಲ್ಲಿ ಸುತ್ತಿ ಮನೆಯ ಮಂಚದ ಕೆಳಗೆ ಮುಚ್ಚಿಟ್ಟಿದ್ದ. ಬಾಲಕಿಯ ಬಟ್ಟೆ, ಬ್ಯಾಗ್, ಪುಸ್ತಕ ಹಾಗೂ ಇತರೆ ವಸ್ತುಗಳನ್ನು ಬೇರೆ ಬೇರೆ ಜಾಗಗಳಲ್ಲಿ ಬಿಸಾಡಿ ಸಾಕ್ಷ್ಯ ನಾಶಕ್ಕೆ ಯತ್ನಿಸಿದ್ದ.

ಮಗಳು ಅಪಹರಣವಾದ ಬಗ್ಗೆ ಪೋಷಕರು ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಿದ್ದ ಅಂದಿನ ಇನ್‌ಸ್ಪೆಕ್ಟರ್ ರಂಗಪ್ಪ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪತ್ನಿಗೂ ಜೀವಾವಧಿ ಶಿಕ್ಷೆ: ಅಪಹರಣ ಹಾಗೂ ಕೊಲೆಯಲ್ಲಿ ಪತಿ ಸಲ್ಮಾನ್ ಜೊತೆ ಪತ್ನಿ ಶಬರಿನ್ ತಾಜ್ ಸಹ ಭಾಗಿಯಾಗಿದ್ದಳು. ವಿಚಾರಣೆ ಆರಂಭದಲ್ಲಿ ಆಕೆ ನ್ಯಾಯಾಲಯದ ಎದುರು ತಪ್ಪೊಪ್ಪಿಕೊಂಡಿದ್ದಳು. ಆಕೆಗೂ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು.

ದೊಡ್ಡಪ್ಪನನ್ನೂ ಕೊಂದಿದ್ದ!

'ಆರೋಪಿ ಸೈಯದ್ ಸಲ್ಮಾನ್ ಷಾ ಹಾಗೂ ಆತನ ಪತ್ನಿ ಶಬರಿನ್ ತಾಜ್, ಸಂಬಂಧಿಕರ ಬಳಿಯ ಹಣ ಹಾಗೂ ಚಿನ್ನಾಭರಣ ದೋಚಲು ಕೃತ್ಯ ಎಸಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಲ್ಮಾನ್‌ನ 65 ವರ್ಷದ ದೊಡ್ಡಪ್ಪ ಡಿ.ಜೆ.ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದರು. ಅವರನ್ನೇ ಕೊಲೆ ಮಾಡಿದ್ದ ಆರೋಪಿಗಳು, ಚಿನ್ನಾಭರಣ ದೋಚಿದ್ದರು. ಈ ಪ್ರಕರಣದಲ್ಲೂ ಆರೋಪಿಗಳ ಬಂಧನವಾಗಿತ್ತು' ಎಂದೂ ತಿಳಿಸಿವೆ.

ಪೊಲೀಸರನ್ನು ತಳ್ಳಿ ಪರಾರಿಯಾಗಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಪರೀಕ್ಷೆಗಾಗಿ ಬೌರಿಂಗ್ ಆಸ್ಪತ್ರೆಗೆ ಕರೆತಂದಿದ್ದ ವೇಳೆ ಪರಾರಿಯಾಗಿದ್ದ ಆರೋಪಿ ಕಿರಣ್‌ಕುಮಾರ್ ಎಂಬಾತ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

ಎನ್‌ಡಿಪಿಎಸ್ ಕಾಯ್ದೆಯಡಿ ಕಿರಣ್‌ಕುಮಾರ್‌ನನ್ನು ಬಂಧಿಸಿದ್ದ ಜೆ.ಪಿ. ನಗರ ಪೊಲೀಸರು, ವೈದ್ಯಕೀಯ ಪರೀಕ್ಷೆಗಾಗಿ ಜುಲೈ 13ರಂದು ಆಸ್ಪತ್ರೆಗೆ ಕರೆತಂದಿದ್ದರು. ಅದೇ ಸಂದರ್ಭದಲ್ಲಿ ಪೊಲೀಸರನ್ನು ತಳ್ಳಿ ಆತ ಪರಾರಿಯಾಗಿದ್ದ. ಈ ಬಗ್ಗೆ ಕಮರ್ಷಿಯಲ್ ಸ್ಟ್ರೀಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

'ಹೆಡ್ ಕಾನ್‌ಸ್ಟೆಬಲ್ ಕೇಶವಮೂರ್ತಿ ಅವರು ಕಿರಣ್‌ಕುಮಾರ್‌ನನ್ನು ಕೈಗೆ ಕೋಳ ಹಾಕಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಅದೇ ಸಂದರ್ಭದಲ್ಲಿ ಆರೋಪಿ, ಕೇಶವಮೂರ್ತಿ ಅವರನ್ನು ತಳ್ಳಿ ಬೀಳಿಸಿ ಕೋಳದ ಸಮೇತ ಪರಾರಿಯಾಗಿದ್ದ. ಹಲವು ಕಡೆ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ. ಜೆ.ಪಿ. ನಗರ ಠಾಣೆ ಪಿಎಸ್ಐ ರಘುಪತಿ ದೂರು ನೀಡಿದ್ದರು' ಎಂದು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಮೂಲಗಳು ಹೇಳಿವೆ.

'ಘಟನಾ ಸ್ಥಳ ಹಾಗೂ ಸುತ್ತಮುತ್ತಲ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಯಿತು. ಕೆಲ ಸುಳಿವು ಆಧರಿಸಿ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಪರಿಚಯಸ್ಥರ ಮನೆಗಳಲ್ಲಿ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಚಯಸ್ಥರ ಮನೆಯಲ್ಲಿ ಚಿನ್ನಾಭರಣ, ನಗದು ಕದ್ದಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಬ್ಯಾಡರಹಳ್ಳಿಯ ಶೇಖರ್ ಬಂಧಿತ ಆರೋಪಿ.

ಈತ ತನಗೆ ಪರಿಚಯಸ್ಥರ ಮನೆಗೆ ಆಗಾಗ ಬರುತ್ತಿದ್ದ. ಜುಲೈ 15ರಂದು ಮನೆಯಲ್ಲಿದ್ದ ಚಿನ್ನಾಭರಣ, ನಗದು ಕಳವಾಗಿತ್ತು. ಮನೆಯವರು ಶೇಖರ್ ಮೇಲೆ ಶಂಕಿಸಿ, ಪೊಲೀಸರಿಗೆ ದೂರು ನೀಡಿದ್ದರು.

'ಶೇಖರ್‌ನ ಬಗ್ಗೆ ವಿಚಾರಿಸಿದಾಗ ಆತ ತಲೆಮರೆಸಿಕೊಂಡಿರುವ ವಿಚಾರ ತಿಳಿಯಿತು. ಶೇಖರ್‌ನನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದಾಗ ಕಳ್ಳತನ ಬಗ್ಗೆ ಬಾಯ್ಬಿಟ್ಟಿದ್ದ. ಆರೋಪಿಯಿಂದ ₹4.50 ಲಕ್ಷ ಬೆಲೆ ಬಾಳುವ 110 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.


ಶೇಖರ್

ಕಳ್ಳತನದಲ್ಲಿ ಮಹಿಳೆ ಭಾಗಿ: ಸಂಬಂಧಿಕರ ಮನೆಯಲ್ಲೇ ಚಿನ್ನಾಭರಣ, ನಗದು ಕದ್ದಿದ್ದ ಆರೋಪದಡಿ ಮಹಿಳೆ ಸೇರಿ ಇಬ್ಬರನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

ಜ್ಞಾನಭಾರತಿಯ ಶ್ವೇತಾ ಹಾಗೂ ನಾಗರಬಾವಿ ಬಂಧಿತ ಆರೋಪಿಗಳು.

'ಕಳೆದ ಮಾರ್ಚ್‌ನಲ್ಲಿ ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಚಿನ್ನಾಭರಣ ಕಳವಾಗಿತ್ತು. ಈ ಸಂಬಂಧ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳು ಮನೆಯವರಿಗೆ ಪರಿಚಯಸ್ಥರೇ ಆಗಿದ್ದರು. ಮನೆಗೆ ನುಗ್ಗಿ ಬೀರುವಿನಲ್ಲಿ ಇಟ್ಟಿದ್ದ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕದ್ದು ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದರು. 'ಬಂಧಿತರಿಂದ ₹3.30 ಲಕ್ಷ ಬೆಲೆ ಬಾಳುವ 65 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದರು.

ಐದು ಬೈಕ್ ಜಪ್ತಿ: ಬಂಧನ

ಬೆಂಗಳೂರು: ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ದ್ವಿಚಕ್ರ ವಾಹನ ಕದ್ದಿದ್ದ ಆರೋಪದಡಿ ಇಬ್ಬರನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

ಅಬ್ದುಲ್ ರೆಹಮಾನ್ ಮತ್ತು ಶಹಬುದ್ದೀನ್ ಬಂಧಿತ ಆರೋಪಿಗಳು.

'ಠಾಣಾ ವ್ಯಾಪ್ತಿಯ ಮನೆಯೊಂದರ ಬಳಿ ನಿಲ್ಲಿಸಿದ್ದ ಬೈಕ್ ಜೂನ್ 10ರಂದು ಕಳವಾಗಿತ್ತು. ಈ ಸಂಬಂಧ ಬೈಕ್ ಮಾಲೀಕ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ಬೆನ್ನತ್ತಿದಾಗ ಈ ಇಬ್ಬರು ಸಿಕ್ಕಿಬಿದ್ದಿದ್ದಾರೆ' ಎಂದು ಪೊಲೀಸರು ತಿಳಿಸಿದರು.



'ಆರೋಪಿಗಳು ಕಾಟನ್‌ಪೇಟೆ, ಸಿಟಿ ಮಾರ್ಕೆಟ್, ಇಂದಿರಾನಗರ, ಹೈಗ್ರೌಂಡ್ ಸೇರಿದಂತೆ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಕೆಟಿಎಂ, ಪಲ್ಸರ್‌ನಂತಹ ಬೈಕ್‌ಗಳನ್ನು ಕದ್ದಿದ್ದರು. ಆರೋಪಿಗಳನ್ನು ದಸ್ತಗಿರಿ ಮಾಡಿ, ಕಳ್ಳತನ ಮಾಡಿದ್ದ ₹10 ಲಕ್ಷ ಬೆಲೆ ಬಾಳುವ ಐದು ಬೈಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಹೇಳಿದರು.

ಡ್ರಗ್ಸ್ ಜಪ್ತಿ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದಾಪುರ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಸೇರಿದಂತೆ ವಿವಿಧ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಕಾಮಾಕ್ಷಿಪಾಳ್ಯದ ಬಿ.ಆರ್.ಕೌಶಿಕ್ (25) ಹಾಗೂ ಪದ್ಮನಾಭನಗರದ ಎಸ್. ರಂಗನಾಥ್ (21) ಬಂಧಿತರು.

'ಇವರು ಲಾಲ್‌ಬಾಗ್ ಪಶ್ಚಿಮ ದ್ವಾರದ ಕಲ್ಯಾಣಿ ಬಳಿ ಕಾರಿನಲ್ಲಿ ಬಂದು ಮಾದಕ ವಸ್ತುಗಳಾದ ಗಾಂಜಾ, ಎಕ್ಸ್‌ಟಸಿ ಮಾತ್ರೆಗಳು, ಹ್ಯಾಶ್ ಆಯಿಲ್, ಎಲ್‌ಎಸ್‌ಡಿ ಸ್ಟ್ರಿಪ್‌ಗಳನ್ನು ಮಾರಾಟ ಮಾಡುತ್ತಿದ್ದರು. ಈ ಮಾಹಿತಿ ಮೇರೆಗೆ ದಾಳಿ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದು ಪೊಲೀಸರು ತಿಳಿಸಿದರು.



'ಆರೋಪಿಗಳಿಂದ ₹12.75 ಲಕ್ಷ ಬೆಲೆ ಬಾಳುವ 280 ಗ್ರಾಂ. ಗಾಂಜಾ, 0.3 ಮಿ.ಲೀ ಎಲ್‌ಎಸ್‌ಡಿ, 230 ಎಕ್ಸ್‌ಟಸಿ ಮಾತ್ರೆಗಳು, ಹ್ಯಾಶ್ ಆಯಿಲ್ ಹಾಗೂ ಎರಡು ಮೊಬೈಲ್, ಕಾರು, ನಗದು ಜಪ್ತಿ ಮಾಡಲಾಗಿದೆ' ಎಂದರು.

'ಬಂಧಿತ ಕೌಶಿಕ್ ಬಿ.ಎಸ್ಸಿ ಪದವೀಧರ. ಕುಮಾರಸ್ವಾಮಿ ಬಡಾವಣೆ ಠಾಣೆಯಲ್ಲಿ ದಾಖಲಾಗಿದ್ದ ಎನ್‌ಡಿಪಿಎಸ್ ಪ್ರಕರಣದಲ್ಲಿ ಎರಡು ತಿಂಗಳು ಜೈಲಿಗೆ ಹೋಗಿದ್ದ. ಫುಡ್‌ಪಾಂಡ್ ಕೆಲಸ ಮಾಡಿಕೊಂಡಿದ್ದ ರಂಗನಾಥ್, ಹಣ ಸಂಪಾದಿಸಲು ಮಾದಕ ವಸ್ತುಗಳ ಮಾರಾಟ ದಂಧೆಗೆ ಇಳಿದಿದ್ದ' ಎಂದರು.

ಪಾರ್ಸೆಲ್‌ನಲ್ಲಿ ಪಿಸ್ತೂಲ್; ವಿಮಾನ ನಿಲ್ದಾಣದಲ್ಲಿ ಆತಂಕ

ಬೆಂಗಳೂರು: ವಿಮಾನದ ಮೂಲಕ ಬಂದಿದ್ದ ಪಾರ್ಸೆಲ್‌ನಲ್ಲಿ ಪಿಸ್ತೂಲ್‌ಗಳು ಪತ್ತೆಯಾಗಿದ್ದರಿಂದ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಪಿಸ್ತೂಲ್ ಪರಿಶೀಲನೆ ನಡೆಸಿದಾಗ, ಅವು ಆಟಿಕೆ ಪಿಸ್ತೂಲ್‌ಗಳು ಎಂಬುದು ತಿಳಿದ ನಂತರವೇ ಆತಂಕ ದೂರವಾಯಿತು.

'ಇಸ್ತಾಂಬುಲ್‌ನಿಂದ ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾರ್ಗೋ ಮೂಲಕ ಪಾರ್ಸೆಲ್ ಬಂದಿತ್ತು. ಅದರಲ್ಲಿರುವ ವಸ್ತುಗಳ ಬಗ್ಗೆ ಸಿಬ್ಬಂದಿಗೆ ಅನುಮಾನ ಮೂಡಿತ್ತು. ಪಾರ್ಸೆಲ್ ತೆರೆದು ನೋಡಿದಾಗ, ಪಿಸ್ತೂಲ್‌ಗಳು ಇರುವುದು ಗೊತ್ತಾಗಿತ್ತು. ಸುದ್ದಿ ನಿಲ್ದಾಣದೆಲ್ಲೆಡೆ ಹರಡಿ, ಎಲ್ಲರೂ ಆತಂಕಗೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ಕಾರ್ಗೋ ಸಿಬ್ಬಂದಿ, ಭದ್ರತಾ ಅಧಿಕಾರಿಗಳಿಗೆ ಮಾಹಿತಿ ನೀಡಿ ಸ್ಥಳಕ್ಕೆ ಕರೆಸಿದ್ದರು. ಪಿಸ್ತೂಲ್ ಪರಿಶೀಲನೆ ನಡೆಸಿದ್ದ ಅಧಿಕಾರಿಗಳು, ಇವುಗಳು ಆಟಿಕೆ ಪಿಸ್ತೂಲ್‌ಗಳು ಎಂಬುದಾಗಿ ಹೇಳಿದರು. ಅವಾಗಲೇ ಸಿಬ್ಬಂದಿ ನಿಟ್ಟುಸಿರು ಬಿಟ್ಟರು' ಎಂದೂ ತಿಳಿಸಿವೆ.

ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ಗೆ ₹ 5.07 ಕೋಟಿ ವಂಚನೆ ಆರೋಪ

ಉದ್ಯಮಿ ಸೇರಿ ಹಲವರ ವಿರುದ್ಧ ಸಿಬಿಐ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಿರಾಸ್ತಿ ಖಾತೆ, ಅಭಿವೃದ್ಧಿ ಶುಲ್ಕ ಪಾವತಿಗೆ ಸಂಬಂಧಿಸಿದ ನಕಲಿ ದಾಖಲೆಗಳನ್ನು ಸೃಷ್ಟಿಸಿ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ಮುಖ್ಯ ಶಾಖೆಯಿಂದ ಸಾಲ ಪಡೆದು ₹ 5.07 ಕೋಟಿ ವಂಚಿಸಿದ ಆರೋಪದ ಮೇಲೆ ಹೊಸಪೇಟೆಯ ಅಕ್ಷತಾ ಮಿನರಲ್ಸ್ ಪ್ರೈವೇಟ್ ಲಮಿಟೆಡ್ ಅಧ್ಯಕ್ಷ ಸೂಗೂರು ಗುರುನಾಥ್ ಮಂಜುನಾಥ್ ಭಟ್ ಸೇರಿದಂತೆ ಹಲವರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

ಅದಿರು ರಫ್ತು ವಹಿವಾಟು ನಡೆಸುತ್ತಿರುವುದಾಗಿ ದಾಖಲೆ ಸಲ್ಲಿಸಿದ್ದ ಮಂಜುನಾಥ ಭಟ್ ಹಾಗೂ ಕಂಪನಿಯ ಮತ್ತೊಬ್ಬ ನಿರ್ದೇಶಕ ಆನೆಗುಂದಿ ನಾರಾಯಣಸ್ವಾಮಿ ಶ್ರೀನಿವಾಸ್, ₹ 6 ಕೋಟಿ ಸಾಲಕ್ಕೆ ಅರ್ಜಿ ಸಲ್ಲಿಸಿದ್ದರು. ಬೆಂಗಳೂರಿನ ಜೆ.ಸಿ. ನಗರ ಎಂ.ಆರ್. ಪಾಳ್ಯ ನಿವಾಸಿ ಲಕ್ಷ್ಮಮ್ಮ ಎಂಬುವವರ ಹೆಸರಿನ ಸ್ಥಿರಾಸ್ತಿ ದಾಖಲೆಗಳನ್ನು ಆಧಾರವಾಗಿ ನೀಡಿದ್ದರು. 2009 ಮತ್ತು 2010ರಲ್ಲಿ ಬ್ಯಾಂಕ್ ಆಫ್ ಇಂಡಿಯಾದಿಂದ ₹ 6.14 ಕೋಟಿ ಸಾಲ ಮಂಜೂರು ಮಾಡಲಾಗಿತ್ತು ಎಂಬ ಅಂಶ ಎಫ್‌ಐಆರ್‌ನಲ್ಲಿದೆ.

'2011ರ ಮಾರ್ಚ್‌ನಿಂದಲೂ ಅಕ್ಷತಾ ಮಿನರಲ್ಸ್ ಸಾಲದ ಖಾತೆ ಅನುತ್ಪಾದಕ ಆಸ್ತಿ (ಎನ್‌ಪಿಎ) ಸ್ಥಿತಿಯಲ್ಲಿದೆ. ಸದ್ಯ ₹ 5.07 ಕೋಟಿ ಬಾಕಿ ಇದೆ. ಭದ್ರತೆಯಾಗಿ ನೀಡಿದ್ದ ಸ್ಥಿರಾಸ್ತಿ ಹರಾಜಿಗೆ ಪ್ರಕ್ರಿಯೆ ಆರಂಭಿಸಲಾಗಿತ್ತು. ಆದರೆ, ಲಕ್ಷ್ಮಮ್ಮ ಹೆಸರಿನಲ್ಲಿ ಬಿಬಿಎಂಪಿಯಲ್ಲಿ ಯಾವುದೇ ಆಸ್ತಿಯ ಖಾತೆ ಇಲ್ಲ. ಆಸ್ತಿಯ ಖಾತಾ, ಸ್ಥಿರಾಸ್ತಿ ಗುರುತಿನ ಸಂಖ್ಯೆ, ಅಭಿವೃದ್ಧಿ ಶುಲ್ಕ ಮತ್ತು ತೆರಿಗೆ ಪಾವತಿಗೆ ಸಂಬಂಧಿಸಿದ ನಕಲಿ ದಾಖಲೆಗಳನ್ನು ಸೃಷ್ಟಿಸಿ ಬ್ಯಾಂಕ್‌ಗೆ ಸಲ್ಲಿಸಿ ವಂಚಿಸಿರುವುದು ಕಂಡುಬಂದಿದೆ. ಇದರಿಂದಾಗಿ ಆಸ್ತಿಯನ್ನು ಹರಾಜಿನ ಮೂಲಕ ಮಾರಾಟ ಮಾಡುವುದು ಸಾಧ್ಯವಾಗಿಲ್ಲ' ಎಂದು ಬ್ಯಾಂಕ್ ಆಫ್ ಇಂಡಿಯಾದ ಉಪ ವಲಯ ವ್ಯವಸ್ಥಾಪಕ ಬಾಲಸುಬ್ರಮಣಿಯನ್ ಜಗನ್ನಾಥ್ ಜುಲೈ 23ರಂದು ಸಿಬಿಐಗೆ ದೂರು ನೀಡಿದ್ದರು.

ಸಿಬಿಐ ಬೆಂಗಳೂರು ಘಟಕವು ಜುಲೈ 27ರಂದು ಸೂಗೂರು ಗುರುನಾಥ್ ಮಂಜುನಾಥ್ ಭಟ್, ಆನೆಗುಂದಿ ನಾರಾಯಣಸ್ವಾಮಿ ಶ್ರೀನಿವಾಸ್, ಲಕ್ಷ್ಮಮ್ಮ ಅವರ ಮಗ ರಾಮಮೂರ್ತಿ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಸಿಬಿಐ ಎಸ್‌ಪಿ ಥಾಮ್ಸನ್ ಜೋಸ್ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ತಮ್ಮಯ್ಯ ರಾಜಶೇಖರ ತನಿಖೆ ಆರಂಭಿಸಿದ್ದಾರೆ.

ಕಿವಿ ಕತ್ತರಿಸಿದ್ದ ಕೋಪಕ್ಕೆ ರೌಡಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಜುಲೈ 28ರಂದು ನಡೆದಿದ್ದ ರೌಡಿ ಹರೀಶ್ ಅಲಿಯಾಸ್ ಮಿಠಾಯಿ ಹತ್ಯೆ ಸಂಬಂಧ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಬಾಣಸವಾಡಿ ನಿವಾಸಿಗಳಾದ ರಕ್ಷಿತ್, ನೆಲ್ಸನ್, ಅವಿನಾಶ್, ಸುಭಾಷ್ ಹಾಗೂ ಇಂದ್ರಜಿತ್ ಬಂಧಿತರು. ಅವರಿಂದ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಸವೇಶ್ವರನಗರ ಠಾಣೆ ರೌಡಿ ಪಟ್ಟಿಯಲ್ಲಿ ಹರೀಶ್ ಹೆಸರಿತ್ತು. ತನ್ನದೇ ತಂಡ ಕಟ್ಟಿಕೊಂಡು ಬಾಣಸವಾಡಿ, ಹೆಣ್ಣೂರು ಹಾಗೂ ಸುತ್ತಮುತ್ತ ಅಪರಾಧ ಕೃತ್ಯ ಎಸಗುತ್ತಿದ್ದ. 2017ರಲ್ಲಿ ರಕ್ಷಿತ್ ಮೇಲೆ ಹಲ್ಲೆ ಮಾಡಿದ್ದ ಆತ, ಬಲ ಕಿವಿ ಕತ್ತರಿಸಿದ್ದ. ಜೊತೆಗೆ, ಆತನ ಅಣ್ಣನಿಗೂ ಜೀವ ಬೆದರಿಕೆ ಹಾಕಿದ್ದ. ಅದರಿಂದ ಕೋಪಗೊಂಡಿದ್ದ ರಕ್ಷಿತ್, ಸಹಚರರ ಜೊತೆ ಸೇರಿ ಹರೀಶ್‌ನನ್ನು ಹತ್ಯೆ ಮಾಡಿ ಸೇಡು ತೀರಿಸಿಕೊಂಡಿದ್ದಾನೆ. ಈ ಬಗ್ಗೆ ಆತನೇ ಹೇಳಿಕೆ ನೀಡಿದ್ದಾನೆ' ಎಂದೂ ತಿಳಿಸಿದರು.

ಠಾಣೆಯಿಂದ ಹೊರಬಂದಿದ್ದಾಗಲೇ ದಾಳಿ: 'ಪ್ರಕರಣವೊಂದರಲ್ಲಿ ಜಾಮೀನು ಪಡೆದಿದ್ದ ರೌಡಿ ಹರೀಶ್, ಸಹಿ ಮಾಡಲು ಬಾಣಸವಾಡಿ ಠಾಣೆಗೆ ಬಂದಿದ್ದ. ಈ ಬಗ್ಗೆ ಮಾಹಿತಿ ಪಡೆದ ಆರೋಪಿಗಳು, ತಂಡ ಕಟ್ಟಿಕೊಂಡು ಠಾಣೆ ಸಮೀಪಕ್ಕೆ ಬಂದಿದ್ದರು. ಠಾಣೆಯಿಂದ ಹೊರಬಂದಿದ್ದ ಹರೀಶ್, ಎಚ್‌ಆರ್‌ಬಿಆರ್ ಬಡಾವಣೆಯ ಸಿಎಂಆರ್ ಕಾಲೇಜು ಬಳಿ ರಸ್ತೆಯಲ್ಲಿ ಹೊರಟಿದ್ದ. ಅದೇ ಸಂದರ್ಭದಲ್ಲೇ ಆರೋಪಿಗಳು ದಾಳಿ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಮಾರಕಾಸ್ತ್ರಗಳಿಂದ ಹರೀಶ್‌ಗೆ ಹೊಡೆದಿದ್ದರು. ರಸ್ತೆಯಲ್ಲಿ ಕುಸಿದು ಬಿದ್ದಿದ್ದ ಹರೀಶ್ ತಲೆ ಮೇಲೆ ಸಿಮೆಂಟ್ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಿದ್ದರು' ಎಂದೂ ತಿಳಿಸಿದರು.

ಕುದೂರು: ಸರ ಕಳ್ಳರ ಬಂಧನ

ಪ್ರಜಾವಾಣಿ ವಾರ್ತೆ

ಮಾಗಡಿ: ತಾಲ್ಲೂಕಿನಲ್ಲಿ ಸರಗಳ್ಳರನ್ನು ಬಂಧಿಸಿರುವ ಪೊಲೀಸರು, ಅವರಿಂದ ₹4.86 ಲಕ್ಷ ಮೌಲ್ಯದ ಒಟ್ಟು 108 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರಗಳನ್ನು ವಶಪಡಿಸಿಕೊಂಡಿದ್ದಾರೆ.

ತುಮಕೂರಿನ ಕೊರಟಗೆರೆ ತಾಲ್ಲೂಕಿನ ದಿಣ್ಣೆಪಾಳ್ಯದವರಾದ ಕುಮಾರ ಡಿ.ಎನ್. ಹಾಗೂ ಹರಿ ಬಂಧಿತರು.

ಇವರಿಬ್ಬರು ಬೆಂಗಳೂರಿನಲ್ಲಿ ರಾಜಗೋಪಾಲ ನಗರದಲ್ಲಿ ವಾಸವಿದ್ದು, ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದಾರೆ. ಐದು ತಿಂಗಳ ಹಿಂದೆ ಕಗ್ಗಲಿಪುರ ಪೊಲೀಸ್ ಠಾಣಾ ವ್ಯಾಪ್ತಿಯ ತಾತಗುಣಿ ಬಳಿ ಮನೆಯೊಂದರ ಮುಂದೆ ಕುಳಿತಿದ್ದ ಹೆಂಗಸಿನ ಕತ್ತಿನಿಂದ 30 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋಗಿದ್ದರು.



ಬೈಕ್ ಹಸ್ತಾಂತರ

ಮಹಿಳೆಯರ ರಕ್ಷಣೆಗೆ ತುರ್ತಾಗಿ ಸ್ಪಂದಿಸಲು 'ನಿರ್ಭಯಾ ನಿಧಿ'ಯಡಿ ರೈಲ್ವೆ ಪೊಲೀಸರಿಗೆ ವಿಶೇಷ ಬೈಕ್‌ಗಳನ್ನು ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಶುಕ್ರವಾರ ಹಸ್ತಾಂತರಿಸಲಾಯಿತು

–ಪ್ರಜಾವಾಣಿ ಚಿತ್ರ

ಟೋಯಿಂಗ್ ಜಟಾಪಟಿ; ಸಿಬ್ಬಂದಿ ಮೇಲೆ ಹೆಲ್ಮೆಟ್‌ನಿಂದ ಹಲ್ಲೆ

ಬೆಂಗಳೂರು: ನಗರದಲ್ಲಿ ವಾಹನಗಳ ಟೋಯಿಂಗ್ ವೇಳೆ ಸಾರ್ವಜನಿಕರು ಹಾಗೂ ಪೊಲೀಸರ ನಡುವೆ ಜಟಾಪಟಿ ನಡೆದಿದ್ದು, ಟೋಯಿಂಗ್ ವಾಹನದ ಸಿಬ್ಬಂದಿ ಮೇಲೆ ಹಲ್ಲೆ ಮಾಡಲಾಗಿದೆ.

ಯಲಹಂಕ ನ್ಯೂ ಟೌನ್ ಬಳಿ ಬುಧವಾರ (ಜುಲೈ 28) ಸುತ್ತಾಡಿದ್ದ ಸಂಚಾರ ಪೊಲೀಸರು, ರಸ್ತೆ ಪಕ್ಕ-ಪಕ್ಕದಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಟೋಯಿಂಗ್ ಮಾಡಲಾರಂಭಿಸಿದ್ದರು. ಸ್ಥಳದಲ್ಲಿ ಯಾವುದೇ ನೋ ಪಾರ್ಕಿಂಗ್ ಫಲಕವಿರಲಿಲ್ಲ. ಅದನ್ನು ಪ್ರಶ್ನಿಸಿದ್ದ ಸಾರ್ವಜನಿಕರು, ಫಲಕವಿಲ್ಲದ ಜಾಗದಿಂದ ವಾಹನ ಟೋಯಿಂಗ್ ಮಾಡದಂತೆ ಹೇಳಿದ್ದರು.

ಅಷ್ಟಕ್ಕೆ ಕೋಪಗೊಂಡ ಪೊಲೀಸರು ಹಾಗೂ ಟೋಯಿಂಗ್ ಸಿಬ್ಬಂದಿ, ವಾಹನಗಳನ್ನು ಎಳೆದೊಯ್ದು ಟೋಯಿಂಗ್ ವಾಹನದಲ್ಲಿ ಇರಿಸಲು ಮುಂದಾಗಿದ್ದರು. ಅದೇ ಸಂದರ್ಭದಲ್ಲೇ ಜಗಳ ಶುರುವಾಗಿತ್ತು. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಆಕ್ರೋಶಗೊಂಡ ಜನರ ಗುಂಪು, ಟೋಯಿಂಗ್ ವಾಹನ ಏರಿ ಸಿಬ್ಬಂದಿ ಮೇಲೆ ಹೆಲ್ಮೆಟ್‌ನಿಂದ ಹಲ್ಲೆ ಮಾಡಿದ್ದಾರೆ. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಸುಖಾಸುಮ್ಮನೇ ಜನರಿಗೆ ಪೊಲೀಸರು ತೊಂದರೆ ನೀಡುತ್ತಿದ್ದಾರೆ. ಫಲಕ ಇಲ್ಲದ ಜಾಗದಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಟೋಯಿಂಗ್ ಮಾಡುತ್ತಿದ್ದರು. ಹಲವು ಬಾರಿ ವಿರೋಧಿಸಿದರೂ ಪ್ರಯೋಜನವಾಗಿಲ್ಲ. ಬುಧವಾರ ಟೋಯಿಂಗ್ ಮಾಡಲು ಬಂದಿದ್ದಾಗ ಗಲಾಟೆ ಆಯಿತು' ಎಂದು ಸ್ಥಳೀಯರೊಬ್ಬರು ಹೇಳಿದರು.

ಟೋಯಿಂಗ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿರುವ ಆರೋಪದಡಿ ಮೂವರ ವಿರುದ್ಧ ಯಲಹಂಕ ನ್ಯೂ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಟೋಯಿಂಗ್ ಸಿಬ್ಬಂದಿ ತಪ್ಪು ಮಾಡಿದರೆ ದೂರು ನೀಡಬಹುದಿತ್ತು. ಹಲ್ಲೆ ಮಾಡಿರುವುದು ಅಪರಾಧ. ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ' ಎಂದು ಪೊಲೀಸರು ಹೇಳಿದರು.

ಖಾತಾ ಬದಲಾವಣೆಗೆ ಲಂಚ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನದ ಖಾತಾ ಬದಲಾವಣೆ ಪ್ರಕ್ರಿಯೆ ಪೂರೈಸಲು ಬಿಬಿಎಂಪಿ ರಾಜರಾಜೇಶ್ವರಿನಗರ ವಲಯ ಕಚೇರಿಯ ತೆರಿಗೆ ನಿರೀಕ್ಷಕನ ಪರವಾಗಿ ₹ 7,000 ಲಂಚ ಪಡೆದ ದಲ್ಲಾಳಿಯನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶುಕ್ರವಾರ ಬಂಧಿಸಿದೆ. ತೆರಿಗೆ ನಿರೀಕ್ಷಕ ತಲೆಮರೆಸಿಕೊಂಡಿದ್ದಾರೆ.

ತೆರಿಗೆ ನಿರೀಕ್ಷಕ ಬಾಬು ಎಂಬುವವರ ಕಚೇರಿಯಲ್ಲಿ ಮಧ್ಯವರ್ತಿಯಾಗಿದ್ದ ಸಂತೋಷ್ ಎಂಬ ಖಾಸಗಿ ವ್ಯಕ್ತಿ ಬಂಧಿತ. ಬಾಬು ಹಾಗೂ ಇತರ ಆರೋಪಿಗಳು ಎಸಿಬಿ ಅಧಿಕಾರಿಗಳ ಕಾರ್ಯಾಚರಣೆ ವಿಷಯ ತಿಳಿದು ನಾಪತ್ತೆಯಾಗಿದ್ದಾರೆ. ಅವರ ಬಂಧನಕ್ಕೆ ಶೋಧ ನಡೆದಿದೆ.

ರಾಜರಾಜೇಶ್ವರಿ ನಗರ ವಲಯ ಕಚೇರಿಯ ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ಹೊಂದಿರುವ ವ್ಯಕ್ತಿಯೊಬ್ಬರು ಖಾತಾ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದ್ದರು. ಅಧಿಕಾರಿ ಬಾಬು ಪರವಾಗಿ ಮಾತುಕತೆ ನಡೆಸಿದ್ದ ದಲ್ಲಾಳಿ ಸಂತೋಷ್, ₹ 10,000 ಲಂಚಕ್ಕೆ ಬೇಡಿಕೆ ಇಟ್ಟಿದ್ದ. ಚೌಕಾಸಿ ಮಾಡಿದಾಗ ₹ 7,000 ನೀಡಿದರೆ ಖಾತಾ ಬದಲಾವಣೆ ಮಾಡುವುದಾಗಿ ಒಪ್ಪಿಕೊಂಡಿದ್ದ. ಈ ಕುರಿತು ಆಸ್ತಿ ಮಾಲೀಕರು ಎಸಿಬಿ ಬೆಂಗಳೂರು ನಗರ ಘಟಕಕ್ಕೆ ದೂರು ನೀಡಿದ್ದರು.

ಶುಕ್ರವಾರ ತೆರಿಗೆ ನಿರೀಕ್ಷಕರ ಕಚೇರಿಯಲ್ಲೇ ಲಂಚ ಪಡೆದ ಸಂತೋಷ್‌ನನ್ನು ಎಸಿಬಿ ಡಿವೈಎಸ್‌ಪಿ ಪ್ರತಾಪ್ ರೆಡ್ಡಿ ನೇತೃತ್ವದ ತಂಡ ಬಂಧಿಸಿದೆ. ಖಾತಾ ಬದಲಾವಣೆಗೆ ಸಂಬಂಧಿಸಿದ ಕಡತವನ್ನೂ ಆರೋಪಿಯಿಂದ ವಶಕ್ಕೆ ಪಡೆಯಲಾಗಿದೆ. ಎಸಿಬಿ ಬೆಂಗಳೂರು ನಗರ ಎಸ್‌.ಪಿ. ಯತೀಶ್ ಚಂದ್ರ ಜಿ.ಎಚ್. ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ.

ಯಕ್ಷಗಾನ ಪ್ರಸಂಗ ರಚನಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಯಕ್ಷಸಿಂಚನ ಟ್ರಸ್ಟ್ ಯಕ್ಷಗಾನ ಸಾಹಿತ್ಯಾಸಕ್ತರಿಗಾಗಿ ಯಕ್ಷಗಾನ ಪ್ರಸಂಗ ರಚನಾ ಸ್ಪರ್ಧೆ ಏರ್ಪಡಿಸಿದೆ.

ವಿಜೇತರಿಗೆ ₹10 ಸಾವಿರ (ಪ್ರಥಮ), ₹5 ಸಾವಿರ (ದ್ವಿತೀಯ) ನಗದು ಬಹುಮಾನ ಹಾಗೂ ಪ್ರಶಸ್ತಿಪತ್ರ ನೀಡಲಾಗುವುದು.

ಪ್ರಸಂಗವು ಪೌರಾಣಿಕ ಪ್ರಸಂಗವಾಗಿರಬೇಕು. ಕಥೆಯ ಎಳೆ ಯಾವುದಾದರೂ ಪುರಾಣಗಳಲ್ಲಿ ದಾಖಲಾಗಿರಬೇಕು. ಉತ್ತಮ ಗುಣಮಟ್ಟದ ಪ್ರಸಂಗವನ್ನು ಯಕ್ಷಗಾನ ಪ್ರಸಂಗಕೋಶದಲ್ಲಿ ಪ್ರಕಟಿಸಲಾಗುವುದು. ಅಂಚೆ ಅಥವಾ ಇಮೇಲ್ ಮೂಲಕ ಪ್ರಸಂಗವನ್ನು ತಲುಪಿಸಬೇಕು.

ಪ್ರಸಂಗ ರಚನೆಗೆ 4 ತಿಂಗಳ ಕಾಲಾವಕಾಶ ನೀಡಲಾಗುವುದು. ಸ್ಪರ್ಧೆಯು ಆಗಸ್ಟ್ 1ರಿಂದ ಆರಂಭಗೊಂಡು ನವೆಂಬರ್ 30ಕ್ಕೆ ಮುಕ್ತಾಯಗೊಳ್ಳುತ್ತದೆ. ಆಸಕ್ತರು ಸೆಪ್ಟೆಂಬರ್ 1ರೊಳಗೆ ನೋಂದಣಿ ಮಾಡಿಕೊಳ್ಳಬೇಕು.

ಸ್ಪರ್ಧಿಗಳು ತಮ್ಮ ವಿವರಗಳನ್ನು ಇಮೇಲ್ ವಿಳಾಸ sinchana.yaksha@gmail.com ಅಥವಾ ಸಂಸ್ಥೆಯ ವಿಳಾಸಕ್ಕೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಯಕ್ಷಸಿಂಚನ ಟ್ರಸ್ಟ್, ವಾಸ್ತು ಗ್ರೀನ್ಸ್, ಕೋಡಿಪಾಳ್ಯ ಮುಖ್ಯರಸ್ತೆ, ಬೆಂಗಳೂರು. ಸಂಪರ್ಕ: 9986384205, 9986363495

ದುಬೈಗೆ ರಕ್ತಚಂದನ ಸಾಗಣೆ ಯತ್ನ: ವಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ದುಬೈಗೆ ಸಾಗಣೆ ಮಾಡಲು ಯತ್ನಿಸಿದ್ದ ₹6ಕೋಟಿ ಬೆಲೆ ಬಾಳುವ ರಕ್ತಚಂದನವನ್ನು ಕೆಲವು ಪೈಪ್‌ಗಳಲ್ಲಿ ಪಾರ್ಸೆಲ್ ಮಾಡಿ ಕಳುಹಿಸುತ್ತಿರುವುದನ್ನು ಕಸ್ಟಮ್ಸ್ ಅಧಿಕಾರಿಗಳು ಪತ್ತೆ ಹಚ್ಚಿ, ಪರಿಶೀಲನಾ ಸಮಯದಲ್ಲಿ ವಶಪಡಿಸಿಕೊಂಡಿದ್ದಾರೆ.

ರಕ್ತಚಂದನವನ್ನು ಪೈಪ್‌ಗಳಲ್ಲಿ ಪಾರ್ಸೆಲ್ ಮಾಡಿ ದುಬೈಗೆ ಸಾಗಿಸಲು ಹುನ್ನಾರ ನಡೆಸಿದ್ದರು. ಅಕ್ರಮವಾಗಿ ನಿಷೇಧಿತ ರಕ್ತಚಂದನ ರವಾನೆ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಕಸ್ಟಮ್ಸ್ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	113.95	12,044	5,204
ಹಾರಂಗಿ	2,859	2,855.55	4,257	4,220
ಕಬಿನಿ	2,284	2,279.87	8,815	5,000
ಹೇಮಾವತಿ	2,922	2,919.25	10,442	11,460
ಲಿಂಗನಮಕ್ಕಿ	1,819	1,806.20	18,552	-
ಸೂಪಾ (ಮೀ)	564	551.54	11,054	2,622
ಮಾಣಿ	594.36	581.38	1,799	-
ತುಂಗಭದ್ರಾ	1,633	1,632.44	59,614	72,947
ಮಲಪ್ರಭಾ	2,079.5	2,074.40	6,407	1,694
ಘಟಪ್ರಭಾ	2,175	2,173.50	10,521	4,480
ಭದ್ರಾ	186	181.4	8,055	2,812
ಆಲಮಟ್ಟಿ (ಮೀ)	519.60	517.19	4,35,692	4,08,123
ನಾರಾಯಣಪುರ (ಮೀ)	492.25	489.43	4,23,000	4,17,740

*ನೆಲಮಟ್ಟದಿಂದ

ಕೃಷ್ಣೆಯ ಪ್ರವಾಹ ಯಥಾಸ್ಥಿತಿ

ಪ್ರಜಾವಾಣಿ ವಾರ್ತೆ

ರಾಯಚೂರು / ಯಾದಗಿರಿ: ನಾರಾಯಣಪುರ ಜಲಾಶಯದಿಂದ ಕೃಷ್ಣಾ ನದಿಗೆ ಹೊರಬಿಡುವ ನೀರಿನ ಪ್ರಮಾಣ ಏರುಗತಿಯಲ್ಲಿದ್ದು, ಯಾದಗಿರಿ ಜಿಲ್ಲೆಯಲ್ಲಿ ನದಿತೀರದ ಗ್ರಾಮಗಳಲ್ಲಿ ಆತಂಕ ತಲೆದೋರಿದೆ.

ಯಾದಗಿರಿ ಜಿಲ್ಲೆಯ ಶಹಾಪುರ, ಸುರಪುರ, ವಡಗೇರಾ ತಾಲ್ಲೂಕಿನ ಸಾವಿರಾರು ಎಕರೆಯಲ್ಲಿ ಬೆಳೆ ಜಲಾವೃತವಾಗಿದೆ. ಸುರಪುರ ತಾಲ್ಲೂಕಿನಲ್ಲಿ 15 ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ತುಂಗಭದ್ರಾ ನದಿಯ ಪ್ರವಾಹ ಮಟ್ಟ ಯಥಾಸ್ಥಿತಿಯಲ್ಲಿದೆ.

ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿಯು ತಗ್ಗಿದೆ. ಮಹಾರಾಷ್ಟ್ರ ಮತ್ತು ಗಡಿ ಭಾಗದಲ್ಲಿ ಮಳೆ ಬಹುತೇಕ ಕಡಿಮೆಯಾಗಿದೆ. ಮಹಾರಾಷ್ಟ್ರದ ಕಡೆಯಿಂದ 3.04 ಲಕ್ಷ ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಬಂದು ಸೇರುತ್ತಿದೆ. ಚಿಕ್ಕೋಡಿ, ಕಾಗವಾಡ, ರಾಯಬಾಗ ಮತ್ತು ಅಥಣಿ ತಾಲ್ಲೂಕುಗಳ ನದಿ ತೀರದ ಗ್ರಾಮಗಳು ಜಲಾವೃತ ಸ್ಥಿತಿಯಲ್ಲೇ ಇವೆ. ಮಲಪ್ರಭಾ, ಮಾರ್ಕಂಡೇಯ ಹಾಗೂ ಘಟಪ್ರಭಾ ನದಿಗಳಲ್ಲಿಯೂ ಪ್ರವಾಹ ತಗ್ಗಿದೆ.

ಶಿವಮೊಗ್ಗ ವರದಿ: ಜಿಲ್ಲೆಯಲ್ಲಿ ಹೊಸನಗರ, ಸೊರಬ, ಶಿಕಾರಿಪುರ, ಸಾಗರ ತಾಲ್ಲೂಕಿನಲ್ಲಿ ವಿವಿಧೆಡೆ ಸಾಧಾರಣ ಮಳೆಯಾಗಿದೆ. 186 ಅಡಿ ಸಾಮರ್ಥ್ಯದ ಭದ್ರಾ ಜಲಾಶಯದಲ್ಲಿ ನೀರಿನ ಮಟ್ಟ 181.90 ಅಡಿಗೆ ತಲುಪಿದೆ. ಲಿಂಗನಮಕ್ಕಿ ಜಲಾಶಯಕ್ಕೆ 21 ಸಾವಿರ ಕ್ಯುಸೆಕ್, ತುಂಗಾ ಜಲಾಶಯಕ್ಕೆ 16 ಸಾವಿರ ಕ್ಯುಸೆಕ್ ಒಳಹರಿವು ಇದ್ದು, ಅಷ್ಟೇ ಪ್ರಮಾಣದ ನೀರು ಬಿಡಲಾಗುತ್ತಿದೆ.

ಬಿರುಸಿನ ಮಳೆ: ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ತಲಕಾವೇರಿ, ಭಾಗಮಂಡಲ, ಕಕ್ಕಬ್ಬೆ, ಕುಂಜಿಲ ಭಾಗದಲ್ಲಿ ಬಿರುಸಿನ ಮಳೆಯಾಗಿದೆ.



ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ಅನಕಸುಗೂರು ಗ್ರಾಮದಲ್ಲಿ ಭತ್ತದ ಗದ್ದೆ ಜಲಾವೃತವಾಗಿರುವುದು

ರಬ್ಬರ್ ಸ್ಟಾಂಪ್ ಸಿ.ಎಂ: ಟೀಕೆ

ಹುಬ್ಬಳ್ಳಿ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಬ್ಬರ್ ಸ್ಟಾಂಪ್ ಮುಖ್ಯಮಂತ್ರಿಯಾಗಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶುಕ್ರವಾರ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷಗಳು ಆರೋಪಿಸದಿದ್ದರೂ ಬೊಮ್ಮಾಯಿ ಅವರೇ ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ಇದು, ಅವರ ಮನಸ್ಥಿತಿಯನ್ನು ತೋರಿಸುತ್ತದೆ' ಎಂದರು. ರಾಜ್ಯದಲ್ಲಿ ಪ್ರವಾಹದಿಂದ ಸಂಕಷ್ಟ ಎದುರಿಸುತ್ತಿರುವ ಜನರ ಸಮಸ್ಯೆ ಆಲಿಸಬೇಕಿದ್ದ ಮುಖ್ಯಮಂತ್ರಿ ಹಾಗೂ ಬಿಜೆಪಿ ಶಾಸಕರು, ಸಚಿವರಾಗುವುದಕ್ಕಾಗಿ ದೆಹಲಿ ಯಾತ್ರೆ ನಡೆಸಿದ್ದಾರೆ ಎಂದೂ ದೂರಿದರು.

'ನನ್ನ ಶಕ್ತಿ ಧಾರೆಯೆರೆವೆ; ತಂದೆ ಹೆಸರು ಉಳಿಸುವೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕಾಂಗ್ರೆಸ್ ಪಕ್ಷಕ್ಕೆ ನನ್ನ ಶಕ್ತಿ ಎಲ್ಲವನ್ನೂ ಧಾರೆಯೆರೆಯುವೆ. ತಂದೆ ಎಸ್.ಬಂಗಾರಪ್ಪ ಅವರ ಹೆಸರು ಉಳಿಸುವಂತಹ ಕೆಲಸ ಮಾಡುವೆ' ಎಂದು ಮಾಜಿ ಶಾಸಕ ಮಧು ಬಂಗಾರಪ್ಪ ಭರವಸೆ ನೀಡಿದರು.

ಹುಬ್ಬಳ್ಳಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್ ತೊರೆದು ಬೆಂಬಲಿಗರೊಂದಿಗೆ ಕಾಂಗ್ರೆಸ್‌ಗೆ ಸೇರ್ಪಡೆಯಾದ ಅವರು, 'ನನಗೆ ಇದ್ದದ್ದು ಒಂದೇ ಪಕ್ಷ. ಅದು ಬಂಗಾರಪ್ಪ ಪಕ್ಷ. ಅವರ ನೆರಳಿನಲ್ಲಿಯೇ ಬೆಳೆದೆ. ನನ್ನ ಮೇಲೆ ನಂಬಿಕೆ ಇಟ್ಟು, ಕಾಂಗ್ರೆಸ್‌ಗೆ ಬರಮಾಡಿಕೊಂಡಿರುವವರ ವಿಶ್ವಾಸ ಉಳಿಸುವಂತಹ ಕೆಲಸವನ್ನು ಮಾಡುತ್ತೇನೆ' ಎಂದರು.

'ಯಾವುದೇ ಹುದ್ದೆಯ ಆಕಾಂಕ್ಷಿಯಾಗಿ ಪಕ್ಷಕ್ಕೆ ಬಂದಿಲ್ಲ. ತಂದೆ ಹೆಸರಿಗಿಂತ ನನಗೆ ದೊಡ್ಡ ಹುದ್ದೆ ಇಲ್ಲ. ಯಾವ ಜವಾಬ್ದಾರಿ ಕೊಟ್ಟರೂ ನಿರ್ವಹಿಸುವೆ. ತಂದೆಯಂತೆ, ಜಾತಿ ಮೀರಿ ರಾಜಕಾರಣ ಮಾಡುವೆ' ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, 'ಮಧು ಬಂಗಾರಪ್ಪ ಅವರು ಕಾಂಗ್ರೆಸ್ ಸೇರಿದ ಸಂದರ್ಭದಲ್ಲೇ ಶಿವಮೊಗ್ಗದಲ್ಲಿ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಕಾಲ ಮುಗಿಯುತ್ತಾ ಬಂದಿದೆ. ತಂದೆಯ ವಾರಸುದಾರನಾಗಿ, ಭವಿಷ್ಯದ ನಾಯಕನಾಗಿ ಬೆಳೆಯಬೇಕು' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ಈಶ್ವರ ಖಂಡ್ರೆ ಸೇರಿ ಹಲವು ಮುಖಂಡರು ಇದ್ದರು.



ಹುಬ್ಬಳ್ಳಿಯಲ್ಲಿ ಶುಕ್ರವಾರ ನಡೆದ ಮಾಜಿ ಶಾಸಕ ಮಧು ಬಂಗಾರಪ್ಪ ಅವರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ, ಮುಖಂಡರು ಪಕ್ಷದ ಧ್ವಜವನ್ನು ಅವರಿಗೆ ನೀಡಿ ಬರಮಾಡಿಕೊಂಡರು

ಯೋಧನ ಮೇಲೆ ಹಲ್ಲೆ: ಆಕ್ರೋಶ

ಮಡಿಕೇರಿ: ಯೋಧ ಅಶೋಕ್ ಕುಮಾರ್ ಹಾಗೂ ಅವರ ಕುಟುಂಬದ ಮೇಲಿನ ಹಲ್ಲೆ ಪ್ರಕರಣ ಖಂಡಿಸಿ ನಗರದಲ್ಲಿ ಶುಕ್ರವಾರ ಮಾಜಿ ಸೈನಿಕರು ಬೃಹತ್ ಪ್ರತಿಭಟನೆ ನಡೆಸಿದರು.

ಕೊಡವ ಸಮಾಜ, ಅರೆಭಾಷೆಗೌಡ ಸಮಾಜ, ಹಿಂದೂ ಜಾಗರಣಾ ವೇದಿಕೆ, ಬಜರಂಗದಳ ಹಾಗೂ ಬೇರೆ ಜಿಲ್ಲೆಗಳ ಮಾಜಿ ಸೈನಿಕರ ಸಂಘಗಳ ನೂರಾರು ಮಂದಿ ಪ್ರತಿಭಟನೆಗೆ ಬೆಂಬಲ ಸೂಚಿಸಿದರು.

ಜಿಲ್ಲಾಧಿಕಾರಿ, ಎಸ್‌ಪಿ ಸ್ಥಳಕ್ಕೆ ಬರುವಂತೆ ಪ್ರತಿಭಟನಕಾರರು ಪಟ್ಟು ಹಿಡಿದರು. ಡಿಸಿ, ಎಸ್‌ಪಿ ಮಧ್ಯಾಹ್ನ ಮನವಿ ಸ್ವೀಕರಿಸಿದ ನಂತರ ಪ್ರತಿಭಟನೆ ಕೊನೆಗೊಂಡಿತು. 'ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಮಾಜಿ ಸೈನಿಕರು ಆಗ್ರಹಿಸಿದರು.

'ತನಿಖೆ ನ್ಯಾಯಯುತವಾಗಿ ನಡೆಯಲಿದೆ. ಆರೋಪಿಗಳನ್ನು ರೌಡಿಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ವರಿಷ್ಠಾಧಿಕಾರಿ ಕ್ಷಮಾ ಮಿಶ್ರಾ ಭರವಸೆ ನೀಡಿದರು.



ಯೋಧನ ಮೇಲಿನ ಹಲ್ಲೆ ಖಂಡಿಸಿ ಮಡಿಕೇರಿಯಲ್ಲಿ ಶುಕ್ರವಾರ ಮಾಜಿ ಸೈನಿಕರು ಬೃಹತ್ ಪ್ರತಿಭಟನೆ ನಡೆಸಿದರು

ತಹಶೀಲ್ದಾರ್ ಹುದ್ದೆಗೆ ಎರವಲು ಸೇವೆ ಇಲ್ಲ

ಬೆಂಗಳೂರು: ಗ್ರೇಡ್–1 ಮತ್ತು ಗ್ರೇಡ್–2 ತಹಶೀಲ್ದಾರ್ ಹುದ್ದೆಗಳಿಗೆ ಬೇರೆ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸುವುದನ್ನು ನಿರ್ಬಂಧಿಸಿ ರಾಜ್ಯ ನಾಗರಿಕ ಸೇವಾ ನಿಯಮಗಳು ಮತ್ತು ರಾಜ್ಯ ಸಿವಿಲ್ ಸೇವಾ ಕಾಯ್ದೆಗೆ ತಂದಿರುವ ತಿದ್ದುಪಡಿಯನ್ನು ಜಾರಿಗೊಳಿಸಿ ಶುಕ್ರವಾರ ಅಧಿಸೂಚನೆ ಹೊರಡಿಸಲಾಗಿದೆ.

ಕಂದಾಯ ಇಲಾಖೆಯ ಗ್ರೇಡ್– 1 ಮತ್ತು ಗ್ರೇಡ್–2 ತಹಶೀಲ್ದಾರ್ ಹುದ್ದೆಗಳಿಗೆ ಅನ್ಯ ಇಲಾಖೆಗಳ ಅಧಿಕಾರಿಗಳನ್ನು ಎರವಲು ಸೇವೆ ಆಧಾರದಲ್ಲಿ ನಿಯೋಜನೆ ಮಾಡಲಾಗುತ್ತಿತ್ತು. ಕಂದಾಯ ಇಲಾಖೆಯ ಅಧಿಕಾರಿಗಳನ್ನು ಮಾತ್ರವೇ ತಹಶೀಲ್ದಾರ್ ಹುದ್ದೆಗಳಿಗೆ ನಿಯೋಜಿಸಬೇಕು ಎಂಬ ಒತ್ತಾಯ ಕೇಳಿಬಂದಿತ್ತು.

ತಹಶೀಲ್ದಾರ್ ಹುದ್ದೆಗಳಿಗೆ ಇತರ ಇಲಾಖೆಗಳ ಅಧಿಕಾರಿಗಳ ನಿಯೋಜನೆ ನಿರ್ಬಂಧಿಸಿ ಕಾಯ್ದೆ, ನಿಯಮಗಳಿಗೆ ತಿದ್ದುಪಡಿ ತರಲಾಗಿತ್ತು. ಮೇ 13ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಈ ಕುರಿತ ಆಕ್ಷೇಪಣೆ, ಸಲಹೆಗಳನ್ನು ಪರಿಗಣಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಶುಕ್ರವಾರ ಅಂತಿಮ ಅಧಿಸೂಚನೆ ಹೊರಡಿಸಿದೆ.

ಡಿಜಿಟಲ್ ಕೌಶಲದ ಕೊರತೆ

ಬತ್ತಿದೆಯೇ ಅವಕಾಶಗಳ ಒರತೆ?



ಅಮೃತ

ಕೋವಿಡ್ ಎನ್ನುವುದು ಏನೆಲ್ಲ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ- ದೈಹಿಕ, ಮಾನಸಿಕ, ಆರ್ಥಿಕ, ಔದ್ಯೋಗಿಕ ಸಮಸ್ಯೆಗಳ ಬಗ್ಗೆಯಂತೂ ಹೊಸದಾಗಿ ಹೇಳುವುದೇ ಬೇಡ, ಮಾಧ್ಯಮಗಳಿಗೆ ತೆರೆದುಕೊಂಡ ಮಕ್ಕಳೂ ಕೂಡ ಈ ಬಗ್ಗೆ ಪಟಪಟ ಎಂದು ಉದ್ದ ಪಟ್ಟಿಯನ್ನೇ ಕೊಟ್ಟುಬಿಡುತ್ತಾರೆ. ಇವುಗಳ ಹೊರತಾಗಿ ಪರೋಕ್ಷವಾಗಿ ಹೊಸ ಹೊಸ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಸಂದರ್ಭ ಸೃಷ್ಟಿಸುತ್ತಿದೆಯೇ ಎಂಬ ಅನುಮಾನ ಇತ್ತೀಚಿನ ಕೆಲವು ಪ್ರಕರಣಗಳಿಂದ ದಟ್ಟವಾಗುತ್ತಿರುವುದಂತೂ ಹೌದು. ಕಳೆದ ಒಂದೂವರೆ ವರ್ಷಗಳಿಂದ ಕಾಡುತ್ತಿರುವ ಈ ಪಿಡುಗು ಸಾಮಾಜಿಕವಾಗಿಯೂ ಗಂಡು- ಹೆಣ್ಣಿನ ಮಧ್ಯೆ ಹಲವು ವಿಷಯಗಳಲ್ಲಿ ಸಾಕಷ್ಟು ಅಂತರವನ್ನು ಹೆಚ್ಚಿಸಿದೆ. ಉದಾಹರಣೆಗೆ ಡಿಜಿಟಲ್ ಕೌಶಲದ ವಿಷಯವನ್ನೇ ತೆಗೆದುಕೊಳ್ಳಿ. ಸಾಂಸ್ಕೃತಿಕ, ಸೃಜನಶೀಲ ಕ್ಷೇತ್ರಗಳಾದ ಸಂಗೀತ, ನೃತ್ಯ, ಕಲೆ, ಬರವಣಿಗೆ ಮೊದಲಾದ ಕಡೆ ಹೆಚ್ಚಿನ ಕಲಾವಿದೆಯರು, ಬರಹಗಾರ್ತಿಯರು ಆರಾಮವಾಗಿ ತಮ್ಮ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಆದರೆ ಕೋವಿಡ್‌-19, ಅದರ ಹಿಂದೆಯೇ ಶುರುವಾದ ಲಾಕ್‌ಡೌನ್ ಸಂದರ್ಭದಲ್ಲಿ ಡಿಜಿಟಲ್ ಕೌಶಲ, ಅಂದರೆ ಅಂತರ್ಜಾಲ ಬಳಕೆಯ ಕೊರತೆಯಿಂದಾಗಿ ಸಾಕಷ್ಟು ಮಹಿಳೆಯರ ಕೈ ಕಟ್ಟಿದಂತಾಗಿದೆ.

ಸಾಂಸ್ಕೃತಿಕ ಕ್ಷೇತ್ರದಲ್ಲಿರುವ ಮಹಿಳೆಯರು ಕೋವಿಡ್ ಸಂದರ್ಭದಲ್ಲಿ ತಂತ್ರಜ್ಞಾನದ ಕೊರತೆಯಿಂದ ಬಹಳಷ್ಟು ಅವಕಾಶಗಳನ್ನು ಕಳೆದುಕೊಂಡಿದ್ದಾರೆ. ಹಾಗೆಯೇ ಸೃಜನಶೀಲತೆ ಬೇಡುವ ಕೆಲಸಗಳಲ್ಲಿ ಮಹಿಳೆಯರನ್ನು ಕಡೆಗಣಿಸುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ಇಂತಹ ಡಿಜಿಟಲ್ ಅಂತರವನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ?

‘ನನಗೇನೋ ಸಾಕಷ್ಟು ವ್ಯವಸ್ಥೆ ಮಾಡಲು ಸಂಘಟಕರಿದ್ದಾರೆ. ತಂತ್ರಜ್ಞಾನದಲ್ಲಿ ನುರಿತ ಸಹಾಯಕರಿದ್ದಾರೆ. ಹೀಗಾಗಿ ಲಾಕ್‌ಡೌನ್ ಸಂದರ್ಭದಲ್ಲೂ ನಾನು ಸಾಕಷ್ಟು ಕಾರ್ಯಕ್ರಮಗಳನ್ನು ತಂತ್ರಜ್ಞಾನದ ಸಹಾಯದಿಂದ ನೀಡಿದ್ದೇನೆ. ಆದರೆ ಇಂತಹ ನೆರವಿಲ್ಲದ ಸಣ್ಣಪುಟ್ಟ ಕಲಾವಿದೆಯರು, ಈಗಷ್ಟೇ ಪ್ರವರ್ಧಮಾನಕ್ಕೆ ಬರುತ್ತಿರುವವರ ಪಾಡೇನು?’ ಎಂದು ಖ್ಯಾತ ಹಿಂದೂಸ್ತಾನಿ ಗಾಯಕಿ ಕೌಶಿಕಿ ಚಕ್ರವರ್ತಿ ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದರು.

ಸಾಂಸ್ಕೃತಿಕ ಕ್ಷೇತ್ರದಲ್ಲಿ...

ಹೌದು, ಆಫ್‌ಲೈನ್‌ನಲ್ಲಿ ಹೆಚ್ಚಿನ ಶ್ರಮವಿಲ್ಲದೇ ತಮ್ಮ ಪ್ರತಿಭೆಯ ಮೂಲಕ ಹೆಸರು, ಹಣ ಸಂಪಾದನೆ ಮಾಡುತ್ತ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಛಾಪು ಮೂಡಿಸುತ್ತಿದ್ದ ಹಲವು ಕಲಾವಿದೆಯರು ಈಗ ಆನ್‌ಲೈನ್‌ನಲ್ಲಿ ಪರಿಣತಿಯಿಲ್ಲದೇ ಕಂಗಾಲಾಗಿದ್ದಾರೆ. ಆದರೆ ಅವರದ್ದೇ ಆದ ಕ್ಷೇತ್ರದಲ್ಲಿರುವ ಪುರುಷ ಸಹೋದ್ಯೋಗಿಗಳಲ್ಲಿ ಹೆಚ್ಚಿನವರಿಗೆ ಇಂತಹ ಸಮಸ್ಯೆ ಎದುರಾಗಿಲ್ಲ ಎನ್ನುತ್ತದೆ ಸಮೀಕ್ಷೆ. ಯುನೆಸ್ಕೊ ಕೂಡ ಇತ್ತೀಚೆಗೆ ವರದಿಯೊಂದರಲ್ಲಿ ಇದನ್ನೇ ಹೇಳಿದೆ. ‘ಪ್ರಪಾತದತ್ತ ಪ್ರಗತಿ’ ಎಂಬ ಸಮೀಕ್ಷಾ ವರದಿಯಲ್ಲಿ ಅಂತರ್ಜಾಲ ಮತ್ತು ತಂತ್ರಜ್ಞಾನದ ಟೂಲ್‌ಗಳು ಲಭ್ಯವಿಲ್ಲದೇ ಈ ಹಿಂದೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಇದ್ದ ಲಿಂಗ ಅಸಮಾನತೆ ಈ ಕೋವಿಡ್ ಸಂದರ್ಭದಲ್ಲಿ ಇನ್ನಷ್ಟು ಜಾಸ್ತಿಯಾಗಿದೆ; ಕಲಾವಿದೆಯರು ತಂತ್ರಜ್ಞಾನದ ಕೊರತೆಯಿಂದಾಗಿ ಡಿಜಿಟಲ್ ವೇದಿಕೆ, ಆನ್‌ಲೈನ್ ತರಗತಿ ಮತ್ತಿತರ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ಯುನೆಸ್ಕೊ ಹೇಳಿತ್ತು. ಯುನೆಸ್ಕೊ ಪ್ರಕಾರ ಜಗತ್ತಿನಾದ್ಯಂತ ಪುರುಷರಿಗೆ ಹೋಲಿಸಿದರೆ 25 ಕೋಟಿ ಮಹಿಳೆಯರು ಮಾತ್ರ ಅಂತರ್ಜಾಲ ಬಳಸುತ್ತಿದ್ದಾರಂತೆ!

ಭಾರತವು ಮಹಿಳೆಯರಲ್ಲಿ ತಂತ್ರಜ್ಞಾನ ಸಾಕ್ಷರತೆ ಪಟ್ಟಿಯಲ್ಲಿ 30ನೇ ಸ್ಥಾನದಲ್ಲಿದೆ ಎಂದು ಯುನೆಸ್ಕೊ ಈ ಹಿಂದೆ ಹೇಳಿತ್ತು. ಅಂತರ್ಜಾಲ ಬಳಸುವ ಪುರುಷರ ಸಂಖ್ಯೆಗೆ ಹೋಲಿಸಿದರೆ ಇಂತಹ ಮಹಿಳೆಯರ ಸಂಖ್ಯೆ ಅವರ ಅರ್ಧದಷ್ಟಿದೆಯಂತೆ.

‘ಇತ್ತೀಚೆಗೆ ಖ್ಯಾತ ದಿನಪತ್ರಿಕೆಯೊಂದರ ಸುದ್ದಿ ವಿಭಾಗದವರು ಫೇಸ್‌ಬುಕ್ ಲೈವ್ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಕರೆ ಮಾಡಿದ್ದರು. ನಾನು ಕಂಪ್ಯೂಟರ್‌ನಲ್ಲಿ ಬರೆಯಲು ಕಲಿತಿದ್ದೇ ಇತ್ತೀಚೆಗೆ. ಡಿಜಿಟಲ್‌ಗೆ ತೆರೆದುಕೊಂಡಿದ್ದು ಕಡಿಮೆಯೇ. ಹೀಗಾಗಿ ಇಂತಹದ್ದನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದು ಆಹ್ವಾನವನ್ನು ನಿರಾಕರಿಸಿಬಿಟ್ಟೆ’ ಎಂದು ಖ್ಯಾತ ಲೇಖಕಿಯೊಬ್ಬರು ಹೇಳಿದಾಗ ಈ ಡಿಜಿಟಲ್ ಅಂತರದ ಅರಿವಾಗದೇ ಇರದು.

ಮೊಬೈಲ್ ಫೋನ್ ಹೆಚ್ಚಿನ ಮಹಿಳೆಯರ ಕೈಯಲ್ಲಿ ಕಾಣಿಸಿಕೊಂಡರೂ ಕರೆ ಮಾಡುವುದು, ಸ್ವೀಕರಿಸುವುದು ಬಿಟ್ಟರೆ ತಂತ್ರಜ್ಞಾನದ ಕುರಿತ ಅರಿವಿನ ಅಭಾವದಿಂದ ಅಂತರ್ಜಾಲ, ವಾಟ್ಸ್‌ಆ್ಯಪ್, ಸಾಮಾಜಿಕ ಜಾಲತಾಣ ಎಂದು ಹಿಂಜರಿಯುವವರ ಸಂಖ್ಯೆ ಸಾಕಷ್ಟಿದೆ ಎನ್ನುತ್ತದೆ ಮೊಬೈಲ್ ಸಂಸ್ಥೆಯೊಂದು ನಡೆಸಿದ ಸಮೀಕ್ಷೆ.

ಟ್ರೋಲಿಂಗ್ ಭಯ

ಈ ಡಿಜಿಟಲ್ ಅಂತರ ಎನ್ನುವುದು ಮಹಿಳೆಯರನ್ನು ಆನ್‌ಲೈನ್‌ನಲ್ಲಿ ಟ್ರೋಲಿಂಗ್ ಮಾಡುವುದಕ್ಕೆ, ಬೆದರಿಸುವುದಕ್ಕೆ ಕೂಡ ದಾರಿ ಮಾಡಿಕೊಟ್ಟಿದೆ ಎನ್ನಬಹುದು. ಇದು ಯಾವ ರೀತಿಯ ಪರಿಸ್ಥಿತಿ ಸೃಷ್ಟಿಸಿದೆ ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ. ಮನೆಯವರ ಉತ್ತೇಜನದಿಂದ ತನ್ನದೊಂದು ಕೃತಿಯನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿದ ಹಿರಿಯ ಲೇಖಕಿಯೊಬ್ಬರಿಗೆ ಇನ್ನಿಲ್ಲದಂತೆ ಟ್ರೋಲಿಂಗ್ ನಡೆಯಿತು. ಅಶ್ಲೀಲ ಶಬ್ದಗಳ ಪ್ರಹಾರ ಸಹಿಸಲಾಗದೆ ಅವರು ತಮ್ಮ ಫೇಸ್‌ಬುಕ್ ಖಾತೆಯನ್ನೇ ಸ್ಥಗಿತಗೊಳಿಸಬೇಕಾಯಿತು. ಇಂತಹ ಸೈಬರ್ ನಿಂದನೆ, ದೌರ್ಜನ್ಯದಿಂದ ಮಾನಸಿಕ ಒತ್ತಡ, ಭಯ ಅನುಭವಿಸುವುದಕ್ಕಿಂತ ದೂರ ಉಳಿಯುವುದೇ ಲೇಸು ಎಂದು ಹಲವು ಮಹಿಳೆಯರು ಡಿಜಿಟಲ್ ಬಳಕೆಯನ್ನೇ ಕಡಿಮೆ ಮಾಡಿಬಿಡುತ್ತಾರೆ. ಸೃಜನಶೀಲ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಲಿಂಗ ಅಸಮಾನತೆ ವಿರುದ್ಧ ಹಾಗೂ ಕ್ರಿಯಾತ್ಮಕ ಕಲಾಕ್ಷೇತ್ರದಲ್ಲಿ ಸ್ವಾತಂತ್ರ್ಯದ ಪರವಾದ ಹೋರಾಟಕ್ಕೆ ವೇದಿಕೆ ಎನಿಸಿದ ಈ ಅಂತರ್ಜಾಲ ಎಂಬುದು ಈ ರೀತಿ ಮಹಿಳೆಯರ ಮೌನಕ್ಕೆ ಮುದ್ರೆ ಒತ್ತುವ ತಾಣವಾಗಿ ಮಾರ್ಪಟ್ಟಿದ್ದು ವಿಪರ್ಯಾಸ. ❖

ಏನು ಮಾಡಬಹುದು?

- ಡಿಜಿಟಲ್‌ಗೆ ಮಹಿಳೆಯರು ಹೆಚ್ಚು ತೆರೆದುಕೊಳ್ಳುವಂತೆ ಪ್ರೋತ್ಸಾಹಿಸಲು ಆನ್‌ಲೈನ್ ಗ್ರೂಪ್‌ಗಳನ್ನು ರಚಿಸಿಕೊಳ್ಳಬಹುದು.
- ಇದೇನು ಮಹಾ ವಿದ್ಯೆಯಲ್ಲ, ಹಿಂಜರಿಕೆ ಬಿಟ್ಟರೆ ಆರಾಮವಾಗಿ ಕಲಿಯಬಹುದು ಎಂಬ ನಂಬಿಕೆ ಮೂಡಿಸಬೇಕು.
- ಮುಖ್ಯವಾಗಿ ಸೈಬರ್ ಟ್ರೋಲಿಂಗ್ ಎದುರಿಸಲು, ನೆಮ್ಮದಿ ಕೆಡಿಸಿದರೆ ಸೈಬರ್ ಪೊಲೀಸ್ ಸಂಪರ್ಕಿಸಲು ಧೈರ್ಯ ಮೂಡಿಸುವಂತಹ ಕೆಲಸವನ್ನು ಮಹಿಳಾ ಸಂಘಟನೆಗಳು ಮಾಡಬಹುದು.

ನಳಪಾಕ

ಎಳನೀರು ಚಿಕನ್

ರಂಜಿತಾ ಎನ್. ಶೆಟ್ಟಿ

ಎಳನೀರು ಚಿಕನ್



ಬೇಕಾಗುವ ಸಾಮಗ್ರಿಗಳು: ಕೋಳಿ ಮಾಂಸ – 350 ಗ್ರಾಂ, ಅರಿಸಿನ ಪುಡಿ – 1/2 ಟೀ ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಕೊತ್ತಂಬರಿ ಪುಡಿ – 1 ಟೀ ಚಮಚ, ಜೀರಿಗೆ ಪುಡಿ – 1/2 ಟೀ ಚಮಚ, ಮೆಣಸಿನ ಪುಡಿ – ಎರಡೂವರೆ ಟೇಬಲ್ ಚಮಚ, ಜಜ್ಜಿದ ಶುಂಠಿ, ಬೆಳ್ಳುಳ್ಳಿ – 1 ಟೇಬಲ್ ಚಮಚ, ಹೆಚ್ಚಿದ ಈರುಳ್ಳಿ – 1/2, ಹಸಿಮೆಣಸು – 1, ಕರಿಬೇವು, ಲಿಂಬೆಹಣ್ಣು – 1/2, ತೆಂಗಿನಎಣ್ಣೆ – 1 ಟೇಬಲ್ ಚಮಚ, ಗರಂ ಮಸಾಲೆ – 1/4 ಟೀ ಚಮಚ

ತಯಾರಿಸುವ ವಿಧಾನ: ಮೇಲೆ ತಿಳಿಸಿದ ಎಲ್ಲಾ ಸಾಮಗ್ರಿಗಳನ್ನು ಕೋಳಿ ಮಾಂಸಕ್ಕೆ ಬೆರೆಸಿ ಮುಕ್ಕಾಲು ಗಂಟೆ ಮುಚ್ಚಿಡಿ. ಬಳಿಕ ಒಂದು ಮಧ್ಯಮ ಗಾತ್ರದ ಎಳನೀರು ತೆಗೆದುಕೊಂಡು ಅದರಲ್ಲಿನ ನೀರನ್ನು ಹೊರ ತೆಗೆಯಬೇಕು. ಬಳಿಕ ಅದಕ್ಕೆ ಸಣ್ಣ ರಂಧ್ರ ಕೊರೆದು ಮಸಾಲೆ ಬೆರೆಸಿದ ಕೋಳಿ ಮಾಂಸವನ್ನು ಅದರಲ್ಲಿ ತುಂಬಿಸಬೇಕು. ನಂತರ ಎಳನೀರಿನ ರಂಧ್ರವನ್ನು ಗಟ್ಟಿಯಾಗಿ ಮುಚ್ಚಿ ಅದನ್ನು ಬೆಂಕಿ ಮೇಲಿಟ್ಟು ಸುಡಬೇಕು. ಎಳನೀರಿನ ಹೊರಭಾಗ ಚೆನ್ನಾಗಿ ಕಪ್ಪಗಾದ ನಂತರ ಬೆಂಕಿಯಿಂದ ಹೊರ ತೆಗೆಯಿರಿ. ಆಮೇಲೆ ಎಳನೀರಿನ ರಂಧ್ರದ ಮುಚ್ಚಳ ತೆಗೆದು ಕೋಳಿ ಮಾಂಸವನ್ನು ಬೇರೊಂದು ಪಾತ್ರೆಗೆ ಹಾಕಿಕೊಳ್ಳಿ. ಈ ಎಳನೀರು ಚಿಕನ್ ಸವಿಯಲು ಬಲು ರುಚಿ.

ಕಡಾಯಿ ಚಿಕನ್



ಬೇಕಾಗುವ ಸಾಮಗ್ರಿಗಳು: ಕೋಳಿ ಮಾಂಸ – 1/2 ಕೆ.ಜಿ., ಉಪ್ಪು – ರುಚಿಗೆ ತಕ್ಕಷ್ಟು, ಅರಿಸಿನ ಪುಡಿ – 1/4 ಟೀ ಚಮಚ, ಈರುಳ್ಳಿ – ಒಂದೂವರೆ, ಬೇಯಿಸಿದ ಟೊಮೆಟೊ – 1, ತೆಂಗಿನಎಣ್ಣೆ – 1 ಟೇಬಲ್ ಚಮಚ, ತುಪ್ಪ – 2 ಟೀ ಚಮಚ, ಹಸಿಮೆಣಸು – 1, ಕರಿಬೇವು, ಶುಂಠಿ-ಬೆಳ್ಳುಳ್ಳಿ ಪೇಸ್ಟ್ – 1 ಟೇಬಲ್ ಚಮಚ, ಮೆಣಸಿನ ಪುಡಿ – 2 ಟೀ ಚಮಚ, ಕೊತ್ತಂಬರಿ ಪುಡಿ – ಒಂದೂವರೆ ಟೀ ಚಮಚ, ಜೀರಿಗೆ ಪುಡಿ – 1/2 ಟೀ ಚಮಚ, ಸೋಂಪಿನ ಹುಡಿ – 1/4 ಟೀ ಚಮಚ, ಮೆಂತ್ಯೆ ಪುಡಿ – 1/4 ಟೀ ಚಮಚ, ಗರಂ ಮಸಾಲ – 1/2 ಟೀ ಚಮಚ, ಟೊಮೊಟೊ ಸಾಸ್ – 2 ಟೀ ಚಮಚ, ಚಿಲ್ಲಿ ಸಾಸ್ – 1 ಟೀ ಚಮಚ, ಕೊತ್ತಂಬರಿ ಸೊಪ್ಪು.

ತಯಾರಿಸುವ ವಿಧಾನ: ಕೋಳಿ ಮಾಂಸಕ್ಕೆ ಉಪ್ಪು , ಅರಿಸಿನ ಪುಡಿ ಹಾಕಿ ಕುಕರ್‌ನಲ್ಲಿ 2 ಸೀಟಿ ತನಕ ಬೇಯಿಸಿ ಅಥವಾ ಎಣ್ಣೆಯಲ್ಲಿ ಕರಿಯಿರಿ. ಬೇಯಿಸಿದ ಟೊಮೆಟೊ ಸಿಪ್ಪೆ ಸುಲಿದು ಒಂದು ಈರುಳ್ಳಿ ಜೊತೆ ರುಬ್ಬಿಕೊಳ್ಳಿ. ಒಂದು ಕಡಾಯಿ ಬಿಸಿ ಮಾಡಿ ಅದಕ್ಕೆ ತೆಂಗಿನ ಎಣ್ಣೆ, ತುಪ್ಪ ಸುರಿಯಿರಿ. ಅದಕ್ಕೆ ಉದ್ದಕ್ಕೆ ಹೆಚ್ಚಿದ ಅರ್ಧ ಈರುಳ್ಳಿ, ಹಸಿಮೆಣಸು, ಕರಿಬೇವು ಹಾಕಿ ಚೆನ್ನಾಗಿ ಹುರಿಯಿರಿ. ಆಮೇಲೆ ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಹುರಿಯಿರಿ. ಚೆನ್ನಾಗಿ ಹುರಿದಾದ ಮೇಲೆ ರುಬ್ಬಿದ ಟೊಮೊಟೊ-ಈರುಳ್ಳಿ ಪೇಸ್ಟ್ ಸೇರಿಸಿ ಕಲೆಸಿ. ಚೆನ್ನಾಗಿ ಕುದಿ ಬಂದ ಮೇಲೆ ಅದಕ್ಕೆ ಮೇಲೆ ತಿಳಿಸಿದ ಮಸಾಲೆ ಪುಡಿಗಳನ್ನು ಸೇರಿಸಿ ಮಿಶ್ರಣ ಮಾಡಿ. ಸ್ವಲ್ಪ ಹೊತ್ತು ಕುದಿಸಿ. ಆಮೇಲೆ ಅದಕ್ಕೆ ಟೊಮೊಟೊ ಸಾಸ್, ಚಿಲ್ಲಿ ಸಾಸ್, ಉಪ್ಪು ಸೇರಿಸಿ ಕಲೆಸಿ. ಬೇಯಿಸಿಟ್ಟ ಕೋಳಿ ಮಾಂಸ ಮತ್ತು ಅದರ ನೀರನ್ನು ಸೇರಿಸಿ ಮುಚ್ಚಿ ಚೆನ್ನಾಗಿ ಕುದಿಸಿ. ಕೊನೆಯದಾಗಿ ಕೊತ್ತಂಬರಿ ಸೊಪ್ಪು ಸೇರಿಸಿದರೆ ಕಡಾಯಿ ಚಿಕನ್ ತಿನ್ನಲು ಸಿದ್ಧ.

(ಲೇಖಕಿ: ರಂಜುಸ್ ಹೋಮ್ಲಿ ಫುಡ್ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಮುಟ್ಟಾದಾಗ ಲೈಂಗಿಕ ಸಂಪರ್ಕ ಹೊಂದಬಹುದೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ಮುಟ್ಟಿನ ಅವಧಿಯಲ್ಲಿ ಲೈಂಗಿಕ ಸಂಪರ್ಕ ಹೊಂದಬಹುದೇ? ಆ ಸಮಯದಲ್ಲಿ ಲೈಂಗಿಕ ಕ್ರಿಯೆ ನಡೆಸಿದರೆ ಏನಾದರೂ ಸಮಸ್ಯೆ ಇದೆಯೆ? ಯಾವ ರೀತಿಯ ಸಮಸ್ಯೆಗಳು ಉಂಟಾಗಬಹುದು? ಮುಟ್ಟಿನ ಸಮಯದಲ್ಲಿ ಲೈಂಗಿಕ ಕ್ರಿಯೆ ನಡೆಸಲು ಸುರಕ್ಷತಾ ಕ್ರಮಗಳನ್ನು ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ಮುಟ್ಟು ಸಂತಾನೋತ್ಪತ್ತಿ ವಯಸ್ಸಿನಲ್ಲಿ ಆರಂಭವಾಗಿ ಋತುಬಂಧದವರೆಗೆ ಪ್ರತಿ ತಿಂಗಳೂ ಬರುವ ಜೈವಿಕವಾದ ಹಾಗೂ ಸ್ವಾಭಾವಿಕ ಪ್ರಕ್ರಿಯೆ. ಪ್ರತಿ ತಿಂಗಳೂ 4-5 ದಿನ ಮುಟ್ಟಿನಸ್ರಾವ ಇರುತ್ತದೆ ಮತ್ತು ಆ ಸ್ರಾವ ಶುದ್ಧವಾದದ್ದು. ಗರ್ಭಧಾರಣೆಯಾಗದಿದ್ದಾಗ ಪ್ರತಿ ತಿಂಗಳೂ ಗರ್ಭಕೋಶದ ಹೊರಪದರ ಛಿದ್ರಛಿದ್ರವಾಗಿ ಹೊರಬರುವುದೇ ಮುಟ್ಟು. ಸ್ರಾವದ ಜೊತೆಗೆ ಕೆಂಪು ರಕ್ತಕಣಗಳು, ಬಿಳಿರಕ್ತಕಣಗಳು, ಸತ್ತ ಅಂಡಾಣು ಎಲ್ಲವೂ ಇರುತ್ತವೆ. ಆಧುನಿಕವಾಗಿ ಎಷ್ಟೇ ಮುಂದುವರಿದಿದ್ದೇವೆ ಎಂದರೂ ಇಂದಿಗೂ ಮುಟ್ಟಿನ ಬಗ್ಗೆ ತಪ್ಪು ಕಲ್ಪನೆ/ಅಭಿಪ್ರಾಯಗಳು, ಅಂತೆಕಂತೆಗಳು ಇನ್ನೂ ಸಾಕಷ್ಟು ಇವೆ. ಹೆಣ್ಣು ಸ್ನಾನ ಮಾಡಬಾರದು, ಅಡುಗೆ ಮನೆಗೆ, ದೇವರಕೋಣೆಗೆ, ಹೊರಗಡೆಗೆ ಹೋಗಬಾರದು, ಮುಟ್ಟಿನಲ್ಲಿ ಲೈಂಗಿಕ ಸಂಪರ್ಕ ಆದರೆ ನಪುಸಂಕತ್ವ ಬರುತ್ತದೆ, ಮುಟ್ಟಿನಲ್ಲಿ ಹೊಳೆ ದಾಟಬಾರದು, ಹೂ ಮುಡಿಯಬಾರದು ಹೀಗೆ ಒಂದಲ್ಲ, ಎರಡಲ್ಲ ಹಲವು ತಪ್ಪುಕಲ್ಪನೆಗಳು ಇನ್ನೂ ಜನಜನಿತವಾಗಿದೆ.

ಮುಟ್ಟಿನ ಸಮಯದಲ್ಲಿ ಲೈಂಗಿಕ ಸಂಪರ್ಕ ಹೊಂದಲು ವೈಜ್ಞಾನಿಕವಾಗಿ ಯಾವ ಅಡ್ಡಿಯೂ ಇಲ್ಲ. ಹೆಚ್ಚಿನ ಸ್ತ್ರೀಯರಲ್ಲಿ ಮುಟ್ಟಾಗಲು ಎರಡು, ಮೂರು ದಿನ ಮೊದಲು ಮತ್ತು ಕೆಲವರಲ್ಲಿ ಮುಟ್ಟಿನ ಸಮಯದಲ್ಲಿ ಲೈಂಗಿಕ ಉದ್ರೇಕ ಹೆಚ್ಚಿರಬಹುದು. ಅಂತಹ ಸಂದರ್ಭದಲ್ಲಿ ಅವರಿಗೆ ಭಾವಪ್ರಾಪ್ತಿಯೂ ಸುಲಭ. ಆದರೆ ಮುಟ್ಟಿನ ಸಮಯದಲ್ಲಿ ಮಹಿಳೆಗೆ ಅತಿರಕ್ತಸ್ರಾವವಿದ್ದರೆ, ಹೊಟ್ಟೆನೋವು, ಸುಸ್ತು ಇದ್ದರೆ ಅಥವಾ ಲೈಂಗಿಕ ಸಂಪರ್ಕದ ಇಚ್ಛೆ ಇಲ್ಲದಿದ್ದರೆ ಲೈಂಗಿಕ ಸಂಪರ್ಕ ಒಳ್ಳೆಯದಲ್ಲ. ನೆನಪಿಡಬೇಕಾದ ಮುಖ್ಯ ವಿಷಯವೆಂದರೆ ಏಡ್ಸ್ ಇನ್ನಿತರ ಲೈಂಗಿಕ ಕಾಯಿಲೆಗಳು ಇದ್ದಾಗ ಪುರುಷರಿಂದ ಸ್ತ್ರೀಗೆ ಬೇಗನೆ ತಗಲುವ ಸಾಧ್ಯತೆಗಳು ಹೆಚ್ಚು. ಇದಕ್ಕಾಗಿ ಮಹಿಳೆಯರಿಗೆ ಸೋಂಕು ತಗಲದ ರೀತಿಯಲ್ಲಿ ಈ ಸಂದರ್ಭದಲ್ಲಿ ಕಾಂಡೋಮ್‌ಗಳ ಬಳಕೆಯಂತಹ ಎಚ್ಚರಿಕೆ ವಹಿಸಬೇಕು. ಜನನಾಂಗವನ್ನು ಶುದ್ಧ ನೀರಿನಿಂದ ತೊಳೆದುಕೊಳ್ಳಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net **ನೋಡಿ**

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.



ಸುಭಾಷಿತ

ಯಶಸ್ಸನ್ನು ನಿಮ್ಮದೇ ಮಾನದಂಡದ ಮೇಲೆ ವ್ಯಾಖ್ಯಾನಿಸಿ, ನಿಮ್ಮದೇ ನಿಯಮಗಳ ಅನುಸಾರ ಅದನ್ನು ಸಾಧಿಸಿ ಮತ್ತು ನೀವು ಹೆಮ್ಮೆ ಪಡುವಂತೆ ನಿಮ್ಮ ಬದುಕನ್ನು ಕಟ್ಟಿಕೊಳ್ಳಿ.
–ಆ್ಯನ್ ಸ್ವೀನಿ

ಅಸ್ಸಾಂ–ಮಿಜೋರಾಂ ಗಡಿ ಸಂಘರ್ಷ ಕೇಂದ್ರದ ತುರ್ತು ಗಮನ ಅಗತ್ಯ

ಅಸ್ಸಾಂ ಮತ್ತು ಮಿಜೋರಾಂ ನಡುವಣ ಗಡಿಗೆ ಸಂಬಂಧಿಸಿ ಹಿಂಸಾಚಾರ ನಡೆದಿರುವುದು ನಿಜವಾಗಿಯೂ ಹೆಚ್ಚು ಕಳವಳಕ್ಕೆ ಕಾರಣವಾಗಿರುವ ವಿಚಾರ. ಏಕೆಂದರೆ, ವಿವಿಧ ರೀತಿಯಲ್ಲಿ ಸಾಮಾಜಿಕ ಅಥವಾ ರಾಜಕೀಯ ಸಂಘರ್ಷ ಅಥವಾ ಬಿಕ್ಕಟ್ಟು ಸೃಷ್ಟಿಗೆ ಕಾರಣವಾಗಬಲ್ಲ ಹಲವು ಅಂಶಗಳು ಈಶಾನ್ಯ ರಾಜ್ಯಗಳಲ್ಲಿ ಇವೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಈಗ ನಡೆದಿರುವ ಹಿಂಸಾಚಾರವು ಹೆಚ್ಚು ಸಮಸ್ಯಾತ್ಮಕ. ಏಕೆಂದರೆ, ಇದರಲ್ಲಿ ಎರಡು ರಾಜ್ಯ ಸರ್ಕಾರಗಳ ಪಾತ್ರ ಇದೆ. ಸಂಘರ್ಷದ ಬಳಿಕ ಸಂಧಾನ ಅಥವಾ ಮಾತುಕತೆಯ ಧೋರಣೆ ತಳೆಯುವುದರ ಬದಲಾಗಿ ಎರಡೂ ರಾಜ್ಯಗಳು ತಮ್ಮ ನಿಲುವನ್ನು ಇನ್ನಷ್ಟು ಕಠಿಣಗೊಳಿಸಿವೆ. ಎರಡೂ ರಾಜ್ಯಗಳ ಪೊಲೀಸ್ ಪಡೆಗಳ ನಡುವೆ ನಡೆದ ಕಾಳಗದಲ್ಲಿ ಅಸ್ಸಾಂನ ಐವರು ಪೊಲೀಸರು ಮತ್ತು ಒಬ್ಬ ನಾಗರಿಕ ಮೃತಪಟ್ಟಿದ್ದಾರೆ. ಹೊಡೆದಾಟದಲ್ಲಿ ನಾಗರಿಕ ಗುಂಪುಗಳು ಕೂಡ ಭಾಗಿಯಾಗಿವೆ. ಗಡಿಗೆ ಸಂಬಂಧಿಸಿ ಎರಡೂ ರಾಜ್ಯಗಳ ನಡುವೆ ತಕರಾರು ಇದೆ. ಗಡಿ ವಿವಾದದ ಕಾರಣಕ್ಕೆ ಎರಡೂ ರಾಜ್ಯಗಳ ನಡುವೆ ವಾಗ್ವಾದಗಳು ನಡೆಯುತ್ತಿದ್ದುವು. ಆದರೆ, ಇತ್ತೀಚಿನ ದಿನಗಳಲ್ಲಿ ಇಂತಹ ವಾಗ್ವಾದಗಳು ಹೆಚ್ಚಾಗಿವೆ ಮತ್ತು ಅವು ತೀವ್ರ ಸಂಘರ್ಷದ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಈಶಾನ್ಯ ರಾಜ್ಯಗಳ ಪೈಕಿ ಹಲವು ರಾಜ್ಯಗಳ ನಡುವಣ ಗಡಿಗಳು ವಿವಾದಕ್ಕೆ ಕಾರಣವಾಗಿವೆ. ಈ ವಿವಾದಗಳು ವಿವಿಧ ರೀತಿಯಲ್ಲಿ ಬಹಿರಂಗ ಆಗುತ್ತಲೂ ಇವೆ. ಮಿಜೋರಾಂ ಜತೆಗೆ ಮಾತ್ರವಲ್ಲದೆ ಅರುಣಾಚಲ ಪ್ರದೇಶ, ನಾಗಾಲ್ಯಾಂಡ್ ಮತ್ತು ಮೇಘಾಲಯದ ಜತೆಗೂ ಅಸ್ಸಾಂ ಗಡಿ ತಕರಾರು ಹೊಂದಿದೆ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈಶಾನ್ಯ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಭೆ ನಡೆಸಿದ ಎರಡೇ ದಿನಗಳಲ್ಲಿ ಅಸ್ಸಾಂ–ಮಿಜೋರಾಂ ನಡುವೆ ಹಿಂಸಾತ್ಮಕ ಸಂಘರ್ಷ ಉಂಟಾಗಿದೆ. ಇತರೆಲ್ಲ ವಿಚಾರಗಳ ಜತೆಗೆ ಗಡಿ ವಿವಾದವೂ ಸಭೆಯಲ್ಲಿ ಮುಖ್ಯವಾಗಿ ಚರ್ಚೆ ಆಗಿತ್ತು. ಎಲ್ಲ ವಿವಾದಗಳನ್ನೂ ಶಾಂತಿಯುತವಾಗಿ ಪರಿಹರಿಸಿಕೊಳ್ಳಬೇಕು ಎಂಬ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಗಿತ್ತು. ಈ ಚರ್ಚೆಯ ಬಳಿಕವೇ ಹಿಂಸೆ ಉಂಟಾಗಿರುವುದು ಕಳವಳವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಅಸ್ಸಾಂ ಮತ್ತು ಮಿಜೋರಾಂ ರಾಜ್ಯಗಳು ಪರಿಸ್ಥಿತಿಯನ್ನು ಕೆಟ್ಟದಾಗಿ ನಿಭಾಯಿಸಿವೆ ಮತ್ತು ತಮ್ಮ ಬದ್ಧತೆಯನ್ನು ಭಾವನೆಯ ಕೈಗೆ ಕೊಟ್ಟಿವೆ. ಎರಡೂ ಸರ್ಕಾರಗಳು ಸಂಘರ್ಷದ ನಂತರ ನೀಡಿದ ಹೇಳಿಕೆಗಳು ಕೂಡ ಅಪ್ರಬುದ್ಧವೇ ಆಗಿದ್ದವು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಮತ್ತು ಮಿಜೋರಾಂ

> ಈಶಾನ್ಯದ ಎಲ್ಲ ರಾಜ್ಯಗಳನ್ನೂ ಸೇರಿಸಿಕೊಂಡು ರಾಜಕೀಯ ಪರಿಹಾರ ಕಂಡುಕೊಳ್ಳುವುದೇ ಈ ಪ್ರದೇಶದ ಗಡಿ ತಕರಾರು ಮತ್ತು ಇತರ ಎಲ್ಲ ಸಮಸ್ಯೆಗಳಿಗೆ ಮಾದರಿ ಪರಿಹಾರೋಪಾಯ

ಮುಖ್ಯಮಂತ್ರಿ ಝೋರಮ್‌ತಂಗಾ ಅವರು ಹಿಂಸಾಚಾರದ ನಂತರ ಟ್ವಿಟರ್‌ನಲ್ಲಿ ಕೆಸರೆರಚಾಟವನ್ನು ನಡೆಸಿದ್ದಾರೆ. ಹಿಂಸಾಚಾರಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ಮುಖ್ಯಮಂತ್ರಿಗಳಿಬ್ಬರೂ ಟ್ವೀಟ್‌ಗೆ ಲಗತ್ತಿಸಿದ್ದರು. ಈ ವಿಡಿಯೊಗಳು ಎರಡೂ ಕಡೆಯಲ್ಲಿ ಹಿಂಸೆಗೆ ಮತ್ತಷ್ಟು ಪ್ರಚೋದನೆ ನೀಡುವ ಸಾಧ್ಯತೆ ಇತ್ತು. ನಾಲ್ಕು ಸಾವಿರ ಕಮಾಂಡೊಗಳನ್ನು ಗಡಿಯಲ್ಲಿ ನಿಯೋಜಿಸಲು ಆದೇಶ ನೀಡಿದ್ದಾಗಿ ಶರ್ಮಾ ಅವರು ಹೇಳಿಕೆ ನೀಡಿದ್ದಾರೆ. ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇದೆ. ಮಿಜೋರಾಂನಲ್ಲಿ ಮಿಜೊ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ನೇತೃತ್ವದ ಸರ್ಕಾರ ಇದೆ. ಬಿಜೆಪಿ ಮತ್ತು ಎಂಎನ್‌ಎಫ್ ಎರಡೂ ಈಶಾನ್ಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ ಸದಸ್ಯ ಪಕ್ಷಗಳು. ಈ ಮೈತ್ರಿಕೂಟಕ್ಕೆ ಶರ್ಮಾ ಅವರೇ ಸಂಚಾಲಕ.

ಈಶಾನ್ಯ ರಾಜ್ಯಗಳಲ್ಲಿ ಈಗಲೂ ಇರುವ ಗಡಿ ತಕರಾರುಗಳು ಮತ್ತು ಅದಕ್ಕೆ ಸಂಬಂಧಿಸಿದ ಸಂಘರ್ಷಗಳನ್ನು ವಸಾಹತು ಆಳ್ವಿಕೆ ಕಾಲದ ಪಳೆಯುಳಿಕೆಗಳು ಎಂದು ಪರಿಗಣಿಸಲಾಗುತ್ತದೆ. ಈಶಾನ್ಯದ ಎಲ್ಲ ರಾಜ್ಯಗಳು ಅಸ್ಸಾಂನ ಭಾಗವೇ ಆಗಿದ್ದವು. 50 ವರ್ಷಗಳಲ್ಲಿ ಇವು ಬೇರೆ ಬೇರೆ ರಾಜ್ಯಗಳಾದವು. ಆದರೆ, ರಾಜ್ಯಗಳ ಗಡಿಗಳ ಬಗ್ಗೆ ಹೆಚ್ಚು ಚಿಂತನೆ ನಡೆಯಲಿಲ್ಲ. ರಾಜ್ಯಗಳಿಗೆ ಸಂಬಂಧಿಸಿ ಒಂದರ ಮೇಲೊಂದು ಆವರಿಸಿರುವ ಹಿತಾಸಕ್ತಿಗಳಿಗೆ ಹೆಚ್ಚಿನ ಪರಿಗಣನೆ ಸಿಕ್ಕಿಲ್ಲ. ಆದುದರಿಂದ ಸಂಘರ್ಷ ಮತ್ತು ಹಿಂಸಾಚಾರ ಕಾಣಿಸಿಕೊಳ್ಳುತ್ತಿದೆ. ಬುಡಕಟ್ಟು ಅಸ್ಮಿತೆಯೇ ಪ್ರಧಾನವಾಗಿರುವ ಈ ಪ್ರದೇಶದಲ್ಲಿ ವಿಭಜನೆಗಳು ಎದ್ದು ಕಾಣುತ್ತವೆ. ಈ ವಿಭಜನೆಗಳನ್ನು ಸರಿಪಡಿಸಲು ರಾಜಕೀಯವಾದ ಪ್ರಯತ್ನವು ಪರಿಣಾಮಕಾರಿಯಾಗಿ ನಡೆದಿಲ್ಲ. ದೇಶದ ಸುರಕ್ಷತೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ಮತ್ತು ಆರ್ಥಿಕವಾಗಿ ಬಹಳ ಹಿಂದುಳಿದಿರುವ ಈ ಪ್ರದೇಶದಲ್ಲಿ ಸಂಘರ್ಷವು ಒಳ್ಳೆಯದು ಅಲ್ಲ. ಪರಿಸ್ಥಿತಿಯನ್ನು ತಕ್ಷಣಕ್ಕೆ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಈಗ ತುರ್ತಾಗಿ ಆಗಬೇಕಿರುವ ಕೆಲಸ. ಜತೆಗೆ, ಸಂಘರ್ಷವು ಇನ್ನಷ್ಟು ತೀವ್ರವಾಗದಂತೆ ಎಚ್ಚರವನ್ನೂ ವಹಿಸಬೇಕು. ಎಲ್ಲ ರಾಜ್ಯಗಳನ್ನೂ ಸೇರಿಸಿಕೊಂಡು ರಾಜಕೀಯವಾದ ಪರಿಹಾರವನ್ನು ಕಂಡುಕೊಳ್ಳುವುದೇ ಈ ಪ್ರದೇಶದ ಗಡಿ ತಕರಾರು ಮತ್ತು ಇತರ ಎಲ್ಲ ಸಮಸ್ಯೆಗಳಿಗೆ ಮಾದರಿ ಪರಿಹಾರೋಪಾಯ. ಕೇಂದ್ರ ಸರ್ಕಾರವು ಈ ದಿಸೆಯಲ್ಲಿ ಯೋಚನೆ ಮಾಡಿ, ತಕ್ಷಣವೇ ಕಾರ್ಯಪ್ರವೃತ್ತ ಆಗಬೇಕಾದ ಅಗತ್ಯ ಇದೆ.

ದಿನದ ಟ್ವೀಟ್

ತಳಮಟ್ಟ ಸ್ವಚ್ಛವಾಗಲಿ



ಎಷ್ಟೇ ಕಾನೂನು ಜಾರಿಗೆ ತಂದರೂ ಭ್ರಷ್ಟಾಚಾರ ನಿರ್ಮೂಲನೆ ಅಸಾಧ್ಯ ಎನಿಸುತ್ತದೆ. ನೇಮಕಾತಿ, ವರ್ಗಾವಣೆ, ನರೇಗಾ ಯೋಜನೆ, ಕಚೇರಿಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರು, ಉನ್ನತ ಅಧಿಕಾರಿಗಳು ಮೊದಲು ತಳಮಟ್ಟದಲ್ಲಿ ಸ್ವಚ್ಛಗೊಳಿಸುವ ಕೆಲಸ ಮಾಡಬೇಕು.

ಚೆಲುವರಾಜು ಕೆ., ನಾಗರಿಕ

ಕಿಡಿನುಡಿ

ವಿಜಯಪುರ ಜಿಲ್ಲೆಗೆ ಗೌರವಯುತವಾಗಿ ಸಚಿವ ಸ್ಥಾನ ಕೊಡಲೇಬೇಕು. ಒಂದು ವೇಳೆ ಜಿಲ್ಲೆಯನ್ನು ಕಡೆಗಣಿಸಿದರೆ ಸಚಿವ ಸಂಪುಟ ವಿಸ್ತರಣೆ ಬಳಿಕ ದೊಡ್ಡ ಶಾಕ್ ಕೊಡಬೇಕಾಗುತ್ತದೆ. ಒಳ್ಳೆಯವರನ್ನು, ಪ್ರಾಮಾಣಿಕರನ್ನು, ಹಿಂದುತ್ವ ಉಳ್ಳವರನ್ನು, ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವ ಶಕ್ತಿಯುಳ್ಳವರನ್ನು ಸಚಿವರನ್ನಾಗಿ ಮಾಡಬೇಕು. ಯಡಿಯೂರಪ್ಪನವರು ಹೇಳಿದ್ದೇ ಆಗೋದಿದ್ದರೆ ಅವರನ್ನು ತೆಗೆಯುವ ಅವಶ್ಯಕತೆಯೇ ಇರಲಿಲ್ಲ.



ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಬುಧವಾರ, 31-7-1996

- **ಕಾವೇರಿ: ಚರ್ಚೆಗೆ ಕೋರ್ಟ್ ಸಲಹೆ**

ನವದೆಹಲಿ, ಜುಲೈ, 30 (ಪಿಟಿಐ)– ತಮಿಳುನಾಡಿನ ನೀರಾವರಿ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುವಂತೆ ಕಾವೇರಿ ವಿವಾದಕ್ಕೆ ಮಾತುಕತೆಯ ಮೂಲಕ ಒಂದು ತಾತ್ಕಾಲಿಕ ಪರಿಹಾರ ಕಂಡುಕೊಳ್ಳುವಂತೆ ಸುಪ್ರೀಂ ಕೋರ್ಟ್ ಇಂದು ಕರ್ನಾಟಕ ಹಾಗೂ ತಮಿಳುನಾಡಿನ ಮುಖ್ಯಮಂತ್ರಿಗಳಿಗೆ ಸೂಚನೆ ನೀಡಿದೆ.

- **ರಾಜಧಾನಿ ಎಕ್ಸ್‌ಪ್ರೆಸ್ ಈಗ ವಾರಕ್ಕೆರಡು ಬಾರಿ ಸಂಚಾರ**

ನವದೆಹಲಿ, ಜುಲೈ, 30– ಬೆಂಗಳೂರಿನಿಂದ ವಾರಕ್ಕೊಮ್ಮೆ ಇದ್ದ ರಾಜಧಾನಿ ಎಕ್ಸ್‌ಪ್ರೆಸ್ ಇನ್ನು ಮುಂದೆ ಎರಡು ಬಾರಿ ಸಂಚಾರ, ಗೇಜ್ ಪರಿವರ್ತನೆ ಮುಗಿದ ಮೇಲೆ ಹುಬ್ಬಳ್ಳಿ–ಮಿರಜ್ ಮಾರ್ಗವಾಗಿ ಬೆಂಗಳೂರು–ಮುಂಬೈ ನಡುವೆ ವಾರಕ್ಕೆರಡು ಬಾರಿ ಹೊಸದೊಂದು ಸೂಪರ್ ಫಾಸ್ಟ್ ರೈಲು ಸೇರಿದಂತೆ ದೇಶದ ವಿವಿಧ ಭಾಗಗಳಿಗೆ ಮತ್ತೆ ಹದಿನಾಲ್ಕು ಹೊಸ ರೈಲುಗಳ ಸಂಚಾರವನ್ನು ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಇಂದು ಲೋಕಸಭೆಯಲ್ಲಿ ಪ್ರಕಟಿಸಿದರು.

ಬೆಂಗಳೂರು– ಮುಂಬೈ ನಡುವಣ ರೈಲನ್ನು ಮುಂದೆ ಪ್ರತಿದಿನವೂ ಸಂಚರಿಸುವಂತೆ ಮಾಡಲಾಗುವುದು ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ

ಶನಿವಾರ, 31-7-1971

- **ಅಂತರಿಕ್ಷದಲ್ಲಿ ಜಪಾನ್ ವಿಮಾನಗಳ ಡಿಕ್ಕಿ: 162 ಮಂದಿ ಸಾವು**

ಟೋಕಿಯೊ, ಜುಲೈ, 30– ಜಪಾನಿನ ಬೋಯಿಂಗ್ ವಿಮಾನವೊಂದು ಇಂದು ಮಧ್ಯ ಗಗನದಲ್ಲಿ ವಾಯುಪಡೆಯ ಫೈಟರ್ ವಿಮಾನಕ್ಕೆ ಡಿಕ್ಕಿ ಹೊಡೆದ ಬಳಿಕ ಅಪಘಾತಕ್ಕೀಡಾಗಿ, ಅದರಲ್ಲಿದ್ದ ಎಲ್ಲಾ 162 ಮಂದಿ ಪ್ರಯಾಣಿಕರೂ ಸತ್ತರು. ಜಗತ್ತಿನ ವಿಮಾನಯಾನ ಇತಿಹಾಸದಲ್ಲೇ ಹಿಂದೆಂದೂ ಕಾಣಬಾರದಂಥ ಭೀಕರ ದುರಂತವಿದು.

ವಿಮಾನವು ಬೆಂಕಿ ಹೊತ್ತಿ ಉರಿಯಿತೆಂದೂ ವಿಮಾನ ಸಾರಿಗೆ ಸಂಸ್ಥೆಯಾದ ‘ಆಲ್‌ನಿಪ್ಪನ್ ಏರ್‌ವೇಸ್’ (ಎ.ಎನ್.ಎ) ಅಧಿಕಾರಿಗಳು ತಿಳಿಸಿದ್ದಾರೆ.

- **ಕರಗಳ್ಳತನ, ಕಪ್ಪು ಹಣ ಪತ್ತೆಗೆ ಬಿರುಸಿನ ಕ್ರಮ**

ನವದೆಹಲಿ, ಜುಲೈ, 30– ಮುಚ್ಚಿಟ್ಟ ಮತ್ತು ಕರಗಳ್ಳತನವನ್ನು ಪತ್ತೆ ಹಚ್ಚಲು ಸರ್ಕಾರವು ಬಿರುಸಿನ ಕ್ರಮ ಕೈಗೊಳ್ಳಲಿದೆ ಎಂದು ಹಣಕಾಸು ಖಾತೆ ಸ್ಟೇಟ್ ಸಚಿವ ಕೆ.ಆರ್. ಗಣೇಶ್ ಅವರು ಇಂದು ರಾಜ್ಯಸಭೆಯಲ್ಲಿ ಘೋಷಿಸಿದರು.

ಆ ಬೊಮ್ಮಾಯಿಯಿಂದ ಈ ಬೊಮ್ಮಾಯಿಯವರೆಗೆ ಕತೆ ಒಂದೇ, ಪಾತ್ರ ಬೇರೆ ಬೇರೆ

ಹೈಕಮಾಂಡ್ ಆಡಳಿತವೆಂದರೆ...



ಅನುರಣನ

ನಾರಾಯಣ ಎ.

ಹೊಸ ಮುಖ್ಯಮಂತ್ರಿಗೆ ಎಲ್ಲರೂ ಉಘೇಉಘೇ ಎನ್ನುತ್ತಿರುವ ಹೊತ್ತಿಗೆ ಕರ್ನಾಟಕದ ಜನ ತಿಳಿದುಕೊಳ್ಳಬೇಕಾದ ವಿಷಯ ಒಂದಿದೆ. ಅದೇನೆಂದರೆ, 32 ವರ್ಷಗಳ ಹಿಂದೆ ಆಗ ಮುಖ್ಯಮಂತ್ರಿಯಾಗಿದ್ದ ಜನತಾ ಪಕ್ಷದ ಎಸ್.ಆರ್.ಬೊಮ್ಮಾಯಿ ಅವರನ್ನು ಕಾಂಗ್ರೆಸ್‌ನ ದೆಹಲಿ ದರ್ಬಾರ್ ಪದಚ್ಯುತಗೊಳಿಸಿದ್ದು ಮತ್ತು ಬಸವರಾಜ ಬೊಮ್ಮಾಯಿ ‘ಎಂಬ ಹೆಸರಿನವರಾದ’ ಅವರ ಮಗನನ್ನು ಈಗಿನ ಬಿಜೆಪಿಯ ದೆಹಲಿ ದರ್ಬಾರ್ ಮುಖ್ಯಮಂತ್ರಿಯನ್ನಾಗಿ ಪ್ರತಿಷ್ಠಾಪಿಸಿದ್ದು ಒಂದೇ ಕತೆಯ ಎರಡು ಅಧ್ಯಾಯಗಳು.

ಅದೊಂದು ಸಾಂವಿಧಾನಿಕ ದುರಂತ ಕತೆ. ರಾಷ್ಟ್ರೀಯ ಪಕ್ಷಗಳ ಹೈಕಮಾಂಡ್‌ನವರು ಈ ದೇಶದ ಸ್ವಾತಂತ್ರ್ಯ, ಸಾರ್ವಭೌಮ ರಾಜ್ಯಗಳನ್ನು ತಮ್ಮ ಸಾಮಂತ ಪ್ರದೇಶಗಳು ಎಂಬಂತೆ ಪರಿಗಣಿಸಿ ಹಣಿಯುತ್ತಿರುವ ಕತೆ. ಆ ಬೊಮ್ಮಾಯಿಯ ಕಾಲದಿಂದ ಈ ಬೊಮ್ಮಾಯಿಯ ಕಾಲಕ್ಕೆ ಬದಲಾಗಿದ್ದು ಕತೆಯ ಸೂತ್ರ ಮತ್ತು ಪಾತ್ರಗಳು ಮಾತ್ರ. ಆಗ ನಡೆದದ್ದು ಕಾಂಗ್ರೆಸ್ ಶೈಲಿಯ ಒರಟೊರಟು ಪ್ರಹಾರ. ಇಂದು ನಡೆಯುತ್ತಿರುವುದು ಬಿಜೆಪಿ ಶೈಲಿಯ ಹೊನ್ನಶೂಲಕ್ಕೇರಿಸುವ ಚಮತ್ಕಾರ.

ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ಚಾರಿತ್ರಿಕ ತೀರ್ಪು (1994), ಸಂವಿಧಾನದ 356ನೇ ವಿಧಿ ದುರ್ಬಳಕೆ ಮಾಡಿ ರಾಜ್ಯಗಳ ಮೇಲೆ ರಾಷ್ಟ್ರಪತಿ ಆಡಳಿತ ಹೇರುವುದರ ವಿರುದ್ಧ ನಿರ್ಬಂಧಗಳನ್ನು ವಿಧಿಸಿತು. ಆದರೆ ರಾಜ್ಯಗಳನ್ನು ಅಂಕೆಯಲ್ಲಿ ಇಟ್ಟುಕೊಳ್ಳಬೇಕೆಂಬ ದೆಹಲಿ ದರ್ಬಾರಿನವರ ಮಹತ್ವಾಕಾಂಕ್ಷೆ ಮುಂದುವರಿಯಿತು. ಹಾಗಾಗಿ ಈಗ ರಾಜ್ಯ ಸರ್ಕಾರಗಳನ್ನು ಮಣಿಸಿ- ಕುಣಿಸಲು, ರಾಷ್ಟ್ರ ಮಟ್ಟದಲ್ಲಿ ಆಡಳಿತ ನಡೆಸುವ ಪಕ್ಷಗಳು ಹೊಸ ತಂತ್ರಗಳನ್ನು ಬಳಸುತ್ತವೆ. ತೆರಿಗೆಯ ಪಾಲು ನೀಡದೇ ಇರುವುದು, ವಿಪತ್ತುಗಳಿಗೆ ಪರಿಹಾರ ನಿರಾಕರಿಸುವುದು, ರಾಜ್ಯ ನಾಯಕರ ವಿರುದ್ಧ ತನಿಖಾ ಸಂಸ್ಥೆಗಳನ್ನು ಛೂ ಬಿಡುವುದು ಇತ್ಯಾದಿಗಳೆಲ್ಲಾ ಈಗ ಯಥೇಚ್ಛವಾಗಿ ಬಳಕೆಯಾಗುತ್ತವೆ. ಇದು ಸಾಮಾನ್ಯವಾಗಿ ನಡೆಯುವುದು ವಿರೋಧ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳಲ್ಲಿ. ಒಂದೇ ಪಕ್ಷದ ಆಡಳಿತ ಇದ್ದಾಗಲೂ ಇವುಗಳಲ್ಲಿ ಕೆಲವು ನಡೆದವು ಎನ್ನುವುದು ಬೇರೆಯೇ ಕತೆ ಹೇಳುತ್ತದೆ.

ರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯದಲ್ಲಿ ಒಂದೇ (ರಾಷ್ಟ್ರೀಯ) ಪಕ್ಷದ ನೇತೃತ್ವದ ಸರ್ಕಾರವಿದ್ದಾಗ ಹೈಕಮಾಂಡ್‌ನ ಆಣತಿಗೆ ತಕ್ಕಂತೆ ನಡೆದುಕೊಳ್ಳುವ ಮುಖ್ಯಮಂತ್ರಿಯೊಬ್ಬರನ್ನು ಪ್ರತಿಷ್ಠಾಪಿಸಿ ನಿಯಂತ್ರಣ ಸಾಧಿಸುವ ಹಳೆಯ ತಂತ್ರ ಈಗ ಇನ್ನೂ ವಿಕಸನಗೊಂಡು, ರಾಜ್ಯ ಸರ್ಕಾರಗಳನ್ನು ಒಕ್ಕೂಟ ಸರ್ಕಾರದ ಒಂದು ಇಲಾಖೆಯಂತೆ ನಡೆಸಿಕೊಳ್ಳುವ ಹೊಸ ವಿಧಾನವೊಂದು ಚಾಲ್ತಿಗೆ ಬರುತ್ತಿದೆ. ಇದಕ್ಕೆ ತಡೆಯೊಡ್ಡುವ ಸಾಮರ್ಥ್ಯವುಳ್ಳ ಮುಖ್ಯಮಂತ್ರಿಗಳನ್ನು ಯಾವುದೋ ನೆಪದಡಿ ಕಿತ್ತೊಗೆದು ಅಲ್ಲಿ ಹೈಕಮಾಂಡ್‌ನೆದುರು ‘ತಗ್ಗಿದ ತಲೆ, ಬಾಗಿದ ದೇಹ, ಮುಗಿದ ಕೈ’ ಎಂಬ ನೀತಿಯನ್ನು ಅಂಗೀಕರಿಸಿದ ಸಾಮಂತರನ್ನು ಪ್ರತಿಷ್ಠಾಪಿಸಲಾಗುತ್ತದೆ.

ಸೋಮಪ್ಪ ರಾಯಪ್ಪ ಬೊಮ್ಮಾಯಿ ಅವರು 356ನೇ ವಿಧಿಯ ದುರ್ಬಳಕೆಯ ಹಳೆಯ ವ್ಯವಸ್ಥೆಯ ಸಂತ್ರಸ್ತ. ಬಸವರಾಜ ಬೊಮ್ಮಾಯಿ, ರಾಜ್ಯಗಳನ್ನು ಹಣಿಯುವ ಹೊಸ ನೀತಿಯ ಫಲಾನುಭವಿ. ಎರಡೂ ಪ್ರಕರಣಗಳಲ್ಲಿ ರಾಜ್ಯದ ಸ್ವಾಭಿಮಾನದ ಪ್ರಶ್ನೆ ಇದೆ. ಇದನ್ನು ಅರ್ಥ ಮಾಡಿಕೊಳ್ಳಲು ರಾಜ್ಯದಲ್ಲಾದ ಬೆಳವಣಿಗೆಗಳನ್ನು ಕೂಲಂಕಷವಾಗಿ ನೋಡಬೇಕು.

ಸಾಮಾನ್ಯವಾಗಿ ಮುಖ್ಯಮಂತ್ರಿಗಳ ವಿರುದ್ಧ ಪಕ್ಷದ ಶಾಸಕರ ಭಿನ್ನಮತ ಭುಗಿಲೆದ್ದಾಗ, ಭ್ರಷ್ಟಾಚಾರಕ್ಕೆ ಸಂಬಂಧಿಸಿ ಪ್ರತಿಕೂಲ ತೀರ್ಪು ಬಂದಾಗ, ಹಾಲಿ ಮುಖ್ಯಮಂತ್ರಿಗಳು ಹೊಸ ಹುದ್ದೆ ವಹಿಸಿಕೊಂಡಾಗ ಹೈಕಮಾಂಡ್ ಮಧ್ಯಪ್ರವೇಶಿಸಿ ನಾಯಕತ್ವ ಬದಲಿಸುವುದಿದೆ. ಹೀಗೆ ಮುಖ್ಯಮಂತ್ರಿಯ ಬದಲಾವಣೆ ನಡೆದಾಗ ಅದರಲ್ಲಿ ಹೈಕಮಾಂಡ್ ಪಾತ್ರವಿದ್ದರೂ, ಶಾಸಕರ ಮೂಲಕ ಹೊಸ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಕೇವಲ ನಾಟಕವಾಗಿರುತ್ತಿದ್ದರೂ, ಅಲ್ಲಿ ರಾಜ್ಯದ ಸ್ವಾಯತ್ತತೆಯ ಮೇಲೆ ದೆಹಲಿಯಿಂದ ಪ್ರಹಾರ ನಡೆಯಿತು ಎನ್ನುವ ಆತಂಕಕ್ಕೆ ಅವಕಾಶ ಇರಲಿಲ್ಲ.

ಯಾವುದೇ ಕಾರಣ ಇಲ್ಲದ ಸ್ಥಿತಿಯಲ್ಲಿ ಮುಖ್ಯಮಂತ್ರಿಯೊಬ್ಬರನ್ನು ಹೈಕಮಾಂಡ್ ಪದಚ್ಯುತಗೊಳಿಸಿದ ಪ್ರಸಂಗ ಕರ್ನಾಟಕದ ಮಟ್ಟಿಗೆ ಎರಡು. ಮೊದಲನೆಯದ್ದು, 1990ರಲ್ಲಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರನ್ನು ಅಂದಿನ ಕಾಂಗ್ರೆಸ್ ಹೈಕಮಾಂಡ್ ಪದಚ್ಯುತಗೊಳಿಸಿದ ಘಟನೆ. ಎರಡನೆಯದ್ದು, ಏಕಚಕ್ರಾಧಿಪತ್ಯಕ್ಕೆ ಆಧುನಿಕ ಭಾಷ್ಯ ಬರೆಯಲು ಹೊರಟಿರುವ ಈಗಿನ ಬಿಜೆಪಿ ಹೈಕಮಾಂಡ್ ನಿರ್ದೇಶಿಸಿರುವ ಯಡಿಯೂರಪ್ಪನವರ ಅಧಿಕಾರಾವರೋಹಣದ ಪ್ರಸ್ತುತ ಪ್ರಸಂಗ. ವೀರೇಂದ್ರ ಪಾಟೀಲರ ಪದಚ್ಯುತಿಗೆ ಅನಾರೋಗ್ಯದ ನೆಪವಾದರೂ ಇತ್ತು. ಯಡಿಯೂರಪ್ಪನವರ ವಿಚಾರದಲ್ಲಿ ಕಾರಣ ಬಿಡಿ, ಅಧಿಕೃತವಾಗಿ ನೆಪ ಹೇಳುವ ಅಗತ್ಯವೂ ಬಿಜೆಪಿಗೆ ಕಂಡುಬರಲಿಲ್ಲ ಎಂದರೆ ನಿಜ ಉದ್ದೇಶವನ್ನು ಬೇರೆಲ್ಲೋ ಹುಡುಕಬೇಕಾಗುತ್ತದೆ.

ಭ್ರಷ್ಟಾಚಾರವು ಈ ಬೆಳವಣಿಗೆಗೆ ಕಾರಣ ಎಂದು ಕೆಲವು ಪತ್ರಕರ್ತರು ಹೇಳುತ್ತಿದ್ದಾರೆ. ದೇಶದ ಭ್ರಷ್ಟಾತಿಭ್ರಷ್ಟರಿಗೆಲ್ಲಾ ಮಣೆಹಾಕಿ ಅವರ ಮೇಲಿನ ಕರಾಳ ಆಪಾದನೆಗಳ ಮೇಲೆ ಗರಿಗರಿ ಶ್ವೇತವಸ್ತ್ರ ಹೊದಿಸುತ್ತಿರುವ, ಚುನಾವಣೆ ಗೆಲ್ಲಲು ದೈತ್ಯ ಪ್ರಮಾಣದ ಹಣ ವ್ಯಯಿಸುವ ಪಕ್ಷವೊಂದು ಭ್ರಷ್ಟಾಚಾರದ ಕಾರಣಕ್ಕೆ ಮುಖ್ಯಮಂತ್ರಿಯನ್ನು ಬದಲಿಸಿತು ಎಂದು ನಂಬಲಾದೀತೇ? ಮುಖ್ಯಮಂತ್ರಿ ಬದಲಾದರೂ ಈಗಲೂ ರಾಜ್ಯದಲ್ಲಿ ಇರುವುದು ‘ಆಪರೇಷನ್ ಕಮಲ’ ಎಂಬ ಪರಮಭ್ರಷ್ಟ ತಂತ್ರ ಬಳಸಿ ಸರ್ಕಾರ ರಚನೆಯಾದ ಅರ್ಧ ಚುನಾಯಿತ- ಅರ್ಧ ಖರೀದಿತ ಸರ್ಕಾರ ತಾನೇ?



ಇನ್ನು, ವಯಸ್ಸಾಯಿತು ಎನ್ನುವ ಕಾರಣಕ್ಕೆ ಯಡಿಯೂರಪ್ಪನವರನ್ನು ಅಧಿಕಾರದ ನೇಪಥ್ಯಕ್ಕೆ ಸರಿಸಲಾಯಿತು ಎನ್ನಲಾಗುತ್ತಿದೆ. ಮುಖ್ಯಮಂತ್ರಿ ಆಗುವ ಹೊತ್ತಿಗೇ ಅವರಿಗೆ ಬಿಜೆಪಿ ಹಾಕಿದ್ದ ವಯಸ್ಸಿನ ಗಡುವು ಮೀರಿತ್ತು. ಒಂದು ನಿಶ್ಚಿತ ಅವಧಿಗಷ್ಟೇ ಅವರಿಗೆ ಮುಖ್ಯಮಂತ್ರಿ ಸ್ಥಾನ ನಿಗದಿಯಾಗಿದ್ದರೆ ಅದನ್ನು ಪಕ್ಷದ ನಾಯಕರು ಮೊದಲೇ ಘೋಷಿಸದೇ ಇರುತ್ತಿರಲಿಲ್ಲ.

ಎಲ್ಲ ಸಮರ್ಥನೆಗಳೂ ಹೀಗೆ ಅಪ್ರಸ್ತುತ ಅನ್ನಿಸುವಾಗ ಅಲ್ಲಿ ಕಾಣಿಸುವುದು ಒಂದೇ ಕಾರಣ. ಅದು ರಾಜ್ಯಗಳೆಲ್ಲಾ ಪಕ್ಷದ ರಾಷ್ಟ್ರೀಯ ನಾಯಕರ ಸಂಪೂರ್ಣ ಅಂಕೆಯಲ್ಲಿ ಇರಬೇಕು ಎನ್ನುವ ಲೆಕ್ಕಾಚಾರ. ಒಬ್ಬ ಪ್ರಬಲ ಪ್ರಾದೇಶಿಕ ಅಥವಾ ರಾಜ್ಯ ಮಟ್ಟದ ನಾಯಕ ಮುಖ್ಯಮಂತ್ರಿಯಾಗಿದ್ದರೆ ಇದು ಸಾಧ್ಯವಾಗುವುದಿಲ್ಲ. ರಾಜ್ಯದ ರಾಜಕೀಯವನ್ನು ಮತ್ತು ಆಡಳಿತವನ್ನು ಹೀಗೆ ಪರೋಕ್ಷವಾಗಿ ತನ್ನ ಸುಪರ್ದಿಗೆ ತೆಗೆದುಕೊಳ್ಳಬೇಕು ಎನ್ನುವ ಲೆಕ್ಕಾಚಾರ ಮುಂದಿನ ಚುನಾವಣೆಯ ದೃಷ್ಟಿಯಿಂದ ಇರಬಹುದು. ಭಿನ್ನ ಮಾದರಿಯಲ್ಲಿ ಪಕ್ಷವನ್ನು ಚುನಾವಣೆಗೆ ಅಣಿಗೊಳಿಸಬೇಕೆನ್ನುವ ದೃಷ್ಟಿಯಿಂದ, ಎಲ್ಲದಕ್ಕೂ ಸೈ ಎನ್ನುವ ಮುಖ್ಯಮಂತ್ರಿಯೊಬ್ಬ ಬಿಜೆಪಿಯ ದೆಹಲಿ ನಾಯಕರಿಗೆ ಅಗತ್ಯವಾಗಿ ಕಂಡಿರಬಹುದು.

ಅದೇನೇ ಇದ್ದರೂ ಪರಿಣಾಮ ಒಂದೇ. ಇದು ರಾಷ್ಟ್ರಪತಿ ಆಡಳಿತದ ಇನ್ನೊಂದು ರೂಪ. ‘ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ’ ಎನ್ನುವುದರ ಬದಲಿಗೆ ‘ರಾಜ್ಯದಲ್ಲಿ ಹೈಕಮಾಂಡ್ ಆಡಳಿತ’ ಎನ್ನಬಹುದಾದ ವಿದ್ಯಮಾನ. ಸಂವಿಧಾನ ಬದಲಾಯಿಸಬೇಕಿಲ್ಲ. ‘ಬೊಮ್ಮಾಯಿ ತೀರ್ಪನ್ನು’ ಉಲ್ಲಂಘಿಸಬೇಕಿಲ್ಲ. ವಿಧಿ 356ರ ಹಂಗೇ ಬೇಕಿಲ್ಲ. ಹಂಗಿನ ಅರಮನೆಯಲ್ಲಿರುವ ಮುಖ್ಯಮಂತ್ರಿಯೊಬ್ಬನನ್ನು ಒಂದು ರಾಜ್ಯದಲ್ಲಿ ಪ್ರತಿಷ್ಠಾಪಿಸಿದರೆ ಮುಗಿಯಿತು. ಅಲ್ಲಿಗೆ ರಾಜ್ಯ ಎನ್ನುವುದು ದೆಹಲಿ ನಾಯಕರ ಜಹಗೀರು ಎನ್ನುವ ಹಂತಕ್ಕೆ ಬಂದುಬಿಡುತ್ತದೆ.

ಯಡಿಯೂರಪ್ಪ ಇದ್ದಾಗಲೇ ಇಂತಹದ್ದೆಲ್ಲಾ ಒಂದು ಹಂತಕ್ಕೆ ಆಗುತ್ತಿತ್ತು. ಸರ್ಕಾರಕ್ಕೆ ಎರಡು ವರ್ಷ ತುಂಬಿದಾಗ ನೀಡಲಾದ ಜಾಹೀರಾತುಗಳನ್ನು ಗಮನಿಸಿ. ಎಲ್ಲ ಸಾಧನೆಗಳೂ ಕೇಂದ್ರ ನಾಯಕತ್ವದ ಪಾದಕ್ಕೆ ಸಮರ್ಪಣೆ ಎನ್ನುವ ಅರ್ಥದ ಒಕ್ಕಣೆಯೊಂದಿಗೆ ಅವು ಕಾಣಿಸಿದವು. ಇನ್ನು ಮುಂದೆ ಹೈಕಮಾಂಡ್‌ನ ಹಾದಿ ರಾಜ್ಯದಲ್ಲಿ ಇನ್ನೂ ಸಲೀಸಾದಾಗ, ಈ ಶರಣಾಗತಿಯು ರಾಜ್ಯದ ಸ್ವಾಯತ್ತತೆ ಎನ್ನುವುದನ್ನು ಎಲ್ಲಿಗೆ ಒಯ್ಯಬಹುದು ಎಂದು ನಾವೀಗ ಊಹಿಸಬಹುದು.

ಯಡಿಯೂರಪ್ಪ ಬಳಗದವರೊಬ್ಬರು ಹೊಸ ಮುಖ್ಯಮಂತ್ರಿಯಾಗಿದ್ದಾರೆ ಎನ್ನುವುದು ರಾಜ್ಯದಲ್ಲಿ ಹೈಕಮಾಂಡ್ ಆಡಳಿತಕ್ಕೆ ಸ್ವಲ್ಪ ತಡೆಯೊಡ್ಡಬಹುದೆನ್ನುವ ಆಶಾವಾದ ಅರ್ಥವಿಲ್ಲದ್ದು. ರಾಜ್ಯದ ಸ್ವಾಯತ್ತತೆ ಮತ್ತು ಸ್ವಾಭಿಮಾನದ ಮೇಲೆ ಆಗುತ್ತಿರುವ ಈ ಪರೋಕ್ಷ ಪ್ರಹಾರಗಳಿಗೆ ಸಾಂವಿಧಾನಿಕ ಪರಿಹಾರ ಇಲ್ಲ. ಕರ್ನಾಟಕದ ಜನ ರಾಷ್ಟ್ರೀಯ ಪಕ್ಷಗಳಿಗೆ ಒಲವು ತೋರುವಷ್ಟು ಕಾಲ, ದೆಹಲಿ ದರ್ಬಾರಿನ ವಿರುದ್ಧ ಸೆಣಸುವಷ್ಟು ಜನಬೆಂಬಲ ಇರುವ ನಾಯಕತ್ವ ಇಲ್ಲಿ ಬೆಳೆಯದೇ ಹೋದಷ್ಟು ಕಾಲ ಎಲ್ಲವೂ ಹೀಗೇ ಮುಂದುವರಿಯಲಿವೆ...

ಚುರುಮುರಿ



ನಾನು ಮತ್ತು ಪೆಗಾಸಸ್

• ಆನಂದ

ಪೆಗಾಸಸ್ ಕದ್ದಾಲಿಕೆ ಸುದ್ದಿ ಓದಿ ಖಿನ್ನನಾಗಿದ್ದೆ. ಹೆಂಡತಿ ಬಂದಳು. ‘ಏನು ಮತ್ತೆ ವರಿ ಮಾಡಿಕೊಂಡಿದ್ದೀರ’ ಎಂದು ಕೇಳಿದಳು.

‘ಇಲ್ಲೂ ನನ್ನ ಹೆಸರು ಇರುತ್ತೋ ಇಲ್ಲವೋ’ ಎಂದೆ ನಿರಾಶೆಯ ಧ್ವನಿಯಲ್ಲಿ. ಅವಳಿಗೆ ಗೊತ್ತು, ಪ್ರತಿಸಲ ಪತ್ರಿಕೆಗಳಲ್ಲಿ ಲಿಸ್ಟ್ ಬಂದಾಗ ನನ್ನ ಹೆಸರು ಇರುತ್ತೇನೋ ಎಂದು ಹುಡುಕುತ್ತಿರುತ್ತೇನೆ. ನವೆಂಬರ್ 1 ಬರುವ ಕೆಲವು ದಿನಗಳ ಮೊದಲು ನನಗೆ ಭಾರೀ ಟೆನ್ಷನ್. ಫೋನ್ ಬಾರಿಸಿದಾಗಲೆಲ್ಲ ಬಹುಶಃ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರಾಜ್ಯೋತ್ಸವ ಪ್ರಶಸ್ತಿಗೆ ನನ್ನ ಸಮ್ಮತಿ ಕೇಳಲು ಬಂದಿರುವ ಕರೆ ಎಂದು ಭಾವಿಸುತ್ತಿದ್ದೆ. ಹೆಸರುಗಳು ಪ್ರಕಟವಾದ ಮೇಲೆ, ನನಗೆ ಅಚ್ಚರಿ ಮೂಡಿಸಲು ನನ್ನ ಕೇಳದೇ ನನ್ನ ಹೆಸರು ಪ್ರಕಟಿಸಿರಬಹುದು ಎಂದು ಬೆಂಬಿಡದ ಆಶಾಭಾವನೆಯಿಂದ ಪಟ್ಟಿಯನ್ನು ಪರಿಶೀಲಿಸುತ್ತಿದ್ದೆ, ಅಚ್ಚರಿ ಆಗುತ್ತಲೇ ಇರುತ್ತಿರಲಿಲ್ಲ.

‘ಅಯ್ಯೋ ನವೆಂಬರ್ ಇನ್ನೂ ದೂರ ಇದೆ. ಹೊಸ ಸರ್ಕಾರ ಬಂದಿದೆ. ಹೊಸ ಮಾನದಂಡ ಬರಬಹುದು ತಾಳಿ’ ಎಂದಳು. ‘ಅಂದಹಾಗೆ ಪದ್ಮ ಪ್ರಶಸ್ತಿಗೆ ಹೆಸರು ಸೂಚಿಸಲು ಮೋದೀಜಿ ಕರೆ ನೀಡಿದ್ದಾರೆ. ನಿಮ್ಮ ಫ್ರೆಂಡ್ಸ್‌ಗೆ ಹೇಳಿ ನಿಮ್ಮ ಹೆಸರು ಸೂಚಿಸಲು’ ಎಂದು ನನಗೆ ಸೂಚಿಸಿದಳು.

‘ಮೋದೀಜಿಗೆ ಯುವಕರು ಬೇಕಂತೆ. ನಾನು ನಾಟ್ ಎಲಿಜಿಬಲ್. ಆದರೆ ನನಗೆ ಈಗ ಪೆಗಾಸಸ್ ಚಿಂತೆ’ ಎಂದೆ. ಅವಳಿಗೆ ತಲೆಬುಡ ಅರ್ಥವಾಗಲಿಲ್ಲ. ಹೇಗೆ ಅನೇಕರ ಫೋನ್‌ಗಳನ್ನು ಕದ್ದಾಲಿಸಲು ಪೆಗಾಸಸ್ ತಂತ್ರಾಂಶ ಬಳಸಲಾಗುತ್ತಿದೆ ಎಂದು ವಿವರಿಸಿದೆ.

‘ಅದಕ್ಯಾಕೆ ನಿಮಗೆ ಚಿಂತೆ?’ ಎಂದಳು ಆಶ್ಚರ್ಯದಿಂದ. ‘ಅರೆ! ನನ್ನ ಫೋನನ್ನು ಸಹ ಕದ್ದಾಲಿಸುತ್ತಿದ್ದಾರೆ ಎಂದು ಜನಗಳಿಗೆ ಗೊತ್ತಾದರೆ ನಾನು ಫೇಮಸ್ ಆಗೊಲ್ಲವಾ? ಆದರೆ ಲಿಸ್ಟ್ ಹೊರಬಿದ್ದೇ ಇಲ್ಲ’ ಎಂದೆ.

‘ಅಲ್ರೀ ನಿಮ್ಮ ಫೋನನ್ನು ಕದ್ದಾಲಿಸಲು ಹೇಗೆ ಸಾಧ್ಯ?’ ಎಂದು ಕೇಳಿದಳು ತುಂಟತನದಿಂದ. ‘ವೈ ನಾಟ್?’ ಅಂದೆ. ‘ನಿಮ್ಮ ಫೋನಲ್ಲಿ ಇಂಟರ್‌ನೆಟ್ ಕನೆಕ್ಷನ್ ಇಲ್ಲವಲ್ರೀ. ಅದು ಬೇಸಿಕ್ ಫೋನ್’.

‘ಹೌದಲ್ವೆ? ಛೆ! ಮೊದಲು ಫೋನ್ ಬದಲಾಯಿಸಬೇಕು’ ಎಂದು ನಿರ್ಧರಿಸಿದೆ.

ಸಂಗತ

ಶಾಲಾ ಶಿಕ್ಷಣ ಮುಕ್ತಗೊಳಿಸುವೆಡೆಗೆ

ಪರ್ಯಾಯ ಶಿಕ್ಷಣಕ್ಕೆ ಎನ್‌ಐಒಎಸ್ ಭರವಸೆಯ ಆಶಾಕಿರಣವಾಗಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಚಿಕ್ಕಪುಟ್ಟ ವೃತ್ತಿನಿರತರು, ಅನೇಕ ಕೂಲಿ ಕಾರ್ಮಿಕರು ತಮ್ಮ ಮಕ್ಕಳ ಭವಿಷ್ಯ ರೂಪಿಸುವ ದೃಷ್ಟಿಯಿಂದ ಸಾವಿರಾರು ರೂಪಾಯಿ ಡೊನೇಶನ್ ನೀಡಿ ಅವರನ್ನು ಖಾಸಗಿ ಶಾಲೆಗಳಿಗೆ ದಾಖಲಿಸಿದ್ದರು. ಕೋವಿಡ್ ಸೃಷ್ಟಿಸಿದ ಆರ್ಥಿಕ ಬಿಕ್ಕಟ್ಟಿನ ಕಾರಣ ಕೆಲವರು ಮಕ್ಕಳನ್ನು ಖಾಸಗಿ ಶಾಲೆಗಳಿಂದ ಬಿಡಿಸಿ, ಸರ್ಕಾರಿ ಶಾಲೆಗಳಿಗೆ ದಾಖಲಿಸುತ್ತಿದ್ದಾರೆ. ಆದರೆ ಕೆಲವು ಶಾಲೆಗಳಲ್ಲಿ ಬಾಕಿ ಶುಲ್ಕ ಪಾವತಿಸದೇ ವರ್ಗಾವಣೆ ಪತ್ರ ನೀಡುತ್ತಿಲ್ಲ.

ಇಂತಹ ಪೋಷಕರೊಬ್ಬರು ಬೆಂಗಳೂರಿನ ಪ್ರತಿಷ್ಠಿತ ಶಾಲೆಯಲ್ಲಿ 9ನೇ ತರಗತಿಯಲ್ಲಿ ಕಲಿಯುತ್ತಿದ್ದ ತಮ್ಮ ಮಗನ ಶಾಲೆಯ ಶುಲ್ಕದ ಬಾಕಿ ಕಟ್ಟಲಾಗದೆ ವರ್ಗಾವಣೆ ಪತ್ರ ಪಡೆಯಲು ವಿಫಲರಾಗಿ, ಮಗನ ವಿದ್ಯಾಭ್ಯಾಸ ಮೊಟಕಾಗುವ ಸ್ಥಿತಿ ನೆನೆದು ಕಂಗಾಲಾಗಿದ್ದರು. ಮಗನ ಶಿಕ್ಷಣವನ್ನು ಮುಕ್ತ ಶಾಲಾ ಶಿಕ್ಷಣದ ರಾಷ್ಟ್ರೀಯ ಸಂಸ್ಥೆಯಲ್ಲಿ (National Institute of Open Schooling- NIOS) ಮುಂದುವರಿಸುವ ಅವಕಾಶ ಇರುವ ವಿಚಾರ ತಿಳಿದು, ಅದರಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಕ್ರಮ ಕೈಗೊಂಡು ನಿಶ್ಚಿಂತರಾದರು.

ಅನಿವಾರ್ಯ ಕಾರಣಗಳಿಂದ ಶಾಲೆಗೆ ದಾಖಲಾಗದ, ಶಾಲೆ ಬಿಟ್ಟ ಮಕ್ಕಳಿಗೆ ಔಪಚಾರಿಕ ಶಿಕ್ಷಣಕ್ಕೆ ಪರ್ಯಾಯವಾಗಿ ಶಿಕ್ಷಣ ಮುಂದುವರಿಸಲು ಕೇಂದ್ರ ಸರ್ಕಾರದಿಂದ ಸ್ಥಾಪಿತವಾದ ಎನ್‌ಐಒಎಸ್ ಪರಿಹಾರವಾಗಬಲ್ಲದು ಎಂಬ ವಿಷಯ ಅನೇಕರಿಗೆ ತಿಳಿಯದು. ಮಕ್ಕಳು ತಮ್ಮ ವಯೋಮಾನಕ್ಕೆ ಅನುಗುಣವಾಗಿ ಶಿಕ್ಷಣ ಹಾಗೂ ವೃತ್ತಿ ಸಂಬಂಧಿತ ಕೌಶಲಗಳ ಗಳಿಕೆಗೆ ಎನ್‌ಐಒಎಸ್ ಭರವಸೆಯ ಆಶಾಕಿರಣವಾಗಿದೆ. 1979ರಲ್ಲಿ ಸಿಬಿಎಸ್‌ಇ ಅಡಿ ಕಾರ್ಯನಿರ್ವಹಣೆ ಆರಂಭಿಸಿದ ಎನ್‌ಐಒಎಸ್, 1989ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸಿನಂತೆ ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಆರಂಭಿಸಿತು. ಶಾಲಾ ಶಿಕ್ಷಣದಲ್ಲಿ ವಿಶ್ವದಲ್ಲಿಯೇ ಅತಿ ದೊಡ್ಡದಾದ ಮುಕ್ತ ಕಲಿಕಾ ವ್ಯವಸ್ಥೆಯನ್ನು ಹೊಂದಿರುವ ಸಂಸ್ಥೆಯಿಂದ ದೇಶದಾದ್ಯಂತ ಈವರೆಗೆ 27 ಲಕ್ಷಕ್ಕೂ ಅಧಿಕ ಜನ ವಿವಿಧ ಹಂತಗಳ ವಿದ್ಯಾಭ್ಯಾಸವನ್ನು ಪೂರೈಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ– 2020ರಲ್ಲಿ ಎನ್‌ಐಒಎಸ್ ಜಾಲವನ್ನು ವಿಸ್ತರಿಸಿ ಸಶಕ್ತಗೊಳಿಸುವ, ರಾಜ್ಯ ಹಂತದಲ್ಲಿಯೂ ಮುಕ್ತ ಶಿಕ್ಷಣ ನೀಡುವ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಸ್ತಾವ ಇದೆ. ಪ್ರಸ್ತುತ ಮೈಸೂರಿನ ಜೆಎಸ್‌ಎಸ್ ಸಂಸ್ಥೆಯು ಹತ್ತನೇ ತರಗತಿಗೆ ಮುಕ್ತ ಶಿಕ್ಷಣ ನೀಡುವ ಕೇಂದ್ರವಾಗಿದ್ದು, ರಾಜ್ಯ ಸರ್ಕಾರದ ಪರೀಕ್ಷಾ ಮಂಡಳಿಯ ಮೂಲಕ ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ವ್ಯವಸ್ಥೆ ಮಾಡಲಾಗಿದೆ.

ಎನ್‌ಐಒಎಸ್‌ನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಎ, ಬಿ, ಸಿ ಎಂಬ ಮೂರು ಹಂತಗಳಲ್ಲಿ ನೀಡಲಾಗುತ್ತದೆ. ಸಾಮಾನ್ಯ ಶಾಲೆಗಳ 3ನೇ ತರಗತಿಗೆ ಸಮನಾದ ‘ಎ’ ಹಂತಕ್ಕೆ 7+ ವರ್ಷ ಆದವರು, 5ನೇ ತರಗತಿಗೆ ಸಮನಾದ ‘ಬಿ’ ಹಂತಕ್ಕೆ 9+ ವರ್ಷ ಆದವರು ಮತ್ತು 8ನೇ ತರಗತಿಗೆ ಸಮನಾದ ‘ಸಿ’ ಹಂತಕ್ಕೆ 12+ ವರ್ಷ ಆದವರು ಪ್ರವೇಶ ಪಡೆಯಬಹುದಾಗಿದೆ. ‘ಸಿ’ ಹಂತ ಪೂರೈಸಿದವರು 10ನೇ ತರಗತಿಯ ಶಿಕ್ಷಣಕ್ಕೆ ಪ್ರವೇಶ ಪಡೆಯಬಹುದು ಅಥವಾ 14+ ವರ್ಷ ಆದ ಯಾವುದೇ ಪೂರ್ವ ವಿದ್ಯಾರ್ಹತೆ ಇಲ್ಲದ ಹದಿಹರೆಯದವರು ಹಾಗೂ ವಯಸ್ಕರು ‘ಸ್ವ-ಕಲಿಕೆಗೆ ಸಮರ್ಥನಾಗಿದ್ದೇನೆ’ ಎಂಬ ಘೋಷಣೆಯೊಂದಿಗೆ ಹತ್ತನೇ ತರಗತಿಗೆ ನೇರ ಪ್ರವೇಶ ಹೊಂದಬಹುದು. 15+ ವರ್ಷ ಆಗಿದ್ದು ಎನ್‌ಐಒಎಸ್‌ನಿಂದ ಅಥವಾ ದೇಶದ ಯಾವುದೇ ಅಧಿಕೃತ ಬೋರ್ಡ್‌ನಲ್ಲಿ ಹತ್ತನೇ ತರಗತಿ ಪಾಸಾದವರು 12ನೇ ತರಗತಿಗೆ ಸಮನಾದ ಕೋರ್ಸ್‌ಗೆ ದಾಖಲಾಗಲು ಅವಕಾಶ ಇದೆ.

ಎಲ್ಲಾ ಕೋರ್ಸ್‌ಗಳಲ್ಲಿ ಶೈಕ್ಷಣಿಕ ವಿಷಯಗಳ ಜೊತೆ ಕೃಷಿ, ವಾಣಿಜ್ಯ, ವ್ಯಾಪಾರ, ಎಂಜಿನಿಯರಿಂಗ್, ತಂತ್ರಜ್ಞಾನ, ಕಂಪ್ಯೂಟರ್ ಸಂಬಂಧಿತ ವೃತ್ತಿಪರ ಕೋರ್ಸ್‌ಗಳನ್ನು ಕಲಿಯಲು ಅವಕಾಶ ಇದೆ. ಎನ್‌ಐಒಎಸ್ ಕೋರ್ಸ್‌ಗಳಲ್ಲಿ 12ನೇ ತರಗತಿ ಪ್ರಮಾಣಪತ್ರ ಪಡೆದವರು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ಇದೆ.



ಕೋವಿಡ್‌ನಿಂದ ಉಂಟಾಗಿರುವ ಶೈಕ್ಷಣಿಕ ಬಿಕ್ಕಟ್ಟು ನಿವಾರಣೆಗೆ ಮುಕ್ತ ಶಿಕ್ಷಣದ ಜಾಲವನ್ನು ಸದುಪಯೋಗಪಡಿಸಿಕೊಳ್ಳಲು ಇದು ಸಕಾಲ. ವಿವಿಧ ಕಾರಣಗಳಿಂದ ಶಾಲೆ ಬಿಟ್ಟ ಅನೇಕರು ಎನ್‌ಐಒಎಸ್ ಮೂಲಕ ಶಿಕ್ಷಣ ಪಡೆದು ವೈದ್ಯ, ಎಂಜಿನಿಯರ್, ಉದ್ಯಮಿ, ಉದ್ಯೋಗಿ ಆದ ಯಶಸ್ಸಿನ ಉದಾಹರಣೆಗಳು ಎನ್‌ಐಒಎಸ್ ಜಾಲತಾಣದಲ್ಲಿವೆ.

ಶಾಲೆಗೆ ಭೌತಿಕವಾಗಿ ಹಾಜರಾಗಿಯೇ ಕಲಿಯಬೇಕು ಎಂಬ ಮಿತಿಯಿಂದಾಗಿ ಲಕ್ಷಾಂತರ ಮಕ್ಕಳು ಶಿಕ್ಷಣ ಪಡೆಯುವ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಈ ರೀತಿ ಕಲಿಯುವ ಹಕ್ಕಿನಿಂದ ಏಕೆ ವಂಚಿತರಾಗಬೇಕು ಎಂದು ತತ್ವಶಾಸ್ತ್ರಜ್ಞ ಇವಾನ್ ಇಲ್ಲಿಚ್ ಅವರು ತಮ್ಮ ‘ಡಿ–ಸ್ಕೂಲಿಂಗ್ ಸೊಸೈಟಿ’ ಪುಸ್ತಕದಲ್ಲಿ ಪ್ರಶ್ನಿಸುತ್ತಾರೆ. ಎಲ್ಲರೂ ಶಿಕ್ಷಣ ಪಡೆಯಲು ಸಾಧ್ಯವಾಗುವಂತಹ ಶಾಲೆಗಳ ರೀತಿಯಲ್ಲಿ ಕಾರ್ಯನಿರ್ವಹಿಸುವ ಪರ್ಯಾಯ ಸಂಸ್ಥೆಗಳನ್ನು ಕಟ್ಟುವ ಅವಶ್ಯಕತೆಯನ್ನು ಇಲ್ಲಿಚ್ ಪ್ರತಿಪಾದಿಸುತ್ತಾರೆ.

ಅದರಂತೆ, ಉತ್ತಮ ಮೂಲ ಸೌಕರ್ಯ ಹೊಂದಿ ಔಪಚಾರಿಕ ಶಿಕ್ಷಣ ನೀಡುತ್ತಿರುವ ದೊಡ್ಡ ಶಾಲೆಗಳು ಎನ್‌ಐಒಎಸ್ ಜೊತೆ ಕೈಜೋಡಿಸಿ, ಶಿಕ್ಷಣವಂಚಿತ ಮಕ್ಕಳು ಶಿಕ್ಷಣ ಮುಂದುವರಿಸಲು ಸಾಧ್ಯವಾಗುವಂತೆ ಕಾರ್ಯನಿರ್ವಹಿಸಲು ಅಗತ್ಯವಾದ ವ್ಯವಸ್ಥೆ, ಅನುಕೂಲಗಳನ್ನು ಕಲ್ಪಿಸಬೇಕಿದೆ.

ಲೇಖಕ: ಹಿರಿಯ ಸಹಾಯಕ ನಿರ್ದೇಶಕ, ಡಿ.ಎಸ್‌.ಇ.ಆರ್‌.ಟಿ.

ವಾಚಕರ ವಾಣಿ

ಖಾಲಿ ಕುರ್ಚಿಯ ಮಹಿಮೆ!

ಸಿ.ಎಂ. ಕುರ್ಚಿ ಖಾಲಿ ಇಲ್ಲ ಎಂದು ಹೇಳುತ್ತಲೇ ಖಾಲಿಯೂ ಆಯಿತು, ತಕ್ಷಣ ಭರ್ತಿಯೂ ಆಯಿತು! ಇನ್ನಿರುವುದು ಡಿ.ಸಿ.ಎಂ. ಕುರ್ಚಿ. ಹಲವರು ಈಗಾಗಲೇ ಈ ಕುರ್ಚಿ ಮೇಲೆ ಟವೆಲ್, ಕರ್ಚೀಫ್ ಹಾಕಿದ್ದು, ದೆಹಲಿಯಿಂದ ಹಾಕುವ ಫ್ಯಾನ್ ಸ್ವಿಚ್‌ಗೆ ಟವೆಲ್, ಕರ್ಚೀಫ್ ಹಾರಿ ಬೀಳಲೂಬಹುದು, ಉಳಿಯಲೂಬಹುದು!

ಇಲ್ಲೂ ಸಲ್ಲದವರು ಸಚಿವ ಸ್ಥಾನದ ಕುರ್ಚಿಗೆ ಲಾಬಿ ನಡೆಸಬಹುದು. ‘ಗುಲಾಬಿ’ ಯಾರಿಗೆ ದಕ್ಕುವುದೋ?! ಇದೂ ದಕ್ಕದಿದ್ದಲ್ಲಿ, ಇದೆಯಲ್ಲ ನಿಗಮ, ಮಂಡಳಿ ಕುರ್ಚಿ! ಅಲ್ಲೂ ಕುರ್ಚಿ ಸಿಗದಿದ್ದರೆ ಶುರುವಾಗುವುದು ವಾಕ್ಸಮರದ ಚರ್ಚೆ, ಕುರ್ಚಿ ವಂಚಿತರಿಂದ! ಹೇಗಿದೆ ನೋಡಿ ಖಾಲಿ ಕುರ್ಚಿಯ ಮಹಿಮೆ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಕೋವಿಡ್ ಪ್ರಕರಣ: ಬದಲಾಗಲಿ ದೃಷ್ಟಿಕೋನ

ಕೊರೊನಾ ಎರಡನೇ ಅಲೆಯ ಆರ್ಭಟ ತಗ್ಗಿ ನಿಟ್ಟುಸಿರು ಬಿಡುತ್ತಿರುವಂತೆಯೇ ಮೂರನೇ ಅಲೆಯ ಎಚ್ಚರಿಕೆ ಸಂದೇಶಗಳು ಕೇಳಿಬರುತ್ತಿವೆ. ಆದರೆ ಮಳೆಯ ಆರ್ಭಟ, ರಾಜಕೀಯ ಸ್ಥಿತ್ಯಂತರಗಳ ಮೇಲಾಟದ ನಡುವೆ ಅದು ಮಾಧ್ಯಮಗಳಲ್ಲಿ ಹೆಚ್ಚು ಸುದ್ದಿಯಾಗುತ್ತಿಲ್ಲ. ಎರಡನೇ ಅಲೆ ಪ್ರಾರಂಭದಿಂದಲೂ ಮತ್ತು ಈಗಲೂ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವುದು ಮಹಾರಾಷ್ಟ್ರ ಮತ್ತು ಕೇರಳದಲ್ಲಿ.

ಕುತೂಹಲಕಾರಿಯಾದ ಈ ವಿದ್ಯಮಾನಕ್ಕೆ ಇದೀಗ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ (ಐಸಿಎಂಆರ್) ಸೆರೊ ಸಮೀಕ್ಷೆಯ ವರದಿಯಲ್ಲಿ (ಪ್ರ.ವಾ., ಜುಲೈ 29) ಉತ್ತರವಿದೆ. ಕೇರಳದಲ್ಲಿ ಪ್ರತೀ ಆರು ಪ್ರಕರಣಗಳಲ್ಲಿ ಒಂದು ಪ್ರಕರಣ ಪತ್ತೆಯಾದರೆ, ಮಹಾರಾಷ್ಟ್ರದಲ್ಲಿ ಪ್ರತೀ ಹನ್ನೆರಡು ಪ್ರಕರಣಗಳಲ್ಲಿ ಒಂದು, ಬಿಹಾರದಲ್ಲಿ ಪ್ರತೀ 134 ಕೋವಿಡ್ ಪ್ರಕರಣಗಳಲ್ಲಿ ಒಂದು ಪ್ರಕರಣವಷ್ಟೇ ಪತ್ತೆಯಾಗಿವೆ. ಅಂದರೆ ಕೋವಿಡ್ ಪ್ರಕರಣಗಳು ಕೆಲವು ರಾಜ್ಯಗಳಲ್ಲಿ ಹೆಚ್ಚು, ಕೆಲವು ರಾಜ್ಯಗಳಲ್ಲಿ ಕಡಿಮೆ ವರದಿಯಾಗುತ್ತಿರುವುದರ ಅಸಲಿಯತ್ತು ಈಗ ಗೊತ್ತಾಗಿದೆ.

ಕಡಿಮೆ ಪತ್ತೆಯಾದ ರಾಜ್ಯಗಳ ಸಾಧನೆ ಮತ್ತು ಹೆಚ್ಚು ವರದಿಯಾಗುತ್ತಿರುವ ರಾಜ್ಯಗಳ ನ್ಯೂನತೆಯನ್ನು ಇನ್ನು ಬೇರೊಂದು ದೃಷ್ಟಿಕೋನದಿಂದ ನೋಡಬೇಕಿದೆ. ಇನ್ನಾದರೂ ಹೆಚ್ಚು ಪ್ರಕರಣಗಳು ವರದಿಯಾಗುವ ರಾಜ್ಯಗಳನ್ನು ಬಿಟ್ಟು ಕಡಿಮೆ ಪ್ರಕರಣಗಳು ಪತ್ತೆಯಾಗುವ ರಾಜ್ಯಗಳತ್ತ ಗಮನಹರಿಸುವುದು ಒಳ್ಳೆಯದು.

ಹೊಸಮನೆ ವೆಂಕಟೇಶ, ಟಿ.ನರಸೀಪುರ

ಮಂಗಗಳ ಸಾವು: ಮನಕಲಕುವ ವಿದ್ಯಮಾನ

ಬೇಲೂರು ತಾಲ್ಲೂಕಿನ ಚೌಡನಹಳ್ಳಿಯಲ್ಲಿ 38 ಮಂಗಗಳ ಮೃತದೇಹಗಳು ಮೂಟೆಯಲ್ಲಿ ಕಂಡುಬಂದಿರುವುದನ್ನು ತಿಳಿದು ಮನಕಲಕಿತು. ಈ ಸಾವಿಗೆ ಕಾರಣವನ್ನು ಪತ್ತೆ ಹಚ್ಚಿ, ಇದಕ್ಕೆ ಕಾರಣರಾದವರಿಗೆ ಕಠಿಣ ಶಿಕ್ಷೆಯಾಗಲಿ. ಗಿಡ ಮರ, ಪ್ರಾಣಿ ಪಕ್ಷಿಗಳ ನಾಶದಿಂದ ಪರಿಸರದಲ್ಲಿ ಅಸಮತೋಲನ ಉಂಟಾಗಿ ಪ್ರಾಕೃತಿಕ ಅವಘಡಗಳು ಸಂಭವಿಸುತ್ತಿವೆ. ಹೀಗಿದ್ದರೂ ಪರಿಸರದ ಮೇಲಿನ ದೌರ್ಜನ್ಯವನ್ನು ಹೀಗೇ ಮುಂದುವರಿಸಿದರೆ, ಮುಂದೊಂದು ದಿನ ಮಾನವ ಜನಾಂಗ ದೊಡ್ಡ ಬೆಲೆ ತೆರಬೇಕಾದೀತು.

ಎಸ್.ಎಸ್.ಭಾವಿಕಟ್ಟಿ ರೇವೂರ, ಅಫಜಲಪುರ

ಬಿಲ್ಲುಗಾರಿಕೆ: ಆತ್ಮಾವಲೋಕನ ನಡೆಯಲಿ

ಪ್ರತೀ ಬಾರಿ ಒಲಿಂಪಿಕ್ಸ್ ಕ್ರೀಡಾಕೂಟದ ಆರಂಭದಲ್ಲಿ ಬಿಲ್ಲುಗಾರಿಕೆಯು (ಆರ್ಚರಿ) ಭಾರತೀಯರಲ್ಲಿ ಪದಕದ ಭರವಸೆ ಹುಟ್ಟಿಸುತ್ತದಾದರೂ ಬಳಿಕ ಸತತವಾಗಿ ವಿಫಲವಾಗುತ್ತಿದೆ. ಇತರ ವಿಶ್ವ ಮಟ್ಟದ ಸ್ಪರ್ಧೆಗಳಲ್ಲಿ ಗೆದ್ದು ರಾರಾಜಿಸುವ ನಮ್ಮ ಬಿಲ್ಲುಗಾರರು ಒಲಿಂಪಿಕ್ಸ್‌ನಲ್ಲಿ ಅರ್ಹತಾ ಸುತ್ತಿನಲ್ಲೇ ಎಡವುತ್ತಿದ್ದಾರೆ. ಕಳೆದ ತಿಂಗಳು ಆರ್ಚರಿ ಜಾಗತಿಕ ರ‍್ಯಾಂಕಿಂಗ್‌ನಲ್ಲಿ ವಿಶ್ವ ಚಾಂಪಿಯನ್ ಆಗಿ ಭಾರತೀಯರೆಲ್ಲರ ಸಂಭ್ರಮಕ್ಕೆ ಕಾರಣರಾಗಿದ್ದ ದೀಪಿಕಾ ಕುಮಾರಿ ಈ ಬಾರಿ ಸೆಮಿಫೈನಲ್ ತಲುಪಲು ಸಹ ವಿಫಲರಾಗಿದ್ದಾರೆ.

ಲಿಂಬಾ ರಾಮ್ ಅವರಿಂದ ಇತ್ತೀಚಿನ ಪ್ರತಿಭೆ ದೀಪಿಕಾ ಕುಮಾರಿಯವರವರೆಗೂ ಒಲಿಂಪಿಕ್ಸ್ ಪದಕದ ವಿಷಯದಲ್ಲಿ ಭಾರತೀಯರಿಗೆ ಭ್ರಮನಿರಸನವಾಗುತ್ತಿದೆ. ಧನುರ್ವಿದ್ಯೆಯಲ್ಲಿ ರಾಮ, ಅರ್ಜುನನ ಸ್ಫೂರ್ತಿಯಿಂದ ವಿಶ್ವಗುರುವಾಗಬೇಕಿದ್ದ ಭಾರತವು ಹೀಗೆ ವಿಫಲವಾಗುತ್ತಿರುವುದಕ್ಕೆ ರಾಷ್ಟ್ರೀಯ ಬಿಲ್ಲುಗಾರಿಕಾ ಸಂಸ್ಥೆ ಆತ್ಮವಿಮರ್ಶೆ ಮಾಡಿಕೊಂಡು, ಭವಿಷ್ಯದಲ್ಲಿ ಪದಕದ ಕೊರತೆ ನೀಗಿಸಲು ಪ್ರಯತ್ನಿಸಲಿ.

ಡಾ. ಜ್ಞಾನೇಶ್ವರ ಕೆ.ಬಿ., ಬೆಳಗಾವಿ

ಜಾತಿ ಎಲ್ಲಿದೆ ಎನ್ನುವವರಿಗೆ...

ಈ ದಿನಗಳಲ್ಲಿ ನೀವು ಯಾರೊಡನೆಯಾದರೂ ಜಾತಿಗಳ ಮೇಲು ಕೀಳಿನ ಸಾಮಾಜಿಕ ವ್ಯವಸ್ಥೆಯಿಂದ ಭರತಖಂಡದ ಇತಿಹಾಸದ ಉದ್ದಕ್ಕೂ ಕೋಟಿಗಟ್ಟಲೆ ಜನ ಹಸಿವು, ಅಪಮಾನ ಮತ್ತು ಬಡತನದಿಂದ ನರಳುತ್ತಿರುವುದರ ಬಗ್ಗೆ ಮಾತನಾಡಲು ತೊಡಗಿದರೆ, ಮರುಗಳಿಗೆಯಲ್ಲಿಯೇ ಅವರು ‘ರೀ, ಈಗ ಜಾತಿ ಎಲ್ಲಿದೆ? ...ಪ್ರತಿಭೆ ಮತ್ತು ಪರಿಶ್ರಮ ಇದ್ದರೆ ಯಾರು ಬೇಕಾದರೂ ಮುಂದೆ ಬರಬಹುದು’ ಎನ್ನುತ್ತಾರೆ. ಆದರೆ ಕಳೆದ ವಾರ, ಕರ್ನಾಟಕದ ಮುಖ್ಯಮಂತ್ರಿ ಯಾರಾಗಬೇಕೆಂಬ ಪ್ರಶ್ನೆ ಬಂದಾಗ, ವಿಧಾನಸಭಾ ಸದಸ್ಯರ ಪ್ರತಿಭೆ ಮತ್ತು ಪರಿಶ್ರಮದ ಬಗ್ಗೆ ಮಾತನಾಡುವ ಬದಲು, ಮೂರು ಜಾತಿಗಳಲ್ಲಿ ಯಾವ ಜಾತಿಯವರು ಮುಖ್ಯಮಂತ್ರಿ ಆಗಬೇಕು ಎಂಬುದೇ ದೊಡ್ಡ ಸಂಗತಿಯಾಗಿತ್ತು. ಆದ್ದರಿಂದ ಇನ್ನುಳಿದ ನೂರಾರು ಬಗೆಯ ಜಾತಿ, ಉಪಜಾತಿಗಳಿಗೆ ಸೇರಿದ ವಿಧಾನಸಭಾ ಸದಸ್ಯರು ಜಾತಿಯ ಕಾರಣದಿಂದಲೇ ಅವಕಾಶ ವಂಚಿತರಾದರು.

ಸಾವಿರಾರು ವರ್ಷಗಳಿಂದಲೂ ನಮ್ಮ ದೇಶದಲ್ಲಿ ಜಾತಿ ಎನ್ನುವುದು ಕೇವಲ ಹೆಸರಿನ ಸೂಚಕವಲ್ಲ. ಅದು ಪ್ರತಿಯೊಬ್ಬ ವ್ಯಕ್ತಿಯ ಬದುಕಿನ ಅವಕಾಶಗಳನ್ನು ಹುಟ್ಟಿನಿಂದಲೇ ತೆರೆಯುವ ಇಲ್ಲವೇ ಮುಚ್ಚುವ ಬಾಗಿಲು. ಬಸ್ ಇಲ್ಲವೇ ರೈಲುಗಳಲ್ಲಿ ಸಂಚರಿಸುವಾಗ ಅದನ್ನು ಮುನ್ನಡೆಸುವ ಡ್ರೈವರ್ ನಮ್ಮ ಜಾತಿಯವನಾಗಿರಬೇಕು ಎಂದು ಯಾರೊಬ್ಬರೂ ಯೋಚಿಸುವುದಿಲ್ಲ. ಏಕೆಂದರೆ ಆಗ ನಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗುವ ಒಳ್ಳೆಯ ಡ್ರೈವರ್ ಬೇಕು. ಆದರೆ ನಾಡನ್ನು ಮುನ್ನಡೆಸುವ ಡ್ರೈವರ್ ನಮ್ಮ ಜಾತಿಯವನೇ ಆಗಿರಬೇಕು ಎಂದು ನಾವೆಲ್ಲರೂ ಹಂಬಲಿಸುವಂತೆ ಮಾಡಿರುವುದೇ ಜಾತಿ. ಜಾತಿ ಎಲ್ಲಿದೆ ಎನ್ನುವ ಪ್ರಶ್ನೆಗೆ ಉತ್ತರ ‘ನಾವೆಲ್ಲರೂ ಸಾಮಾಜಿಕ ವ್ಯಕ್ತಿಗಳಾಗಿ ಬೆಳೆಯುವಾಗಲೇ ಜಾತಿ ಎಂಬುದು ನಮ್ಮ ನರನಾಡಿಗಳಲ್ಲಿ ಸೇರಿಕೊಂಡಿದೆ’.

ಸಿ.ಪಿ.ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಜಕಾರಣದಲ್ಲಿ ಮಠಾಧೀಶರ ಪಾಲ್ಗೊಳ್ಳುವಿಕೆ ಸರಿಯೇ?

ಪ್ರಜಾತಂತ್ರದಲ್ಲಿ ಮಠಗಳ ಪ್ರಾಬಲ್ಯ ಹೆಚ್ಚುತ್ತಲೇ ಹೋಗಿದ್ದು ಹೇಗೆ?



ನಿಜವಾಗಿಯೂ ಅತ್ಯಂತ ಸಣ್ಣ ಜಾತಿಗಳು ಕೂಡ ಈಗ ಮಠಗಳನ್ನು ಹೊಂದುವುದು ಕಡ್ಡಾಯ ಎನ್ನುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಮೀಸಲಾತಿ ವರ್ಗೀಕರಣ ಬದಲಾವಣೆಯ ಹೋರಾಟದಲ್ಲಿ ಕಂಡ ಹಾಗೆ ತಾವು ಹೆಚ್ಚು ಹೆಚ್ಚು ಕಾಣಿಸಿಕೊಳ್ಳಬೇಕು ಎಂದು ಮಠಗಳು ಬಯಸುತ್ತಿವೆ. ಸರ್ಕಾರವು ತಮ್ಮತ್ತ ಗಮನ ಹರಿಸುತ್ತಲೇ ಇರಬೇಕು ಎಂಬ ಆಕಾಂಕ್ಷೆಯನ್ನೂ ಹೊಂದಿವೆ

ಪ್ರಜಾವಾಣಿ ಚರ್ಚೆ

• ಜಾನಕಿ ನಾಯರ್

ಮಠಾಧೀಶರು, ಜನಪ್ರಾತಿನಿಧ್ಯದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ವ್ಯಕ್ತಿ, ಪಕ್ಷ ಅಥವಾ ಸಿದ್ಧಾಂತವನ್ನು ಸಾರ್ವಜನಿಕವಾಗಿ ಬೆಂಬಲಿಸಬಹುದೇ? ಹಿಂದುಳಿದ ಜಾತಿಗಳಿಗೆ ಇರುವ ಮೀಸಲಾತಿಯ ವರ್ಗೀಕರಣದಲ್ಲಿ ಪಂಚಮಸಾಲಿ ಲಿಂಗಾಯತರನ್ನು 3ಬಿ ವರ್ಗದ ಬದಲಿಗೆ 2ಎ ವರ್ಗಕ್ಕೆ ಸೇರಿಸಬೇಕು ಎಂಬ ಬೇಡಿಕೆಯನ್ನು 2021ರ ಆರಂಭದಲ್ಲಿ ಉಗ್ರವಾಗಿಯೇ ಪ್ರತಿಪಾದಿಸಲಾದ ಬಳಿಕ ಈ ಪ್ರಶ್ನೆಯ ಬಗ್ಗೆ ಹಲವರು ಸಾರ್ವಜನಿಕ ಚರ್ಚೆ ನಡೆಸಿದ್ದಾರೆ. ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ಅದೇ ಸ್ಥಾನದಲ್ಲಿ ಉಳಿಸಬೇಕು ಎಂದು ದೊಡ್ಡ ಸಂಖ್ಯೆಯಲ್ಲಿ ಮಠಾಧೀಶರು ಸಾರ್ವಜನಿಕವಾಗಿ ಆಗ್ರಹಿಸಿದ್ದರು. ಮಠಾಧೀಶರು ಮುಂದಿಟ್ಟ ಹಲವು ಬೇಡಿಕೆಗಳು ಬೆದರಿಕೆಯ ಅಂಚಿನಲ್ಲಿಯೇ ಇದ್ದವು. ಕಾವಿಧಾರಿಗಳು ಇಂತಹ ಆಗ್ರಹಗಳನ್ನು ಇರಿಸಿಕೊಂಡು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು ಸರಿಯೇ ಎಂಬ ಚರ್ಚೆಯೂ ಈಗ ಮುನ್ನೆಲೆಗೆ ಬಂದಿದೆ.

ಬಹುದೀರ್ಘ ಕಾಲದಿಂದ ಒಳಗೊಳಗೇ ರೂಪುಗೊಳ್ಳುತ್ತಿದ್ದ ಪ್ರಕ್ರಿಯೆಯೊಂದರ ಅಭಿವ್ಯಕ್ತಿ ಎಂದು ಮಠಾಧೀಶರು ಬೀದಿಗೆ ಇಳಿದಿದ್ದನ್ನು ವಿಶ್ಲೇಷಿಸಬಹುದು. 1883ರಲ್ಲಿಯೇ ಆರಂಭಗೊಂಡು ಅತ್ಯಂತ ಗಟ್ಟಿಯಾಗಿ ನೆಲೆಯೂರಿರುವ ಮುಜರಾಯಿ ಇಲಾಖೆಯ ಸಾವಿರಾರು ಪುಟಗಳ ಕಡತಗಳನ್ನು ಅಧ್ಯಯನ ಮಾಡಿರುವ ಮಾನವಶಾಸ್ತ್ರಜ್ಞರು ಮತ್ತು ಇತಿಹಾಸಕಾರರು, ಮಠಗಳು ಮತ್ತು ಮೈಸೂರು/ಕರ್ನಾಟಕ ಸರ್ಕಾರದ ನಡುವಣ ಸಂಕೀರ್ಣ ಸಂಬಂಧವನ್ನು ಅರ್ಥ ಮಾಡಿಕೊಳ್ಳುವ ಯತ್ನ ನಡೆಸಿದ್ದಾರೆ. ಕೆಲವು ಪ್ರಮುಖ ಮಠಗಳು ತಮ್ಮನ್ನು ಸಂಸ್ಥಾನಗಳು ಅಥವಾ ಸಿಂಹಾಸನ ಪೀಠಗಳು ಎಂದೂ ಸ್ವಾಮೀಜಿಯನ್ನು ಜಗದ್ಗುರು, ನೃಪ ಇತ್ಯಾದಿಯಾಗಿ ಕರೆದುಕೊಳ್ಳುವುದನ್ನೂ ನಾವು ನೋಡಿದ್ದೇವೆ. ಕೆಲವು ಮಠಗಳ ಕಟ್ಟಡದ ನಿರ್ಮಾಣವೇ ಕೋಟೆಯನ್ನು ಹೋಲುವಂತಿವೆ. ಮಠಗಳಲ್ಲಿ ನಡೆಯುವ ದಸರಾ ದರ್ಬಾರ್ ಸಂದರ್ಭದಲ್ಲಿ ಮಠಾಧೀಶರು ನಾಡನ್ನಾಳುವ ದೊರೆಗಳಂತೆಯೇ ತಮ್ಮನ್ನು ಬಿಂಬಿಸಿಕೊಳ್ಳುತ್ತಾರೆ (ಪ್ರಭಾವಳಿ ಮತ್ತು ದೃಶ್ಯಾವಳಿಗಳೆರಡಲ್ಲೂ ಇದು ನಿಜ). ಕಿರಿಯ ಸ್ವಾಮೀಜಿಯನ್ನು ಮಠಕ್ಕೆ ಸೇರಿಸಿಕೊಳ್ಳುವ ಪ್ರಕ್ರಿಯೆಗೆ ಪಟ್ಟಾಭಿಷೇಕ ಎಂದೇ ಹೆಸರು.

ಕರ್ನಾಟಕದ ಮಠಗಳು ಅದರಲ್ಲೂ ವಿಶೇಷವಾಗಿ ಲಿಂಗಾಯತ ಮಠಗಳು ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಕ್ಕೆ ಪರ್ಯಾಯವಾಗಿ ತಮ್ಮನ್ನು ಬಿಂಬಿಸಿಕೊಳ್ಳುವುದು ನೇರವಾದ ರೀತಿಯಲ್ಲಿ ಮುನ್ನೆಲೆಗೆ ಬಂದಿದ್ದು ಅಲ್ಲ. ಹಾಗೆ ನೋಡಿದರೆ,



ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರಿಗೆ ವಿವಿಧ ಮಠಗಳ ಮಠಾಧೀಶರು ಜತೆಯಾಗಿ ಬೆಂಬಲ ಸೂಚಿಸಿದ್ದರು

ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿ ಸರ್ಕಾರವು ಮಠಗಳನ್ನು ನಿಯಂತ್ರಣದಲ್ಲಿಯೇ ಇರಿಸಿಕೊಂಡಿತ್ತು. ಮಠಗಳು ಎಷ್ಟು ವರ್ಷ ಹಳೆಯವು ಮತ್ತು ಅವುಗಳ ಸಂಪತ್ತು ಎಷ್ಟು ಎಂಬುದರ ಆಧಾರದಲ್ಲಿ ಮೈಸೂರು ಆಡಳಿತವು ಮಠಗಳನ್ನು ಶ್ರೇಣೀಕರಣಗೊಳಿಸಿತ್ತು. ಬಿರುದುಗಳಿಗೆ ಸಂಬಂಧಿಸಿ ನಡೆದ ಸಂಘರ್ಷದಲ್ಲಿಯೂ ಇದು ಸ್ಪಷ್ಟವಾಗಿ ಗೋಚರಿಸಿತ್ತು. ಮೈಸೂರಿನ ಬೀದಿಗಳಲ್ಲಿ ಅಡ್ಡಪಲ್ಲಕ್ಕಿ ಉತ್ಸವ ನಡೆಸಬೇಕು ಎಂಬ ಲಿಂಗಾಯತ ಮಠಗಳ ಬೇಡಿಕೆಗೆ ಸಂಬಂಧಿಸಿ ನ್ಯಾಯಾಲಯಗಳು ಮಹತ್ವದ ಪಾತ್ರ ವಹಿಸಿವೆ. ಶೃಂಗೇರಿ ಸ್ವಾಮೀಜಿಗಳನ್ನು ಬಿಟ್ಟರೆ ಇತರ ಯಾವ ಸ್ವಾಮೀಜಿಗೂ ಈ ಹಕ್ಕು ಇಲ್ಲ ಎಂದು ನ್ಯಾಯಾಲಯಗಳು ಹೇಳಿವೆ. 19ನೇ ಶತಮಾನದ ಕೊನೆಯ ಅವಧಿಯಲ್ಲಿ ಹಕ್ಕುಗಳಿಗೆ ಸಂಬಂಧಿಸಿ ಇಂತಹ ಹಲವು ಸಂಘರ್ಷಗಳು ನ್ಯಾಯಾಲಯಗಳಲ್ಲಿ ನಡೆದಿವೆ. ವಸಾಹತುಶಾಹಿ ಅವಧಿಯಲ್ಲಿ, ಮಠಗಳು ಸೇರಿದಂತೆ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಮೇಲ್ವಿಚಾರಣೆ ನಡೆಸುವುದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸರ್ಕಾರಿ ಅಧಿಕಾರಿಗಳ ಆಡಳಿತಾತ್ಮಕ ಕರ್ತವ್ಯದಲ್ಲಿ ನಿಯಮಿತವಾದ ಚಟುವಟಿಕೆ ಆಗಿತ್ತು. ತಮ್ಮ ವ್ಯಾಪ್ತಿಯ ಎಲ್ಲ ಧಾರ್ಮಿಕ ಸಂಸ್ಥೆಗಳ ಮೇಲ್ವಿಚಾರಣೆಯನ್ನು ಅಧಿಕಾರಿಗಳು ನಡೆಸುತ್ತಿದ್ದರು; ವಂಶಪಾರಂಪರ್ಯದ ಉತ್ತರಾಧಿಕಾರಕ್ಕೆ ಸಂಬಂಧಿಸಿದ ತಕರಾರುಗಳನ್ನು ಬಗೆಹರಿಸುವುದು, ಈ ಸಂಸ್ಥೆಗಳ ಸಿಬ್ಬಂದಿ ನಿರ್ವಹಣೆ, ಈ ಮಠಗಳು ಯಾವ ಪ್ರಮಾಣದ ವೆಚ್ಚ ಮಾಡಬಹುದು ಎಂಬುದರ ನಿಗದಿ ಮತ್ತು ಕೆಲವೊಮ್ಮೆ ಹೆಚ್ಚುವರಿ ವೆಚ್ಚಕ್ಕೆ ಅನುಮೋದನೆ ಎಲ್ಲವನ್ನೂ ಅಧಿಕಾರಿಗಳು ಮಾಡುತ್ತಿದ್ದರು.

ಸ್ವಾತಂತ್ರ್ಯದ ಬಳಿಕ ಜನಪ್ರಾತಿನಿಧ್ಯದ ಪ್ರಜಾತಂತ್ರದಲ್ಲಿ ಇವೆಲ್ಲವೂ ಬದಲಾಗಿದ್ದು ಹೇಗೆ? ಸರ್ಕಾರದ ಅಧಿಕಾರಕ್ಕೆ ಪರ್ಯಾಯವಾಗಿ ದಿನನಿತ್ಯದ ಜೀವನದಲ್ಲಿ ಸಂಧಾನಕಾರರ ಪಾತ್ರವು ತಮಗೆ ದೊರೆಯುವಂತೆ ಮಾಡಿಕೊಳ್ಳುವಲ್ಲಿ ಮಠಗಳ ಪಾತ್ರ ಏನಿದೆ? ತಮ್ಮ ಸಮುದಾಯಗಳಿಗೆ ಸಂಬಂಧಿಸಿ ಕಾವಿಧಾರಿಗಳು ಮಹತ್ವದ ಪಾತ್ರ ವಹಿಸುತ್ತಿದ್ದಾರೆ ಎಂಬುದು ದಿನಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳು ಮತ್ತು ವರದಿಗಳನ್ನು ನೋಡಿದರೆ ಮನದಟ್ಟಾಗುತ್ತದೆ. ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗಿಯಾಗುವುದು, ಅಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಅಥವಾ ವ್ಯಾಜ್ಯಗಳನ್ನು ಪರಿಹರಿಸುವುದು ಎಲ್ಲದರಲ್ಲಿಯೂ ಮಠದ ಭಾಗವಹಿಸುವಿಕೆಯು ಗಣನೀಯವಾಗಿಯೇ ಇದೆ.

ಸರ್ಕಾರವು ನಡೆಸುವ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಮಠಾಧೀಶರು ಭಾಗಿಯಾಗುತ್ತಿದ್ದಾರೆ ಎಂದಾದರೆ ಅವರಿಗೆ ರಾಜಕಾಣಿಗಳಿಗಿಂತ ಸ್ವಲ್ಪ ಎತ್ತರದ ಕುರ್ಚಿ ಹಾಕಲಾಗುತ್ತದೆ. ಚುನಾಯಿತ ಪ್ರತಿನಿಧಿಗಳಿಂದ ಈ ಸ್ವಾಮೀಜಿಗಳು ಭಾರಿ ಗೌರವ ಪಡೆದುಕೊಳ್ಳುತ್ತಾರೆ. ತಾವು ಹೆಚ್ಚು ಹೆಚ್ಚು ಕಾಣಿಸಿಕೊಳ್ಳಬೇಕು ಮತ್ತು ಸಾರ್ವಜನಿಕ ಜೀವನದಲ್ಲಿ ತಮ್ಮ ಪಾಲುದಾರಿಕೆ ದೃಢವಾಗಿ ಇರಲೇಬೇಕು ಎಂಬ ಬಯಕೆಯ ಕಾರಣದಿಂದಾಗಿಯೇ ಅವರ ಸ್ಥಾನಮಾನವು ಎತ್ತರದ್ದಾಗಿ ಬದಲಾಗಿದೆ. ಜನಪ್ರಾತಿನಿಧ್ಯ ಪ್ರಜಾತಂತ್ರದ ಸಂಸ್ಥೆಗಳು ಹೆಚ್ಚುಹೆಚ್ಚು ದೃಢವಾಗುತ್ತಾ ಸಾಗಿದಂತೆಯೇ ಮಠಗಳ ರಾಜಕೀಯ ಶಕ್ತಿಯು ಕುಸಿಯುವ ಬದಲಿಗೆ ಹೆಚ್ಚುತ್ತಲೇ ಹೋಗಿದೆ. ವಿಶೇಷವಾಗಿ ಕಳೆದ ಎರಡು ದಶಕಗಳಲ್ಲಿ ಮಠಗಳ ಪ್ರಾಬಲ್ಯವು ಹೆಚ್ಚುತ್ತಲೇ ಹೋಗಿದೆ ಮತ್ತು 20ನೇ ಶತಮಾದನಲ್ಲಿ ಹೆಚ್ಚುತ್ತಲೇ ಹೋದ ಜಾತಿ ಸಂಘಗಳಿಗಿಂತಲೂ ಮಠಗಳೇ ಹೆಚ್ಚು ಪ್ರಾಬಲ್ಯವನ್ನು ತೋರುತ್ತಿವೆ. ಈ ಮಠಗಳೇ ಸಾರ್ವಜನಿಕವಾಗಿ ಹೆಚ್ಚು ಕಾಣಿಸಿಕೊಳ್ಳುತ್ತಿವೆ.

ನಿಜವಾಗಿಯೂ ಅತ್ಯಂತ ಸಣ್ಣ ಜಾತಿಗಳು ಕೂಡ ಈಗ ಮಠಗಳನ್ನು ಹೊಂದುವುದು ಕಡ್ಡಾಯ ಎನ್ನುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಮೀಸಲಾತಿ ವರ್ಗೀಕರಣ ಬದಲಾವಣೆಯ ಹೋರಾಟದಲ್ಲಿ ಕಂಡ ಹಾಗೆ ತಾವು ಹೆಚ್ಚು ಹೆಚ್ಚು ಕಾಣಿಸಿಕೊಳ್ಳಬೇಕು ಎಂದು ಮಠಗಳು ಬಯಸುತ್ತಿವೆ. ಸರ್ಕಾರವು ತಮ್ಮತ್ತ ಗಮನ ಹರಿಸುತ್ತಲೇ ಇರಬೇಕು ಎಂಬ ಆಕಾಂಕ್ಷೆಯನ್ನೂ ಹೊಂದಿವೆ.

ತಮ್ಮ ಅನುಯಾಯಿಗಳು ಕೈಗೊಳ್ಳುವ ನಿರ್ಧಾರಗಳ ಹಿಂದಿನ ಶಕ್ತಿಯಾಗುವಷ್ಟಕ್ಕೆ ತೃಪ್ತಿಪಟ್ಟುಕೊಳ್ಳುವ ಬದಲು ಮಠಾಧೀಶರೇ ನೇರವಾಗಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗುವುದಕ್ಕೆ ಇನ್ನು ಉಳಿದಿರುವುದು ಒಂದು ಸಣ್ಣ ಮೆಟ್ಟಿಲು ಮಾತ್ರ ಎಂಬುದನ್ನು ಈ ಎಲ್ಲವೂ ತೋರಿಸುತ್ತಿದೆಯೇ? ನೇರವಾಗಿ ಚುನಾವಣಾ ಕಣಕ್ಕೆ ಇಳಿಯುವ ಪ್ರಯತ್ನವನ್ನು ಕೆಲವು ಸಣ್ಣ ಮಠಗಳು ಮಾಡಿವೆ. ಮತಗಳನ್ನು ಪಡೆದುಕೊಂಡರೆ ಉಂಟಾಗುವ ಒಂದು ರೀತಿಯ ಉತ್ತರದಾಯಿತ್ವಕ್ಕಾಗಿ ತಾವು ಈಗಾಗಲೇ ಹೊಂದಿರುವ ನೈತಿಕ ಅಧಿಕಾರವನ್ನು ಕಳೆದುಕೊಳ್ಳಲು ಮಠಾಧೀಶರು ಮುಂದಾಗುವ ಸಾಧ್ಯತೆ ಕಡಿಮೆ.

ಹಾಗಾಗಿಯೇ, ಮಠಾಧೀಶರು ರಾಜಕೀಯ ಅಧಿಕಾರದ ಆಕರ್ಷಣೆಗೆ ಒಳಗಾದ ನಿದರ್ಶನ ಈವರೆಗೆ ಕಂಡು ಬಂದಿಲ್ಲ. ಆದರೆ, ಕಳೆದ ಒಂದೂವರೆ ಶತಮಾನದ ಅವಧಿಯಲ್ಲಿ ಮಠ ಮತ್ತು ಸರ್ಕಾರದ ನಡುವಣ ಸಂಬಂಧವು ಬದಲಾಗಿದೆ ಮತ್ತು ಹೊಸ ರೂಪ ಪಡೆದುಕೊಂಡಿದೆ. ಈಗಂತೂ, ಹೊಸ ರೀತಿಯ ಸಂಬಂಧವೊಂದು ಹರಳುಗಟ್ಟಲು ಆರಂಭವಾಗಿದೆ.

ಲೇಖಕಿ: ಇತಿಹಾಸ ಪ್ರಾಧ್ಯಾಪಕಿ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ದೆಹಲಿ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ನಾನಾ ಭಾವಗಳ ಚಿದ್ವಿಲಾಸ

ಮನುಷ್ಯರ ಭಾವನೆಗಳೆಲ್ಲಾ ಒಂದೇ ರೀತಿ ಇದ್ದರೆ, ಮನುಕುಲ ರಾಗ-ದ್ವೇಷಗಳಿಲ್ಲದೆ ಸಂತೋಷವಾಗಿ, ನೆಮ್ಮದಿಯಾಗಿ ಇರುತ್ತೆ. ಇದಕ್ಕಾಗಿ ಮನುಷ್ಯರ ಭಾವಗಳನ್ನೆಲ್ಲಾ ಒಂದೇ ರೀತಿ ತೂಗಲು ಧರ್ಮದ ಚೌಕಟ್ಟು ಹಾಕಿ, ಸಮಾಜದ ಕಟ್ಟಳೆಗಳನ್ನೂ ಮಾಡುತ್ತೇವೆ. ಆದರೆ ಮನುಷ್ಯರ ಭಾವಗಳು ಎಂದೂ ಸಮಾನವಾಗಿ ತೂಗುವುದಿಲ್ಲ. ವೈರುಧ್ಯ, ಏರಿಳಿತಗಳು ಘಟಿಸುತ್ತಲೇ ಇರುತ್ತೆ. ಏಕೆಂದರೆ, ಮನುಷ್ಯರ ಭಾವನೆಗಳನ್ನು ತೂಗುವುದೂ ಒಂದೇ, ಕಪ್ಪೆಗಳನ್ನು ಕಲೆಹಾಕಿ ತೂಗಿ ನೋಡುವುದೂ ಒಂದೇ. ಕಪ್ಪೆಯಂತೆಯೇ ಮನುಷ್ಯರ ಭಾವನೆಗಳು ಕ್ಷಣಕ್ಷಣಕ್ಕೂ ಕುಪ್ಪಳಿಸುತ್ತಿರುತ್ತವೆ. ಇದಕ್ಕೆ ಮೂಲ ಕಾರಣ ಭಗವಂತ ಮನುಷ್ಯನಿಗೆ ಕೊಟ್ಟ ಇಚ್ಛಾಶಕ್ತಿ. ಮನುಷ್ಯನ ಮನದೊಳಗೆ ಸೂಪರ್ ಪವರ್‌ನಂತಿರುವ ಇಚ್ಛಾಶಕ್ತಿ ಕ್ಷಣಕ್ಷಣಕ್ಕೂ ಚಂಚಲಿಸುತ್ತದೆ. ಹೀಗಾಗಿ ಮನುಷ್ಯರೆಲ್ಲರ ಭಾವನೆಗಳು ಒಂದೇ ರೀತಿ ಇರುವುದಿಲ್ಲ. ಒಂದು ಭಾವನೆಗೆ ಮತ್ತೊಂದು ಭಾವ ಸಂಘರ್ಷಿಸುತ್ತಲೇ ಇರುತ್ತದೆ. ಉದ್ದೇಶ ಪೂರ್ವಕವಾಗಿ-ಯೋ-ದುರುದ್ದೇಶವಾಗಿಯೋ ಭಗವಂತ ರೂಪಿಸಿದ ಚಿದ್ವಿಲಾಸದ ಸೂತ್ರಕ್ಕೆ ಮನುಷ್ಯನ ಮನಸ್ಸು ಚಂಚಲಗೊಳ್ಳುತ್ತಲೇ ಇರುತ್ತದೆ.

ಭಿನ್ನರೂಪಗಳು ಇರುವಂತೆಯೇ, ಭಿನ್ನಭಾವಗಳು ಮನುಷ್ಯರಲ್ಲಿವೆ. ಒಂದೇ ರೀತಿ ಇದ್ದರೆ ಯಾವುದೇ ಸ್ವಾರಸ್ಯವಿರುವುದಿಲ್ಲ ಅಂತ ಮನಸ್ಸು ಸಹ ದೇಹದಂತೆ ನಿತ್ಯ ರಂಜನೆಯ ರಸದೂಟವನ್ನು ಬಯಸುತ್ತದೆ. ಇದಕ್ಕಾಗಿ ಭಗವಂತ ಮನುಷ್ಯನ ದೇಹ ಮತ್ತು ಮನಸ್ಸು ಸಮತೋಲಿತ ಹಾಗೂ ಸಂತುಲಿತವಾಗಿರಲು ಜಿಹ್ವಾಚಾಪಲ್ಯ ಮತ್ತು ಚಿತ್ತಚಾಪಲ್ಯವನ್ನು ಕರುಣಿಸಿದ್ದಾನೆ. ನಾಲಿಗೆ ಚಪಲದಿಂದ ದೇಹಕ್ಕೆ ನಾನಾ ರೀತಿಯ ಪೌಷ್ಟಿಕ ಆಹಾರ, ಅನಾರೋಗ್ಯಕರ ಆಹಾರ ಸೇರುವಂತೆ ಮನಸ್ಸಿನ ಚಪಲದಿಂದ ಬುದ್ಧಿಗೆ ನಾನಾ ರೀತಿಯ ಸದ್ಭಾವನೆ, ದುರ್ಭಾವನೆಗಳು ಸೇರುತ್ತಿರುತ್ತವೆ. ಇದರಿಂದ ಲೋಕದಲ್ಲಿ ನಾನಾ ರೂಪಗಳು, ನಾನಾ ಭಾವಗಳು ರೂಪುಗೊಳ್ಳುತ್ತಿರುತ್ತವೆ. ದೇಹಾರೋಗ್ಯಕ್ಕೆ ಯಾವುದು ಒಳ್ಳೆಯ ಆಹಾರ ಅಂತ ಯೋಚಿಸಿ ತಿನ್ನುತ್ತೇವೋ, ಹಾಗೇ ಮನಸ್ಸಿನ ಆರೋಗ್ಯಕ್ಕೆ ಯಾವುದು ಒಳ್ಳೆಯ ಆಲೋಚನೆ ಅಂತ ಯೋಚಿಸಿ, ಯೋಗ್ಯವಾದುದನ್ನು ಆಯ್ಕೆ ಮಾಡಿಕೊಳ್ಳಬೇಕು. ಇದಕ್ಕಾಗಿ ಒಳ್ಳೆಯದನ್ನು ಆಯ್ದುಕೊಳ್ಳುವ ತಿಳಿವಳಿಕೆ ನಮಗಿರಬೇಕು. ಅಂಥ ತಿಳಿವಳಿಕೆಯನ್ನು ನೀಡುವುದು ಧರ್ಮ. ಧರ್ಮವನ್ನು ಸರಿಯಾಗಿ ತಿಳಿದುಕೊಂಡರೆ, ಕರ್ಮ ಉತ್ತಮವಾಗಿರುತ್ತೆ. ಕರ್ಮ ಉತ್ತಮವಾಗಿದ್ದರೆ ಮನಸ್ಸು ಪ್ರಫುಲ್ಲವಾಗಿರುತ್ತದೆ. ಮನಸ್ಸು ಚೆನ್ನಾಗಿದ್ದರೆ ಬದುಕು ನೆಮ್ಮದಿಯಾಗಿರುತ್ತದೆ.

ಮನಸ್ಸಿನಂತೆ ಮಾನವ ರೂಪುಗೊಳ್ಳುತ್ತಾನೆ. ಮಾನವನಿಗೆ ಮನಸ್ಸು ಎಷ್ಟು ನಿಕಟವರ್ತಿ ಅನ್ನುವುದನ್ನ 'ಮನ' ಮತ್ತು 'ಮನು' ಎಂಬ ಪದಗಳೇ ಸೂಚಿಸುತ್ತವೆ. 'ಮನ'ದಲ್ಲಿನ 'ಅ'ಕಾರ, 'ಮನು'ವಿನಲ್ಲಿರುವ 'ಉ'ಕಾರಗಳಷ್ಟೆ ಭಿನ್ನವಾಗಿವೆ. ಆದ್ದರಿಂದ ಮನುಷ್ಯನ ನಿಜವಾದ ರೂಪವೇ ಮನಸ್ಸು. ಒಳ್ಳೆಯ ಮನಸ್ಸಿನಿಂದ ಒಳ್ಳೆಯ ರೂಪ ಮೂಡಿಸಿಕೊಳ್ಳುವುದು ಮಾನವರ ಇಚ್ಛಾಶಕ್ತಿ-ಯಲ್ಲಿದೆ. ಒಳ್ಳೆಯ ಭಾವನೆಗಳು ಮನಸ್ಸಿನಲ್ಲಿ ಮೂಡಿದರೆ ಒಳ್ಳೆಯ ಭಾವಗಳು ಮುಖದಲ್ಲಿ ಮೂಡುತ್ತವೆ. ಕೆಟ್ಟ ಭಾವನೆಗಳಿದ್ದರೆ ಕೆಟ್ಟ ಭಾವ ಪ್ರತಿಫಲನ-ವಾಗುತ್ತೆ. ನಮ್ಮ ಮನಸ್ಸಿನ ಕನ್ನಡಿಯಂತಿರುವ ಮುಖದಲ್ಲಿ, ಮನದೊಳಗೆ ನಡೆಯುವ ಎಲ್ಲಾ ತಾಕಲಾಟಗಳೂ ಪ್ರತಿಫಲಿತವಾಗುತ್ತಿರುತ್ತವೆ. ಚಿದ್ಭವಲೋ-ಕದಲ್ಲಿ ಉದ್ಭವಿಸುವ ವಿಚಾರಗಳು ವಿಕಾರರೂಪ ತಾಳದಂತೆ ಎಚ್ಚರವಹಿಸುವ ಜಾಗೃತಪ್ರಜ್ಞೆ ನಮ್ಮಲ್ಲಿರಬೇಕಷ್ಟೆ. ಅಂಥ ಜಾಗೃತಪ್ರಜ್ಞೆಯನ್ನು ಕೊಡುವುದು ಧರ್ಮ. ಧರ್ಮ ಮರೆತವ ಉತ್ತಮ ಕರ್ಮ ಮಾಡಲಾರ.

ಮನಸ್ಸೆಂಬ ಗಂಗೋತ್ರಿಯಲ್ಲಿ ನಾನಾ ಭಾವಗಳು ಹುಟ್ಟುತ್ತವೆ. ಇದರಲ್ಲಿ ಒಳ್ಳೆಯ ಭಾವಗಳನ್ನು ಆಯ್ದುಕೊಳ್ಳುವ ಯುಕ್ತಿ ನಮಗಿರಬೇಕು. ನಾವು ಒಳ್ಳೆಯವರಾಗುವುದು ಅಥವಾ ಕೆಟ್ಟವರಾಗುವುದು ನಮ್ಮ ಇಚ್ಛಾಶಕ್ತಿಯಲ್ಲಿ-ದೆ. ಮನಸ್ಸಿಗೆ ಸ್ನೇಹ-ಪ್ರೀತಿ-ವಿಶ್ವಾಸ ಗಳಿಸುವ ಇಚ್ಛಾಶಕ್ತಿಯನ್ನು ತುಂಬಿದರೆ, ಒಳ್ಳೆಯ ಭಾವ ಮೂಡುತ್ತದೆ. ದ್ವೇಷ-ಅಸೂಯೆ ತುಂಬಿದರೆ ಕೆಟ್ಟ ಭಾವಗಳು ವ್ಯಕ್ತವಾಗುತ್ತವೆ. ಇದಕ್ಕಾಗಿ ನಾವು ಮನದಲ್ಲಿ ಸದಾ ಸದ್ಭಾವನೆ ತುಂಬಿ 'ಸಚ್ಚಿ-ದಾನಂದ'ಭಾವವನ್ನು ಮೂಡಿಸಬೇಕು.

ಕರ್ತವ್ಯ ನಿರ್ವಹಿಸಿದ ಮಠಾಧೀಶರ ಮಹಾಸಭಾ

• ಡಾ. ಶಿವಮೂರ್ತಿ ಮುರುಘಾ ಶರಣರು

ಎಲ್ಲ ಕ್ಷೇತ್ರಗಳಲ್ಲೂ ಪ್ರತೀಕಾರ, ಅವಮಾನ, ಅನುಮಾನ, ಹಗರಣ, ಸ್ವಜನಪಕ್ಷಪಾತ, ಆಕ್ರಮಣ, ಅಕ್ರಮ, ಹತಾಶೆ, ನಿರಾಸೆ ಇದ್ದದ್ದೇ.

ಆದರೆ, ರಾಜಕೀಯ ಕ್ಷೇತ್ರದಲ್ಲಿ ಸುಳ್ಳು ಆಶ್ವಾಸನೆಗಳು, ಅಗ್ಗದ ಯೋಜನೆಗಳು, ಅಕ್ರಮ ಆಸ್ತಿ ಮತ್ತು ಹಣ ಸಂಪಾದನೆ ಮಾಮೂಲಿಯಾಗುತ್ತಿವೆ. ಚುನಾವಣೆಗಳು ದುಬಾರಿ ಆಗುತ್ತಿವೆ. ಜನಪ್ರತಿನಿಧಿಗಳು ಜನರನ್ನು ಭ್ರಷ್ಟರನ್ನಾಗಿಸಿದರೋ? ಜನರೇ ಜನಪ್ರತಿನಿಧಿಗಳನ್ನು ಭ್ರಷ್ಟಗೊಳಿಸಿದರೋ ಎಂಬುದು ಬೀಜ-ವೃಕ್ಷ ನ್ಯಾಯದಂತೆ. ಅದಕ್ಕಾಗಿ ಜನಪ್ರತಿನಿಧಿಗಳು ಸಾರ್ವಜನಿಕರ ಕೆಲಸ ಮಾಡಿಕೊಡಲು ಲಂಚ ಸ್ವೀಕರಿಸುವುದು ಸಹಜವಾಗುತ್ತಿದ್ದು, ವ್ಯವಸ್ಥೆಯು ಭ್ರಷ್ಟಗೊಳ್ಳುತ್ತಿದೆ.

ಭಾರತದ ಮಟ್ಟಿಗೆ ಗಾಂಧೀಜಿ, ಜವಾಹರಲಾಲ್ ನೆಹರೂ, ಸರದಾರ್ ಪಟೇಲ್, ಲಾಲ್‌ಬಹಾದ್ದೂರ್ ಶಾಸ್ತ್ರಿ, ಬಿ.ಆರ್.ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ ಮೊದಲಾದವರು ಮೌಲ್ಯಾಧಾರಿತ ರಾಜಕೀಯಕ್ಕೆ ಒತ್ತುಕೊಟ್ಟರು. ಅವರು ನೀಡಿದಂತಹ ಮೌಲ್ಯಗಳೇ ಇಂದು ಉಸಿರಾಡುತ್ತಿವೆ. ಅದನ್ನು ಬಿಟ್ಟರೆ ಸಂತರು, ಶರಣರು, ಸತ್ಪುರುಷರು ವ್ಯವಸ್ಥೆಯನ್ನು ಸುಧಾರಿಸಲು ನಡೆಸಿದ ಪ್ರಯತ್ನಗಳು ಇತಿಹಾಸವಾಗಿ ಉಳಿದಿದ್ದು, ಜನಜೀವನದಲ್ಲಿ ಅನುರಣನಗೊಳ್ಳುತ್ತಿವೆ.

ಈ ಹಂತಗಳನ್ನು ಹೊರತುಪಡಿಸಿದರೆ, ದಿನಬೆಳಗಾದರೆ ಹಗರಣಗಳು. ಹಗರಣರಹಿತ ರಾಜಕಾರಣ ಸಾಧ್ಯವಿಲ್ಲವೆಂಬ ವಾತಾವರಣ ಸೃಷ್ಟಿ ಆಗಿದೆ. ರಾಜಕಾರಣ ಅಂದರೆ ಹಗರಣ; ಹಗರಣವೆಂದರೆ ರಾಜಕಾರಣ. ರಾಜಕಾರಣದ ಉದ್ದೇಶವೇ ಲೋಕಕಲ್ಯಾಣ. ಲೋಕಕಲ್ಯಾಣ ನೇಪಥ್ಯಕ್ಕೆ ಸರಿದಾಗ ಹಗರಣಗಳು ಮುನ್ನೆಲೆಗೆ ಬಂದು ನಿಲ್ಲುತ್ತವೆ.

ಆದರೆ, ವ್ಯವಸ್ಥೆಯನ್ನು ಅಲ್ಲಗಳೆಯುವುದಕ್ಕಿಂತ ಅದನ್ನು ಸುಧಾರಿಸುವ ಪ್ರಯತ್ನಗಳು ನಡೆಯಬೇಕಿದೆ.

ಗೌತಮ ರಾಜಕುವರನಾಗಿದ್ದು, ಐಹಿಕ ಭೋಗದಿಂದ ಹೊರಬಂದು, ಬುದ್ಧನಾಗಿ ಪ್ರತಿಬದ್ಧನಾಗಿ ಮಾನವೀಯ ಗುಣಗಳನ್ನು ಬೋಧಿಸುತ್ತಾನೆ. ಮಹಾವೀರನು ಸರ್ವವನ್ನೂ ತೊರೆದು ಮಹಾತ್ಯಾಗಿ ಅನಿಸಿಕೊಳ್ಳುತ್ತಾನೆ. ಬಸವಣ್ಣ ಮತ್ತಿತರ ಶರಣರು ಸಂಸಾರದಲ್ಲಿದ್ದುಕೊಂಡು ಸಾತ್ವಿಕ ಜೀವನ ನಡೆಸುತ್ತ, ಸಮಾಜವನ್ನು ಸಂಸ್ಕಾರಗೊಳಿಸುತ್ತಾರೆ. ಈ ಕೆಳಗಿನಂತೆ ತಮ್ಮ ಬದ್ಧತೆಯನ್ನು ತೋರಿಸುತ್ತಾರೆ.

ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ
ನಡೆಯೊಳಗೆ ನುಡಿಯ ಪೂರೈಸುವೆ
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು ಕೂಡಲಸಂಗಮದೇವಾ

ಭಂಡಾರದ ಹಣವನ್ನು ಲೋಕಕಲ್ಯಾಣಕ್ಕೆ ಬಳಸುತ್ತ ಹೋದಾಗ, ಬಸವಣ್ಣ ಜನರಿಗೆ ಹತ್ತಿರ ಆಗುತ್ತಾನೆ. ಜನಪ್ರಿಯತೆ ಬೆಳೆಯುತ್ತ ಹೋಗುತ್ತದೆ. ಇದನ್ನು ಸಹಿಸಲಾರದ ಕೊಂಡಿ ಮಂಚಣ್ಣಾದಿಗಳು, ರಾಜ ಬಿಜ್ಜಳ ಮತ್ತು ಬಸವಣ್ಣನ ನಡುವೆ ದ್ವೇಷ ಹುಟ್ಟುವಂತೆ ನೋಡಿಕೊಳ್ಳುತ್ತಾರೆ. ಸಂವೇದನಾಶೀಲ ಬಸವಣ್ಣ, ಇದರಿಂದ ಅಸಮಾಧಾನಗೊಂಡು ಪ್ರಧಾನಿ ಪಟ್ಟವನ್ನು ತ್ಯಜಿಸುತ್ತಾರೆ.

ರಾಜಕಾರಣದಲ್ಲಿದ್ದು ಹಿಂಸೆಯನ್ನು ತೊರೆದು ಇತಿಹಾಸವಾಗಿ ಉಳಿದಂತಹ ಅಶೋಕ ಚಕ್ರವರ್ತಿ ಉದಾಹರಣೆಯಾದರೆ; ಬುದ್ಧ-ಬಸವರು ಎಲ್ಲ ಕಾಲಕ್ಕೂ ಆದರ್ಶರಾಗಿ ನಿಲ್ಲುತ್ತಾರೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮೊದಲಾದವರು ರಾಜಕಾರಣದಲ್ಲಿ ಧರ್ಮವನ್ನು ಬೆರೆಸಿದರು. ರಾಜಕಾರಣಕ್ಕೆ ತಾತ್ವಿಕ ತಳಹದಿ ಬೇಕೆಂದರು. ರಾಜಕಾರಣವನ್ನು ತತ್ವ ಪ್ರಸಾರಕ್ಕೆ ಬಳಸಿಕೊಂಡರು. ಸೈದ್ಧಾಂತಿಕ ನಿಲುವುಗಳನ್ನು ಪ್ರತಿಪಾದಿಸಿದವರು. ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ಪ್ರಧಾನಮಂತ್ರಿ ಅಥವಾ ಅರ್ಥಸಚಿವರಾಗಿದ್ದರೆಂಬುದು ಇತಿಹಾಸ. ರಾಜಮನೆತನಗಳಿಗೆ ಗುರುಮನೆಗಳು ಮಾರ್ಗದರ್ಶನ ನೀಡಿದಂತಹ ಉದಾಹರಣೆಗಳಿವೆ.

ಮುರುಘಾ ಪರಂಪರೆಯ ಸಂಸ್ಥಾಪಕರಾದ ಮುರುಗಿ ಶಾಂತವೀರ ಸ್ವಾಮಿಗಳು ಅಂದು ದೊರೆ ಭರಮಣ್ಣ ನಾಯಕನಿಗೆ ಆಶೀರ್ವಾದ ಮತ್ತು ಮಾರ್ಗದರ್ಶನ ಮಾಡಿದ ಸಂದರ್ಭವದು. ಆಶೀರ್ವಾದ ಪಡೆದ ಭರಮಣ್ಣ, ಮುಂದೆ ದೊರೆ ಆಗುತ್ತಾನೆ. ಸ್ವಾಮಿಗಳನ್ನು ಆಸ್ಥಾನಕ್ಕೆ ಬರಮಾಡಿಕೊಂಡ ಭರಮಣ್ಣ, 'ನನ್ನದು ನಿಂತ ಪಟ್ಟ, ನಿಮ್ಮದು ಕುಳಿತ ಪಟ್ಟ' ಅನ್ನುತ್ತಾನೆ. ಆಗ ಗುರುಗಳು, 'ಅರಿತರೆ ಆರು ಪಟ್ಟ; ಮರೆತರೆ ಮುಗಿದ ಪಟ್ಟ' ಎನ್ನುತ್ತಾರೆ. ಹೀಗೆ, ಗುರುಮನೆಗಳು ಅರಮನೆಗಳಿಗೆ ಮಾರ್ಗದರ್ಶನ ಮಾಡುತ್ತ ಬಂದಿವೆ.

ಛತ್ರಪತಿ ಶಿವಾಜಿ ಅವರಿಗೂ ಅದೇ ಶ್ರೀಗಳಿಂದ ಆಶೀರ್ವಾದ ಸಿಕ್ಕಿತ್ತು. 8-10 ರಾಜಮನೆತನಗಳು ನಡೆದುಕೊಳ್ಳುತ್ತ ಭಕ್ತಿ-ಗೌರವ ಸಲ್ಲಿಸಿದಂತಹ ಅಪೂರ್ವ ಪರಂಪರೆ ಶ್ರೀಮಠಕ್ಕಿದೆ.

ಹಾವೇರಿಯಲ್ಲಿ 1934ರಲ್ಲಿ ಜಯದೇವ ಶ್ರೀಗಳು, ಭೇಟಿಯಾದ ಗಾಂಧೀಜಿಯವರೊಟ್ಟಿಗೆ ಅಸ್ಪೃಶ್ಯತಾ ನಿವಾರಣೆ ಮತ್ತು ಖಾದಿ ಪ್ರಚಾರ ಕುರಿತು ಚರ್ಚಿಸಿದ್ದಾರೆ. ಅಥಣಿ ಶಿವಯೋಗಿಗಳ ದರ್ಶನ ಪಡೆದ ಬಾಲಗಂಗಾಧರ ತಿಲಕರು, ಭಾರತ ಸ್ವಾತಂತ್ರ್ಯ ಪಡೆಯುವ ಬಗ್ಗೆ ಕೇಳಿದಾಗ ಅವರು 'ಭಾರತ ಸ್ವಾತಂತ್ರ್ಯ ಪಡೆಯುತ್ತದೆ; ಅದನ್ನು ನೋಡಲು ನಾನೂ ಇರುವುದಿಲ್ಲ ನೀವೂ ಇರುವುದಿಲ್ಲ' ಅನ್ನುತ್ತಾರೆ. ಭಾರತ ಸ್ವಾತಂತ್ರ್ಯ ಪಡೆಯುತ್ತದೆ. ಆಗ ಇಬ್ಬರೂ ಇರುವುದಿಲ್ಲ. ಇಂಥ ಉದಾಹರಣೆಗಳು ಬೇರೆ ಮಠಗಳಲ್ಲಿಯೂ ಘಟಿಸಿವೆ.



ಸರ್ವಧರ್ಮ ಧಾರ್ಮಿಕ ನೇತಾರರಲ್ಲಿ ಕೆಲವರು ನೇರವಾಗಿ, ಇನ್ನು ಕೆಲವರು ಅಪ್ರತ್ಯಕ್ಷವಾಗಿ ತಮಗೆ ಬೇಕಾದ ಪಕ್ಷದೊಂದಿಗೆ ಅಥವಾ ವ್ಯಕ್ತಿಯೊಂದಿಗೆ ಗುರುತಿಸಿಕೊಳ್ಳುತ್ತಾರೆ. ಯಾವ ಮಠ ಮತ್ತು ಧಾರ್ಮಿಕ ಕೇಂದ್ರವೂ ರಾಜಕಾರಣದಿಂದ ಹೊರತಾಗಿಲ್ಲ ಎನ್ನಬಹುದು

ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಪದಚ್ಯುತಗೊಳಿಸಲಾಗುತ್ತದೆಂಬ ಹಿನ್ನೆಲೆಯಲ್ಲಿ ಸರ್ವಧರ್ಮಕ್ಕೆ ಸೇರಿದ 350-400 ಮಠಾಧೀಶರು ಪ್ರತಿಭಟಿಸಿದರು. ಒಂದು ದೊಡ್ಡ ಸಮುದಾಯವನ್ನು ಎದುರು ಹಾಕಿಕೊಳ್ಳಬಾರದೆಂಬ ಸಂದೇಶ ರವಾನೆ ಆಯಿತು. ಲಿಂಗಾಯತ ಸಮುದಾಯಕ್ಕೆ ಸೇರಿದ ಬಸವರಾಜ ಬೊಮ್ಮಾಯಿ ಅವರನ್ನು ಹೈಕಮಾಂಡ್ ಮುಖ್ಯಮಂತ್ರಿ ಮಾಡುವುದರ ಮೂಲಕ, ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗಿದೆಯೆಂಬ ಅಭಿಪ್ರಾಯ ವ್ಯಕ್ತವಾಯಿತು.

ಬೊಮ್ಮಾಯಿ ಅವರು ಬಿ.ಎಸ್. ಯಡಿಯೂರಪ್ಪ ಅವರ ಆಪ್ತರಲ್ಲಿ ಒಬ್ಬರಾಗಿದ್ದು, ಅವರ ಯೋಜನೆಗಳನ್ನೆಲ್ಲ ಕಾರ್ಯಗತಗೊಳಿಸುವುದಾಗಿ ಹೇಳಿದ್ದಾರೆ. ಈ ನಿರ್ಧಾರದಲ್ಲಿ ಆರ್‌ಎಸ್‌ಎಸ್ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಕಮಲ ಪಕ್ಷವು ಕೇಸರಿ ಪಕ್ಷ ಆಗಿರುವುದರಿಂದ ಮಠಾಧೀಶರ ಮಾತಿಗೆ ಮನ್ನಣೆ ದೊರೆಯಿತೆಂದು ಹೇಳಲಾಗುತ್ತದೆ.

ಲಿಂಗಾಯತೇತರರನ್ನು ಮುಖ್ಯಮಂತ್ರಿ ಮಾಡುವುದರಿಂದ ಗಣನೀಯವಾಗಿ ಹಿನ್ನಡೆ ಆಗುತ್ತದೆಂಬ ಲೆಕ್ಕಾಚಾರವು ಇಲ್ಲಿ ಕೆಲಸ ಮಾಡಿರಲೂ ಸಾಕು.

ಧರ್ಮದಲ್ಲಿ ರಾಜಕಾರಣ ಬೆರೆಯಬಾರದೆಂಬುದು ಸರಿಯಷ್ಟೆ. ಧಾರ್ಮಿಕ ಕೇಂದ್ರಗಳು ಜಾತ್ಯತೀತ ಮತ್ತು ಪಕ್ಷಾತೀತ ನಿಲುವನ್ನು ಹೊಂದಿರಬೇಕಾಗುತ್ತದೆ. ಈ ನಿಲುವಿನಿಂದಲೇ ಅಂದು ಅಹಿಂದ ಸಂಘಟನೆಯನ್ನು ನಾನು ಬೆಂಬಲಿಸಿದೆ. ಸರ್ವಜನಾಂಗದ ಮಠಾಧೀಶರು ಅಭಿವೃದ್ಧಿಪರ ನಿಲುವುಗಳನ್ನು ಸಾಂಕೇತಿಕವಾಗಿ ಬೆಂಬಲಿಸಿರಬಹುದು.

ಧಾರ್ಮಿಕ ಮುಖಂಡರಲ್ಲಿ ಕೆಲವರು ಈಗಾಗಲೇ ಚುನಾವಣೆಗೆ ಸ್ಪರ್ಧಿಸಿ ಗೆಲುವು ಸಂಪಾದಿಸಿ ಸಂಸತ್ತಿಗೂ ಹೋಗಿದ್ದಾರೆ. ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ್ದಾರೆ. ಅವರ್ಯಾರೂ ಕಾವಿಬಟ್ಟೆ ತ್ಯಜಿಸಿಲ್ಲ. ಧರ್ಮ ಮತ್ತು ರಾಜಕಾರಣದ ನಡುವೆ ಅಂತರ ಇರಬೇಕು. ಇದರಲ್ಲಿ ಎರಡು ಮಾತಿಲ್ಲ. ಧರ್ಮ ಅರ್ಥಾತ್ ಮೌಲ್ಯಕೇಂದ್ರಿತ ರಾಜಕಾರಣ ಅಲಭ್ಯವಾದಾಗ, ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನಗಳು ನಡೆಯಬೇಕಾಗುತ್ತದೆ. ಹೊರಗಡೆ ಇದ್ದುಕೊಂಡು ಸುಧಾರಿಸಬೇಕೆನ್ನುವ ಮತ್ತು ಒಳಗಡೆ ಇದ್ದುಕೊಂಡು ಸುಧಾರಿಸಬೇಕೆನ್ನುವ ಎರಡು ವಾದ ಚಾಲ್ತಿಯಲ್ಲಿವೆ.


ಇನ್ನು, ಮಠಗಳು ರಾಜಕಾರಣ ಮಾಡಬಾರದೆಂಬ ವಾದ. ಮಠಗಳನ್ನು ಮತಗಳ ಬ್ಯಾಂಕ್ ಆಗಿ ಪರಿವರ್ತಿಸಿದವರಾರು? ಕೆಲ ರಾಜಕಾರಣಿಗಳಿಂದ ಚುನಾವಣಾ ವೇಳೆಯಲ್ಲಿ ಮಠಗಳನ್ನು ಓಲೈಸುವ ಪದ್ಧತಿ ಶುರು ಆಯಿತು. ಬಹುತೇಕ ರಾಜಕಾರಣಿಗಳು ಒಂದಿಲ್ಲೊಂದು ಮಠಕ್ಕೆ ನಡೆದುಕೊಳ್ಳುತ್ತಾರೆ. ಧರ್ಮವನ್ನು ಬಿಟ್ಟು ರಾಜಕಾರಣ ಸಾಧ್ಯವಿಲ್ಲವೆಂಬ ವಾತಾವರಣ ಸೃಷ್ಟಿ ಆಗಿದೆ. ಭಾಗಶಃ ಸರ್ವಧರ್ಮ ಧಾರ್ಮಿಕ ನೇತಾರರಲ್ಲಿ ಕೆಲವರು ನೇರವಾಗಿ, ಇನ್ನು ಕೆಲವರು ಅಪ್ರತ್ಯಕ್ಷವಾಗಿ ತಮಗೆ ಬೇಕಾದ ಪಕ್ಷದೊಂದಿಗೆ ಅಥವಾ ವ್ಯಕ್ತಿಯೊಂದಿಗೆ ಗುರುತಿಸಿಕೊಳ್ಳುತ್ತಾರೆ. ಯಾವ ಮಠ ಮತ್ತು ಧಾರ್ಮಿಕ ಕೇಂದ್ರವೂ ರಾಜಕಾರಣದಿಂದ ಹೊರತಾಗಿಲ್ಲ ಎನ್ನಬಹುದು. ನೋವಿನಲ್ಲಿರುವಾಗ ಸಾಂತ್ವನ ನೀಡುವುದು ಸಂತ-ಶರಣರ ಕರ್ತವ್ಯ. ಇದನ್ನು ಮಠಾಧೀಶರ ಮಹಾಸಭಾ ನಿರ್ವಹಿಸಿದೆ.

ಮಠಾಧೀಶರು ರಾಜಕಾರಣದ ಶುದ್ಧೀಕರಣಕ್ಕೂ ಮುಂದಾಗಬೇಕು. ತತ್ತ್ವ ರಾಜಕಾರಣ ಎಂದಿಗೂ ಉಪಾಯ; ಹಿತಾಸಕ್ತಿ ರಾಜಕಾರಣ ಎಂದೆಂದಿಗೂ ಅಪಾಯ. ಜಾತಿ ರಾಜಕಾರಣ ದೂರಾಗಬೇಕು; ಸಮಗ್ರತೆಯ ರಾಜಕಾರಣ ನಿರಂತರವಾಗಬೇಕು.

ಲೇಖಕ: ಜಗದ್ಗುರು, ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ

ಪದಬಂಧ 4674

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
3.ಕಿಡಿ ಹಿಡಿದಿರುವ ತುಂಟ (4)
5.ಯಜಮಾನನ ಹುಟ್ಟುಗುಣ! (4)
6.ತಿರುಗಿದ್ದಕ್ಕೇ ಈ ಕಪಾಳಮೋಕ್ಷವೇ? (4)
8.ಈ ಪರಿ ಹರಡಿರುವ ಸುವಾಸನೆ (4)
12.ಕಾಡಿನ ಹೂವಿದು (4)
14.ಯಾವುದೇ ಆಯುಧವಿಲ್ಲದಿರುವಿಕೆ (4)
15.ಕಣ್ಮರೆಯಾಗುವುದು (4)
16.ರಮಣೀಯವಾದುದು ಇಲ್ಲಿದೆ (4)

ಮೇಲಿಂದ ಕೆಳಕ್ಕೆ
1.ಉದ್ದವಾದ ತೋಳುಳ್ಳವನು (5)
2.ಮುಕ್ತಾಯವನ್ನು ಹೀಗೆನ್ನಿ (4)
3. ಕುಳ ನೀಡಿದ ತೊಂದರೆಯಿದು (4)
4. ತೂಗು ಯಂತ್ರವಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
7.ಬಟ್ಟೆಯ ಅಗಲ (2)
9.ಮನದೊಳಗಿರುವ ಕಾಮ (3)
10.ಮಂದಿಗೆಲ್ಲ ಒಡೆಯ ಇಲ್ಲಿ ತಿರುಗಿ ನಿಂತಿದ್ದಾನೆ (5)
11. ಒಪ್ಪಂದವಿಲ್ಲಿ ತಿರುವುಮುರುವಾಗಿದೆ (2)
12.ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
13.ವಂಶ ಇಲ್ಲಿದೆ (4)
14. ಯಮನಿದ್ದಾಗಿನ ಸೂತ್ರ (3)

4673ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಪಾದನೆ
3.ವ್ಯರ್ಥಾಲಾಪ 5.ಸಿತಾರ
7.ಡಪ್ಪು 10.ವರ್ಜ್ಯ
11.ಜನಿವಾರ 13.ಸಂತತಿ
16.ಅನುಮತಿ 17.ಅತಿರೇಕ

ಮೇಲಿಂದ ಕೆಳಕ್ಕೆ:
1.ಆಲಸಿ 2.ದಸರ
3.ವ್ಯವಹಾರ 4.ಪಕ್ಷ
6.ತಾರಾಪುಂಜ 7.ಪಗಾರ
8.ನವನೀತ 12.ವಾಚಸ್ಪತಿ
13.ಸಂಗತಿ 14.ತಿರುಕ
15.ಶ್ವಅ

ಸುಡೊಕು 5060

	7			3		1		6
4		9						
	1		7		2		5	4
		3	5		6	4		
	4			2			6	7
		5	1		7	3		
	8		6		5	2		3
2		6						
	3	4		7		6	1	

5059 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಜುಲೈ 31, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ಸಪ್ತಮೀ ಗಂ. 0-9 (ಬೆ. 6-16) ಶನಿವಾರ ನಿತ್ಯ ನಕ್ಷತ ಅಶ್ವಿನೀ ಗಂ. 29-35 (ಸಾ. 6-02) ಶೂಲ ನಾಮ ಯೋಗ ಗಂ. 42-34 ಬವ ಕರಣ ಗಂ. 0-9 ವಿಷ ಗಂ. 19-16 ಪುನರ್ವಿಷ ಗಂ. 55-52 ಅಮೃತ ಗಂ. 10-30 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00: ಸೂರ್ಯೋದಯ: 6-09 ಸೂರ್ಯಾಸ್ತ: 6-43 ಅದೃಷ್ಟ ಸಂಖ್ಯೆ 6 8

ಮೇಷ: ಬ್ಯಾಂಕ್, ಸಹಕಾರ ಕ್ಷೇತ್ರಗಳಲ್ಲಿ ದುಡಿಯುವವರಿಗೆ ಉತ್ತಮ ಸಹಕಾರ ದೊರಕಲಿದೆ. ಕಾರ್ಯಕ್ಷೇತ್ರದಲ್ಲಿ ಅನಿರೀಕ್ಷಿತ ಪ್ರಶಂಸೆಗಳು ನಿಮ್ಮ ಪಾಲಿಗೆ ಬರಲಿದೆ. ಮಹಿಳೆಯರ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಯದ ಸಾಧ್ಯತೆ.

ವೃಷಭ: ಬ್ಯಾಂಕಿಂಗ್ ಹಾಗೂ ಹಣಕಾಸು ವ್ಯವಹಾರಗಳಲ್ಲಿ ತೊಡಗಿಕೊಂಡವ-ರಿಗೆ ನಿರೀಕ್ಷಿತವಾದ ಕಾರ್ಯಸಿದ್ಧಿಯಾಗಿ ಲಾಭ ದೊರಕಲಿದೆ. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರಕಲಿದೆ.

ಮಿಥುನ: ವ್ಯಾಪಾರದಲ್ಲಿ ಲಾಭವನ್ನು ಹೊಂದಲಿದ್ದೀರಿ. ಮನಸ್ಸಿಗೆ ನೆಮ್ಮದಿಯ ದಿನವಾಗಿ ಪರಿಣಮಿಸಲಿದೆ. ಕೆಲಸ ಕಾರ್ಯಗಳಲ್ಲಿ ಮುನ್ನಡೆ ಹಾಗೂ ಯಶಸ್ಸು ನಿಮ್ಮದಾಗಲಿದೆ.

ಕರ್ಕಾಟಕ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷಿತ ಕೆಲಸಗಳು ಉತ್ತಮ ಫಲ ನೀಡುವುದರೊಂದಿಗೆ ಹಣಕಾಸಿನ ಅನುಕೂಲತೆಗಳು ದೊರಕಲಿದೆ. ಶುಭದ ಆಶಾಕಿರಣ ಮೂಡಿಬರಲಿದೆ.

ಸಿಂಹ: ನಿಮ್ಮ ಪಾಲಿನ ಕೆಲಸ ಕಾರ್ಯಗಳು ಸರಾಗವಾಗಿ ನಿರ್ವಹಣೆಯಾಗ-ಲಿದೆ. ದೂರದೂರುಗಳಿಗೆ ಪ್ರಯಾಣ ಸಾಧ್ಯತೆ. ವಾಹನ ಚಾಲನೆಯಲ್ಲಿ ಎಚ್ಚರ ವಹಿಸಬೇಕಾಗಿದೆ. ಮಕ್ಕಳ ನಡವಳಿಕೆಗಳ ಬಗ್ಗೆ ಗಮನ ಅಗತ್ಯವೆನಿಸುತ್ತಿದೆ.

ಕನ್ಯಾ: ವೈವಾಹಿಕ ವ್ಯವಹಾರಗಳಲ್ಲಿ ಬಂಧು ಮನ್ನಣೆದೊರಕಲಿದೆ. ವೈಯಕ್ತಿಕ ಬದುಕಿನಲ್ಲಿ ಹಿತಕರ ಬದಲಾವಣೆ ಕಂಡುಬರಲಿದೆ. ಸಾಮಾಜಿಕ ಬದುಕು ಸರಾಗ. ವಿದ್ಯಾರ್ಥಿಗಳಿಗೆ ಹುಮ್ಮಸ್ಸು ತರುವಂಥ ವಾತಾವರಣ.

ತುಲಾ: ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಪ್ರಗತಿಯನ್ನು ನಿರೀಕ್ಷಿಸಬಹುದು. ಭವಿಷ್ಯಕ್ಕೆ ಸಂಬಂಧಿಸಿದ ಹಲವಾರು ಉತ್ತಮ ಮಾರ್ಗಗಳು ಗೋಚರವಾಗಲಿವೆ. ದೀರ್ಘಕಾಲದಿಂದ ಚಿಂತಿಸುತ್ತಿರುವ ಕಾರ್ಯವೊಂದು ಕಾರ್ಯರೂಪಕ್ಕೆ.

ವೃಶ್ಚಿಕ: ರಚನಾತ್ಮಕ ಕಾರ್ಯಕ್ರಮಗಳಿಗೆ ವೆಚ್ಚ ಭರಿಸಬೇಕಾದೀತು. ಅಣ್ಣನ ಸಹಕಾರದಿಂದ ನೆಮ್ಮದಿ ಹೊಂದಲಿದ್ದೀರಿ. ಸ್ವತ್ತು ವ್ಯವಹಾರಗಳ ಬಗ್ಗೆ ಸೋದರರೊಡನೆ ಚರ್ಚೆ ಮಾಡಲಿದ್ದೀರಿ.

ಧನು: ಹೊಸದಾಗಿ ಆರಂಭಿಸುವ ಕೆಲಸ ಕಾರ್ಯಗಳು ನಿರ್ವಿಘ್ನದಾಯಕವಾಗಿ ನಡೆಯಲಿದ್ದು ಉತ್ತಮ ಫಲಿತಾಂಶ ನೀಡಲಿದೆ. ವಿದ್ಯಾರ್ಥಿಗಳಿಗೆ ಅದೃಷ್ಟ ಒಲಿದುಬರಲಿದೆ. ಮನೋರಂಜನೆಗಾಗಿ ಹೆಚ್ಚಿನವೆಚ್ಚ ಭರಿಸಬೇಕಾದೀತು.

ಮಕರ: ಬಹುದಿನಗಳ ಸಮಸ್ಯೆ ಪರಿಹಾರದಿಂದ ಮಾನಸಿಕ ಶಾಂತಿ ದೊರಕಲಿದೆ. ಧಾರ್ಮಿಕ ಕಾರ್ಯಕ್ರಮಗಳ ಸಂಭ್ರಮ. ಮಹಿಳೆಯರ ಮಾನಸಿಕ ನೆಮ್ಮದಿಯನ್ನು ಕದಡುವ ಪ್ರಸಂಗ ಎದುರಾದೀತು.

ಕುಂಭ: ಆರ್ಥಿಕ ಸ್ಥಿರತೆಯಿಂದಾಗಿ ನೆಮ್ಮದಿ ಮೂಡಲಿದೆ. ನೆರೆಹೊರೆಯ-ವರೊಂದಿಗೆ ಮಧುರ ಬಾಂಧವ್ಯ ಉಂಟಾಗುವುದು. ವಿದೇಶದಲ್ಲಿರುವ ಕುಟುಂಬದಿಂದ ಸುವಾರ್ತೆ.

ಮೀನ: ಉದ್ಯೋಗದಲ್ಲಿ ಒಳ್ಳೆಯ ಹೆಸರು ಪಡೆಯುವಿರಿ. ದೂರದ ಊರಿಗೆ ವರ್ಗಾವಣೆಯಾಗುವ ಸಾಧ್ಯತೆ ಕಂಡುಬರುವುದು. ಮನೆ ನಿರ್ಮಾಣಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಅಭಿವೃದ್ಧಿ ಕಂಡುಕೊಳ್ಳುವಿರಿ.

ನಿಮ್ಮ ಜನ್ಮದಿನ 31-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ಮದುವೆ ವಿಚಾರದಲ್ಲಿ ಸಾವಧಾನದಿಂದ ವ್ಯವಹರಿಸುವುದು ಒಳಿತು. ಮಕ್ಕಳ ಓದಿನ ಬಗ್ಗೆ ವಿಶೇಷ ಗಮನ ಕೊಡುವಿರಿ. ವ್ಯವ-ಹಾರದಲ್ಲಿ ಅಭಿವೃದ್ಧಿಯನ್ನು ಕಾಣುವಿರಿ. ಬಂಧುಗಳಿಗೆ ವಿಶೇಷ ಸಹಾಯ ಮಾಡಬೇಕಾದ ಅಗತ್ಯತೆ ಕಂಡುಬರುತ್ತಿದೆ.

ವೈದ್ಯಕೀಯ ತಜ್ಞರ ಎಚ್ಚರಿಕೆ • ರಾಜ್ಯದಲ್ಲಿ 600ಕ್ಕೂ ಅಧಿಕ ಪ್ರಕರಣ ದೃಢ

3ನೇ ಅಲೆ: ಮಕ್ಕಳಿಗೆ 'ಮಿಸ್‌–ಸಿ' ಅಪಾಯ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯಲ್ಲಿ ಕೊರೊನಾ ಸೋಂಕಿನ ಜತೆಗೆ ಬಹು ಅಂಗಾಂಗ ಉರಿಯೂತ ಸಮಸ್ಯೆ (ಮಿಸ್‌–ಸಿ) ಕೂಡ ಹೆಚ್ಚಿನ ಸಂಖ್ಯೆಯ ಮಕ್ಕಳನ್ನು ಕಾಡುವ ಸಾಧ್ಯತೆಯಿದ್ದು, ಇದು ಕೋವಿಡ್‌ಗಿಂತ ಹೆಚ್ಚಿನ ಅಪಾಯಕಾರಿ ಎಂದು ವೈದ್ಯಕೀಯ ತಜ್ಞರು ಎಚ್ಚರಿಸಿದ್ದಾರೆ.

ಮೊದಲ ಅಲೆಯಲ್ಲಿ ಅಪರೂಪವಾಗಿದ್ದ ಮಿಸ್‌–ಸಿ ಸಮಸ್ಯೆ ಎರಡನೇ ಅಲೆಯಲ್ಲಿ ಚೇತರಿಸಿಕೊಂಡಿದ್ದ ಕೆಲವು ಮಕ್ಕಳನ್ನು ಕಾಡಲಾರಂಭಿಸಿದೆ. ಮಕ್ಕಳ ತಜ್ಞರ ಪ್ರಕಾರ ಕೊರೊನಾ ಸೋಂಕಿನಿಂದ ಗುಣಮುಖರಾದ ಪ್ರತಿ ನೂರರಲ್ಲಿ ಒಂದು ಮಗುವಿಗೆ ಸಮಸ್ಯೆ ಕಾಣಿಸಿಕೊಳ್ಳಲಿದೆ. ರಾಜ್ಯದಲ್ಲಿ ಈಗಾಗಲೇ 600ಕ್ಕೂ ಅಧಿಕ ಹಾಗೂ ಬೆಂಗಳೂರಿನಲ್ಲಿ 400 ಅಧಿಕ ಪ್ರಕರಣಗಳು ವರದಿಯಾಗಿವೆ. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿಯೇ (ಐಜಿಐಸಿಎಚ್) 130 ಪ್ರಕರಣಗಳು ದೃಢಪಟ್ಟಿವೆ.



ಮಿಸ್‌–ಸಿ ಸಮಸ್ಯೆಯು ಕೋವಿಡ್‌ನಿಂದ ಚೇತರಿಸಿಕೊಂಡ ಎರಡರಿಂದ ನಾಲ್ಕುವಾರಗಳಲ್ಲಿ ಕಾಣಿಸಿಕೊಳ್ಳಲಿದೆ. ಬೇಗ ಪತ್ತೆ ಮಾಡಿ ಚಿಕಿತ್ಸೆ ನೀಡುವುದು ಆದ್ಯತೆಯಾಗಬೇಕು

ಡಾ.ಕೆ.ಎಸ್. ಸಂಜಯ್

ಐಜಿಐಸಿಎಚ್ ನಿರ್ದೇಶಕ

ಮೂರನೇ ಅಲೆಯಲ್ಲಿ ಈ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗುವ ಬಗ್ಗೆ ಮಕ್ಕಳ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಮೂರನೇ ಅಲೆಗೆ ಸಂಬಂಧಿಸಿದಂತೆ ಡಾ. ದೇವಿಪ್ರಸಾದ್ ಶೆಟ್ಟಿ ನೇತೃತ್ವದ ತಜ್ಞ ವೈದ್ಯರ ಸಮಿತಿ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಬೆಂಗಳೂರಿನಲ್ಲಿಯೇ 45,958 ಮಕ್ಕಳು ಸೇರಿದಂತೆ ರಾಜ್ಯದಲ್ಲಿ 3.4 ಲಕ್ಷ ಮಕ್ಕಳು ಸೋಂಕಿತರಾಗುವ ಬಗ್ಗೆ ಉಲ್ಲೇಖಿಸಲಾಗಿದೆ. ಇದಕ್ಕೆ ಪೂರಕ ಎಂಬಂತೆ ಮಕ್ಕಳಲ್ಲಿನ ಸೋಂಕು ದೃಢ ಪ್ರಮಾಣ ಕೂಡ ಏರುಗತಿ ಪಡೆದಿದೆ.

ಪ್ರಜಾವಾಣಿ ವಿಶೇಷ

ಮೇ ತಿಂಗಳಲ್ಲಿ ವರದಿಯಾದ ಕೋವಿಡ್ ಪ್ರಕರಣಗಳಲ್ಲಿ 10 ವರ್ಷದೊಳಗಿನವರಲ್ಲಿ ಸೋಂಕು ದೃಢ ಪ್ರಮಾಣ ಸರಾಸರಿ ಶೇ 3.5ರಷ್ಟಿತ್ತು. ಇದು ಜೂನ್ ತಿಂಗಳಲ್ಲಿ ಶೇ 4ಕ್ಕೆ ಏರಿಕೆಯಾಗಿತ್ತು. ಜುಲೈ ತಿಂಗಳಲ್ಲಿ ಶೇ 4.4ಕ್ಕೆ ತಲುಪಿದೆ.

ಐಜಿಐಸಿಎಚ್ ನೋಡಲ್ ಕೇಂದ್ರ: ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪೀಡಿತರಾದಲ್ಲಿ ಚಿಕಿತ್ಸೆ ಒದಗಿಸಲು ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಅದೇ ರೀತಿ, ಮಿಸ್‌–ಸಿ ಸಮಸ್ಯೆಗೆ ಐಜಿಐಸಿಎಚ್ ಸಂಸ್ಥೆಯನ್ನು ನೋಡಲ್ ಕೇಂದ್ರವಾಗಿ ಗುರುತಿಸಲಾಗಿದೆ. ಈ ಸಮಸ್ಯೆಯ ಚಿಕಿತ್ಸೆ ಬಗ್ಗೆ ಕೇಂದ್ರದ ಮೂಲಕ ವೈದ್ಯರಿಗೆ ತರಬೇತಿ ನೀಡಲಾಗುತ್ತಿದೆ.

'ಮಿಸ್‌–ಸಿ ಸಮಸ್ಯೆಗೆ ಚಿಕಿತ್ಸೆ ವಿಳಂಬವಾದಲ್ಲಿ ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಎರಡನೇ ಅಲೆಯಲ್ಲಿ ಈ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದೆ. ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಸಾಧ್ಯತೆ ಇರುವುದರಿಂದ ಈ ಪ್ರಕರಣಗಳ ಸಂಖ್ಯೆ ಇನ್ನಷ್ಟು ಹೆಚ್ಚಳವಾಗಬಹುದು. ಕೆಲ ಮಕ್ಕಳಿಗೆ ಐಸಿಯು ಹಾಸಿಗೆ ಕೂಡ ಅಗತ್ಯವಿರುತ್ತದೆ' ಎಂದು ಐಜಿಐಸಿಎಚ್ ನಿರ್ದೇಶಕ ಡಾ.ಕೆ.ಎಸ್. ಸಂಜಯ್ 'ಪ್ರಜಾವಾಣಿ'ಗೆ ತಿಳಿಸಿದರು.

'ಲಕ್ಷಣ ರಹಿತ ಸೋಂಕಿತರಿಗೂ ಸಮಸ್ಯೆ'

'ಮಿಸ್‌–ಸಿ ಸಮಸ್ಯೆಯು 10ವರ್ಷದೊಳಗಿನ ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲಿದೆ. ಕೆಲ ಮಕ್ಕಳು ಕೋವಿಡ್ ಪೀಡಿತರಾಗಿರದಿದ್ದರೂ ಈ ಸಮಸ್ಯೆ ಕಾಣಿಸಿಕೊಂಡಲ್ಲಿ ಅಂತಹವರಿಗೆ ಪ್ರತಿಕಾಯ ಪರೀಕ್ಷೆ ನಡೆಸಲಾಗುತ್ತದೆ. ಆಗ ಅವರು ಈ ಮೊದಲು ಸೋಂಕಿತರಾಗಿದ್ದರೇ ಎನ್ನುವುದು ಖಚಿತವಾಗುತ್ತದೆ. ಕೋವಿಡ್‌ಗಿಂತ ಮಿಸ್‌–ಸಿ ಸಮಸ್ಯೆಯು ಹೆಚ್ಚಿನ ಅಪಾಯವನ್ನು ಉಂಟುಮಾಡುತ್ತದೆ. ವಿವಿಧ ಅಂಗಾಂಗಗಳಿಗೆ ಹಾನಿಯಾಗಲಿದೆ' ಎಂದು ಮಕ್ಕಳ ತಜ್ಞ ಹಾಗೂ ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಮಕ್ಕಳ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ್ ತಿಳಿಸಿದರು.

'ಶೇ 2ರಿಂದ ಶೇ 3ರಷ್ಟು ಮರಣ ಪ್ರಮಾಣವನ್ನು ಇದು ಹೊಂದಿದೆ. ಕಣ್ಣಿನ ಸುತ್ತ ಕೆಂಪಾಗುವಿಕೆ, ದೇಹದಲ್ಲಿ ಊತ, ವಿಪರೀತ ಮೈ ತುರಿಕೆ, ಜ್ವರ, ಹೊಟ್ಟೆನೋವು, ವಾಂತಿ ಈ ಸಮಸ್ಯೆಯ ಪ್ರಮುಖ ಲಕ್ಷಣಗಳಾಗಿವೆ' ಎಂದು ಹೇಳಿದರು.

₹5 ಲಕ್ಷ ಪರಿಹಾರ, ₹5 ಲಕ್ಷ ಠೇವಣಿ ಇಡುವ ಭರವಸೆ

ಅಭಿಮಾನಿಯ ಕುಟುಂಬಕ್ಕೆ ಸಾಂತ್ವನ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶುಕ್ರವಾರ ತಾಲ್ಲೂಕಿನ ಬೊಮ್ಮಲಾಪುರ ಗ್ರಾಮಕ್ಕೆ ಭೇಟಿ ನೀಡಿ, ತಮ್ಮ ರಾಜೀನಾಮೆಯಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದ ರವಿಯ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ತಾಯಿ ರೇವಮ್ಮ ಹಾಗೂ ಇಬ್ಬರು ಸಹೋದರಿಯರಿಗೆ ಧೈರ್ಯ ತುಂಬಿದರು. ಕುಟುಂಬದ ಆರ್ಥಿಕ ಸಂಕಷ್ಟ ಕಂಡು ₹5 ಲಕ್ಷ ಪರಿಹಾರ ನೀಡಿದರು. ಇನ್ನೂ ₹5 ಲಕ್ಷ ಹಣ ಠೇವಣಿ ಇರಿಸಿ, ಬಡ್ಡಿ ಕುಟುಂಬಕ್ಕೆ ಬರುವಂತೆ ಮಾಡುವ ಭರವಸೆ ನೀಡಿದರು.

ರಾಜ್ಯದಾದ್ಯಂತ ಪ್ರವಾಸ: ಬೊಮ್ಮಲಾಪುರಕ್ಕೆ ಭೇಟಿ ನೀಡುವುದಕ್ಕೂ ಮುನ್ನ ಮಾತನಾಡಿದ ಅವರು, ' ಪಕ್ಷ ಬಲಪಡಿಸಲು ರಾಜ್ಯದಾದ್ಯಂತ ಪ್ರವಾಸ ಮಾಡುತ್ತೇನೆ. ಮುಂದಿನ ಚುನಾವಣೆಯಲ್ಲಿ ಪಕ್ಷ 130–135 ಸ್ಥಾನಗಳನ್ನು ಗೆಲ್ಲಲೇಬೇಕು' ಎಂದರು.



ಗುಂಡ್ಲುಪೇಟೆ ತಾಲ್ಲೂಕಿನ ಬೊಮ್ಮಲಾಪುರದಲ್ಲಿ ಆತ್ಮಹತ್ಯೆ ಮಾಡಿಕೊಂಡ ಅಭಿಮಾನಿ ರವಿ ಮನೆಗೆ ಶುಕ್ರವಾರ ಭೇಟಿ ನೀಡಿದ ಬಿ.ಎಸ್‌.ಯಡಿಯೂರಪ್ಪ ಅವರು, ರವಿಯ ಭಾವಚಿತ್ರ ವೀಕ್ಷಿಸಿದರು. ಶಾಸಕರಾದ ಎನ್‌.ಮಹೇಶ್, ನಿರಂಜನಕುಮಾರ್ ಇದ್ದರು

ಸಂಪುಟ ರಚನೆ ಕುರಿತ ಪ್ರಶ್ನೆಗೆ, 'ಮುಖ್ಯಮಂತ್ರಿ ದೆಹಲಿಗೆ ಹೋಗಿದ್ದು, ಕೆಲವೇ ದಿನಗಳಲ್ಲಿ ರಚನೆಯಾಗಲಿದೆ' ಎಂದರು.

'ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಶಾಸಕರಿಗೆ ಸಚಿವ ಸ್ಥಾನ ನೀಡುವ ಬಗ್ಗೆ ಕೇಂದ್ರದ ನಾಯಕರು ತೀರ್ಮಾನಿಸುತ್ತಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹಿಂದಿನ ಸರ್ಕಾರದ ಬಗ್ಗೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾಡಿರುವ ಟೀಕೆಗೆ ಪ್ರತಿಕ್ರಿಯಿಸಿ, 'ಸಿದ್ದರಾಮಯ್ಯ ಸಂಯಮ ಕಳೆದುಕೊಂಡು ಮಾತನಾಡುತ್ತಿದ್ದಾರೆ' ಎಂದರು.

'ಬಿಜೆಪಿಯ ನೆರಳೂ ನಾಶವಾಗಬಹುದು'

ಪ್ರಜಾವಾಣಿ ವಾರ್ತೆ

ವಿಜಯಪುರ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಯಡಿಯೂರಪ್ಪನವರ ನೆರಳಿನಂತೆ ನಡೆದುಕೊಂಡರೆ ಆ ನೆರಳನ್ನು ಕರ್ನಾಟಕದಿಂದಲೇ ನಾಶ ಮಾಡಬೇಕಾಗುತ್ತದೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಎಚ್ಚರಿಸಿದರು.


ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಗಮ, ಮಂಡಳಿ ಅಧ್ಯಕ್ಷ ಸ್ಥಾನಗಳು ಬದಲಾಗಬೇಕು. ಇದೇ ರೀತಿ ಮುಂದುವರೆದರೆ ನಾವೇ ಕಾಂಗ್ರೆಸ್‌ಗೆ ತಾಂಬೂಲ ಕೊಟ್ಟು ಮುಖ್ಯಮಂತ್ರಿ ಆಗಬನ್ನಿ ಎನ್ನುವ ಅನಿವಾರ್ಯ ಪರಿಸ್ಥಿತಿ ಉಂಟಾಗಲಿದೆ ಎಂದು ಯತ್ನಾಳ ಹೇಳಿದರು.

ಮಂತ್ರಿಗಿರಿಗಾಗಿ ದೆಹಲಿಗೆ ಹೋಗಿ ಲಾಬಿ ಮಾಡುವ ಅವಶ್ಯಕತೆ ನನಗೆ ಇಲ್ಲ. ರಾಜ್ಯ ಬಿಜೆಪಿ ಹಿರಿಯರಲ್ಲಿ ನಾನೂ ಒಬ್ಬ. ಅನಂತಕುಮಾರ್, ಯಡಿಯೂರಪ್ಪ, ಈಶ್ವರಪ್ಪ ಮತ್ತು ನನ್ನನ್ನು ಬಿಟ್ಟರೆ ಹಿರಿಯರು ಬೇರೆ ಯಾರಿದ್ದಾರೆ? ನಾನು ವಾಜಪೇಯಿ ಸರ್ಕಾರದಲ್ಲಿ ಮಂತ್ರಿಯಾದವನು. ಕೆಲ ಸಮಯ ಪಕ್ಷ ಬಿಟ್ಟು ಹೋಗಿದ್ದೇ ಅಷ್ಟೇ. ಯಡಿಯೂರಪ್ಪ ಹೋಗಿರಲಿಲ್ಲವೇ? ಬೊಮ್ಮಾಯಿ ಮೂಲ ಬಿಜೆಪಿಗರಾ?, ಆರ್‌ಎಸ್‌ಎಸ್‌ನಲ್ಲಿ ಧ್ವಜ ಪ್ರಣಾಮ ಮಾಡಿದ್ದಾರಾ? ಎಂದು ಪ್ರಶ್ನಿಸಿದರು.



ಸ್ವಾಮೀಜಿಗಳ ವಿರುದ್ಧ ಗರಂ: ಚಿತ್ರದುರ್ಗ ಮುರುಘಾಮಠದ ಸ್ವಾಮೀಜಿ, ಬಾಲೆಹೊಸೂರಿನ ದಿಂಗಾಲೇಶ್ವರ ಸ್ವಾಮೀಜಿ ಮಠದಲ್ಲಿ ಕುಳಿತು ಬಿಜೆಪಿ ನಾಶವಾಗುತ್ತದೆ ಎಂದು ಹೇಳಿಕೆ ನೀಡಿರುವುದು ಖಂಡನೀಯ. ಮಠದಲ್ಲಿ ಕುಳಿತು ಧರ್ಮ ಭೋದನೆ ಮಾಡಬೇಕು, ಲವ್ ಜಿಹಾದ್, ಗೋ ಹತ್ಯೆ ಬಗ್ಗೆ ಮಾತಾಡಬೇಕು. ಸಮಾನ ನಾಗರಿಕತೆಗಾಗಿ, ಎರಡು ಮಕ್ಕಳು ಇದ್ದವರಿಗೆ ಸಬ್ಸಿಡಿ ಕೊಡುವ ಪರವಾಗಿ, ಅರಮನೆ ಮೈದಾನದಲ್ಲಿ ಮಠಾಧೀಶರು ಹೋರಾಟ ಮಾಡಬೇಕಿತ್ತೇ ಹೊರತು, ಒಬ್ಬ ವ್ಯಕ್ತಿ ಪರವಾಗಿ ಮಾತ್ರ ಮಾತನಾಡಬಾರದಿತ್ತು ಎಂದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,778
ಇಂದಿನ ಅಂತ್ಯ	15,763
▼	15
ದಿನದ ಗರಿಷ್ಠ	15,862

ವಿನಿಮಯ ದರ

$ ಡಾಲರ್	74.42
£ ಪೌಂಡ್	103.98
€ ಯುರೊ	88.53
¥ ಯೆನ್ (100ಕ್ಕೆ)	67.8

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1480 (1480)
ಸೋಯಾ (ರಿಫೈನ್ಡ್)	₹1400(1400)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹1278 (1275)

ಮೂಲಸೌಕರ್ಯ ವಲಯ: ಶೇ 8.9ರ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳ ಉತ್ಪಾದಕತೆಯು ಜೂನ್ ತಿಂಗಳಿನಲ್ಲಿ ಶೇಕಡ 8.9ರಷ್ಟು ಬೆಳವಣಿಗೆ ಕಂಡಿದೆ. ನೈಸರ್ಗಿಕ ಅನಿಲ, ಉಕ್ಕು, ಕಲ್ಲಿದ್ದಲು, ವಿದ್ಯುತ್ ಉತ್ಪಾದನೆ ಹೆಚ್ಚಾಗಿದ್ದು ಇದಕ್ಕೆ ಒಂದು ಕಾರಣ.


ಹಿಂದಿನ ವರ್ಷದ ಇದೇ ತಿಂಗಳಿನಲ್ಲಿ ಈ ವಲಯಗಳ ಉತ್ಪಾದಕತೆ ಬಹಳ ಕಡಿಮೆ ಇದ್ದುದರಿಂದ, ಆ ಮಟ್ಟಕ್ಕೆ ಹೋಲಿಸಿದರೆ ಈ ವರ್ಷದ ಉತ್ಪಾದಕತೆ ಹೆಚ್ಚಾಗಿದೆ. ಎಂಟು ಪ್ರಮುಖ ಮೂಲಸೌಕರ್ಯ ವಲಯಗಳಾದ ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಸಗೊಬ್ಬರ, ಉಕ್ಕು, ಸಿಮೆಂಟ್, ವಿದ್ಯುತ್ ಮತ್ತು ಸಂಸ್ಕರಣಾ ಘಟಕಗಳ ಉತ್ಪಾದಕತೆಯು ಹಿಂದಿನ ವರ್ಷದ ಜೂನ್ ತಿಂಗಳಲ್ಲಿ ಶೇ (–) 12.4ರಷ್ಟು ಕುಸಿತ ಕಂಡಿತ್ತು. ಲಾಕ್‌ಡೌನ್ ನಿರ್ಬಂಧಗಳು ಜಾರಿಯಲ್ಲಿ ಇದ್ದುದು ಈ ಕುಸಿತಕ್ಕೆ ಕಾರಣವಾಗಿತ್ತು.

ಈ ವರ್ಷದ ಮೇ ತಿಂಗಳಲ್ಲಿ ಈ ಎಂಟು ವಲಯಗಳು ಶೇ 16.3ರಷ್ಟು ಬೆಳವಣಿಗೆ ಸಾಧಿಸಿದ್ದವು. ಏಪ್ರಿಲ್‌ನಲ್ಲಿ ಬೆಳವಣಿಗೆ ಪ್ರಮಾಣವು ಶೇ 60.9ರಷ್ಟು ಇತ್ತು.

ಈ ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ ಈ ಎಂಟು ವಲಯಗಳು ಶೇ 25.3ರಷ್ಟು ಬೆಳವಣಿಗೆ ಸಾಧಿಸಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ವಲಯಗಳು ಶೇ (–)23.8ರಷ್ಟು ಕುಸಿತ ದಾಖಲಿಸಿದ್ದವು.

'ರಾಜ್ಯಗಳು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸುತ್ತಿರುವುದು, ಜನರ ಸಂಚಾರ ಹೆಚ್ಚಾಗಿರುವುದು, ವಿದ್ಯುತ್ ಬೇಡಿಕೆ ಜಾಸ್ತಿ ಆಗಿರುವುದು ಪ್ರಮುಖ ವಲಯಗಳ ಬೆಳವಣಿಗೆಯನ್ನು ಜುಲೈ ತಿಂಗಳಿನಲ್ಲಿ ಶೇ 11–14ರ ಮಟ್ಟಕ್ಕೆ ಒಯ್ಯುವ ನಿರೀಕ್ಷೆ ಇದೆ' ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಜಿಎಸ್‌ಟಿ ಇ-ವೇ ಬಿಲ್, ಆಟೊಮೊಬೈಲ್ ಉತ್ಪಾದನೆ ಹೆಚ್ಚಾಗಿರುವ ಸೂಚನೆಗಳು ಇರುವ ಕಾರಣ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು ಜೂನ್ ತಿಂಗಳಲ್ಲಿ ಶೇ 12–17ರ ಮಟ್ಟವನ್ನು ತಲುಪುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.




ಖಾದ್ಯ ತೈಲ ಬೆಲೆ ಹೆಚ್ಚಳ ಪ್ರಮಾಣ ಶೇ 52!

ನವದೆಹಲಿ (ಪಿಟಿಐ): ಚಿಲ್ಲರೆ ಮಾರುಕಟ್ಟೆಯಲ್ಲಿ ಖಾದ್ಯ ತೈಲಗಳ ಸರಾಸರಿ ಬೆಲೆಯು ಹಿಂದಿನ ವರ್ಷದ ಜುಲೈ ತಿಂಗಳಿಗೆ ಹೋಲಿಸಿದರೆ ಈ ವರ್ಷದ ಜುಲೈನಲ್ಲಿ ಗರಿಷ್ಠ ಶೇಕಡ 52ರಷ್ಟು ಏರಿಕೆ ಆಗಿದೆ.

ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಖಾತೆ ರಾಜ್ಯ ಸಚಿವ ಅಶ್ವಿನಿ ಕುಮಾರ್ ಚೌಬೆ ಅವರು, 'ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಧಾನ್ಯಗಳು ಹಾಗೂ ಖಾದ್ಯ ತೈಲದ ಬೆಲೆಯಲ್ಲಿ ಏರಿಕೆ ಆಗುವುದನ್ನು ತಡೆಯಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ' ಎಂದು ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದ್ದಾರೆ.

'ಖಾದ್ಯ ತೈಲ ಬೆಲೆ ತಗ್ಗಿಸುವ ಉದ್ದೇಶದಿಂದ ಕಚ್ಚಾ ತಾಳೆ ಎಣ್ಣೆ ಮೇಲಿನ ಸುಂಕವನ್ನು ಜೂನ್ 30ರಿಂದ ಅನ್ವಯವಾಗುವಂತೆ ಶೇ 5ರಷ್ಟು ಕಡಿಮೆ ಮಾಡಲಾಗಿದೆ. ಈ ಕ್ರಮವು ಸೆಪ್ಟೆಂಬರ್ 30ರವರೆಗೆ ಜಾರಿಯಲ್ಲಿ ಇರುತ್ತದೆ. ಸಂಸ್ಕರಿತ ತಾಳೆ ಎಣ್ಣೆ ಮೇಲಿನ ಸುಂಕ ಶೇ 45 ಇದ್ದಿದ್ದನ್ನು ಶೇ 37.5ಕ್ಕೆ ಇಳಿಕೆ ಮಾಡಲಾಗಿದೆ' ಎಂದು ಚೌಬೆ ಅವರು ಹೇಳಿದ್ದಾರೆ.

ಭಾರತವು ತನ್ನಲ್ಲಿ ಬಳಕೆಯಾಗುವ ಖಾದ್ಯ ತೈಲದ ಪೈಕಿ ಶೇ 60ರಷ್ಟರಿಂದ ಶೇ 70ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ.



(2020ರ ಜುಲೈನಲ್ಲಿದ್ದ ಇದ್ದ ಬೆಲೆಗೆ ಹೋಲಿಸಿದರೆ 2021ರ ಜುಲೈನಲ್ಲಿ ಆಗಿರುವ ಶೇಕಡಾವಾರು ಹೆಚ್ಚಳ)

ಇಂಡಿಯನ್ ಆಯಿಲ್ ಲಾಭ ಮೂರು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 5,941 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿ ಗಳಿಸಿದ್ದ ₹ 1,910 ಕೋಟಿ ಲಾಭಕ್ಕೆ ಹೋಲಿಸಿದರೆ ಇದು ಮೂರು ಪಟ್ಟು ಜಾಸ್ತಿ.

ಇದರಿಂದಾಗಿ ಕಂಪನಿಯ ಪ್ರತಿ ಷೇರಿಗೆ ₹ 6.47ರಷ್ಟು ಲಾಭ ಸಿಕ್ಕಂತಾಗಿದೆ ಎಂದು ಐಒಸಿ ಷೇರುಪೇಟೆಗೆ ಮಾಹಿತಿ ನೀಡಿದೆ.

ಚಿನ್ನದ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಶುಕ್ರವಾರ ಪ್ರತಿ ಗ್ರಾಂಗೆ ₹ 294ರಷ್ಟು ಜಾಸ್ತಿ ಆಗಿದೆ. 10 ಗ್ರಾಂ ಚಿನ್ನವು ₹ 47,442ರಂತೆ ಮಾರಾಟ ಆಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನಕ್ಕೆ ಬೇಡಿಕೆ ಹೆಚ್ಚಾಗಿ, ಬೆಲೆ ಜಾಸ್ತಿ ಆಗಿದೆ. ಅದರ ಪರಿಣಾಮವು ದೇಶಿ ಮಾರುಕಟ್ಟೆಯಲ್ಲಿಯೂ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 600-6500
ನಡುಗೋಲು 700-750
ರಾಶಿ 800-850
ರಾಶಿ ಉತ್ತಮ 900-950
ಜರಡಿ 1000-1050
ಹೆರಕಿದ್ದು 1200-1300
ಹಸಿರು ಸಾಧಾರಣ 800-850
ಹಸಿರು ಉತ್ತಮ 1000-1050
ಹಸಿರು ಅತಿ ಉತ್ತಮ 1300-1400
ಕಾಳು ಮೆಣಸು 380

ಅಡಿಕೆ
ಬಂಟ್ವಾಳ
ಕೋಕ 10000-22500
ಹೊಸತು 23500-45000
ಹಳತು 42500-52000
ಹೊಸನಗರ
ಬಿಳಿಗೋಟು 23429-24599
ಚಾಲಿ 36809-38302
ಕೆಂಪುಗೋಟು 31999-34899
ರಾಶಿ 39669-42569
ಸಿಪ್ಪೆಗೋಟು 16555-16555
ಕುಮಟಾ
ಚಿಪ್ಪು 31699-34369
ಕೋಕ 21509-31509
ಫ್ಯಾಕ್ಟರಿ 15169-19169
ಹಳೆಚಾಲಿ 42099-44599
ಹೊಸಚಾಲಿ 38099-41299
ಕುಂದಾಪುರ
ಹಳೆಚಾಲಿ 36000-52000
ಹೊಸಚಾಲಿ 37500-45000
ಶಿವಮೊಗ್ಗ
ಬೆಟ್ಟೆ 45200-46300
ಗೊರಬಲು 17059-35219
ರಾಶಿ 37499-42289
ಸರಕು 46600-73600
ಸಿದ್ದಾಪುರ
ಬಿಳಿಗೋಟು 27799-34899
ಚಾಲಿ 36390-40599
ಕೋಕ 23290-32499
ಕೆಂಪುಗೋಟು 29089-30899
ರಾಶಿ 39599-41209
ತಟ್ಟಿಬೆಟ್ಟೆ 35029-35739
ಶಿರಸಿ
ಬೆಟ್ಟೆ 30899-39091
ಬಿಳಿಗೋಟು 25119-35986
ಚಾಲಿ 37699-41019
ರಾಶಿ 39208-42002
ಯಲ್ಲಾಪುರ
ಬಿಳಿಗೋಟು 30899-34899
ಚಾಲಿ 35859-41150
ಕೋಕ 22012-31899
ಕೆಂಪುಗೋಟು 31206-32345
ರಾಶಿ 40299-45879
ತಟ್ಟಿಬೆಟ್ಟೆ 34299-38469
ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ: 257-479
ದ್ವಿತಳಿ; 277-519

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13850	13,300	12750	196.5ಸೆಂಟ್ಸ್
ಎಸಿ	5830	5,000	5060	
ಆರ್‌ಪಿ	6250	6,000	6050	ಲಂಡನ್
ಆರ್‌ಸಿ	3430	3400	2960	1885ಡಾಲರ್ಸ್

ಆ.4ರಿಂದ ಅಂತರರಾಷ್ಟ್ರಿಯ ಕಾಫಿ ಹಬ್ಬ

ಚಿಕ್ಕಮಗಳೂರು: ಕಾಫಿ ಮಂಡಳಿಯ ನೇತೃತ್ವದಲ್ಲಿ ಆಗಸ್ಟ್ 4 ಮತ್ತು 5ರಂದು ಆನ್‌ಲೈನ್ ಮೂಲಕ 'ಅಂತರರಾಷ್ಟ್ರೀಯ ಕಾಫಿ ಹಬ್ಬ' ಆಯೋಜಿಸಲಾಗಿದೆ.

ಹಬ್ಬವು ಈ ವರ್ಷ ಭಾರತದಲ್ಲಿ ನಡೆಯುತ್ತಿದ್ದು ಆಗಸ್ಟ್ 4ರಂದು ಸಂಜೆ 4 ಗಂಟೆಗೆ ಆರಂಭವಾಗಲಿದೆ. ಭಾರತ, ಬ್ರೆಜಿಲ್, ದಕ್ಷಿಣ ಆಫ್ರಿಕಾ ರಾಷ್ಟ್ರಗಳ ಪ್ರತಿನಿಧಿಗಳು ಪಾಲ್ಗೊಳ್ಳುವರು. ಮೂರೂ ದೇಶಗಳ ವಿಜ್ಞಾನಿಗಳು ಸಹ ಭಾಗವಹಿಸುವರು.

ಕಾಫಿ ಕುರಿತು ವಿಚಾರ ವಿನಿಮಯ, ಚರ್ಚೆ ನಡೆಯಲಿದೆ. ಭಾಗವಹಿಸಲು ಆಸಕ್ತಿಯುಳ್ಳವರು www.mmactiv.in/ibsacoffeefestival2021 ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಸಬೇಕು. ನೋಂದಣಿ ಉಚಿತ ಎಂದು ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಡಾ.ಎಚ್‌.ಟಿ. ಮೋಹನ್‌ಕುಮಾರ್ ತಿಳಿಸಿದ್ದಾರೆ.

ಕೊಬ್ಬರಿ ಧಾರಣೆ

ಬೆಂಗಳೂರು	₹15500-19500
ತುರುವೇಕೆರೆ	₹16500-16500
ಅರಸೀಕೆರೆ	₹15000-16850

ಮುಂಬೈ ಧಾರಣೆ

ಶೇಂಗಾ

30-7-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1490)
ಒಂದು ವಾರದ ಡೆಲಿವರಿ	1485 (1485)
ಸೋಯಾ ಕಚ್ಚಾ	1380 (1370)
ಪಾಮ್ ವಾರದ ಡೆಲಿವರಿ	1276 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1400)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
48,200 (48,200)
ಬೆಳ್ಳಿ ಕೆ.ಜಿ
68,100 (67,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಸತ್ತಿನಲ್ಲಿ ಸಚಿವ ರಾಮದಾಸ್ ಆಠವಲೆ ಹೇಳಿಕೆ: ಸಾಮಾಜಿಕ ಹೋರಾಟಗಾರರಿಂದ ಆಕ್ರೋಶ

‘ಶೌಚಗುಂಡಿ ಸ್ವಚ್ಛತೆ ವೇಳೆ ಯಾರೂ ಸತ್ತಿಲ್ಲ’

ನವದೆಹಲಿ (ಪಿಟಿಐ): ‘ಶೌಚಗುಂಡಿ ಶುಚಿ ಮಾಡಿದ್ದರಿಂದ ಜನರು ಮೃತಪಟ್ಟಿಲ್ಲ’ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಹೇಳಿದೆ. ಸರ್ಕಾರದ ಈ ಹೇಳಿಕೆಗೆ ಸಾಮಾಜಿಕ ಹೋರಾಟಗಾರರಿಂದ ಆಕ್ರೋಶ ವ್ಯಕ್ತವಾಗಿದೆ.


ಮಲಹೊರುವವರ ಸಮೀಕ್ಷೆಯ ವಿವರ ಮತ್ತು ಶೌಚಗುಂಡಿ ಶುಚಿ ಮಾಡುವಾಗ ಮೃತಪಟ್ಟವರ ವಿವರ ನೀಡಿ ಎಂದು ರಾಜ್ಯಸಭೆಯಲ್ಲಿ ಕೇಳಲಾಗಿದ್ದ ಪ್ರಶ್ನೆಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ರಾಮದಾಸ್ ಆಠವಲೆ ಉತ್ತರ ನೀಡಿದ್ದಾರೆ. ‘ಮಲ ಮತ್ತು ಶೌಚಗುಂಡಿ ಶುಚಿ ಮಾಡಿದ್ದರಿಂದ ಯಾರೂ ಮೃತಪಟ್ಟ ಬಗ್ಗೆ ವರದಿಯಾಗಿಲ್ಲ’ ಎಂದು ಅವರು ಹೇಳಿದ್ದಾರೆ.

ಇದೇ ಮಾರ್ಚ್ 10ರಂದು ಸಂಸತ್ತಿನಲ್ಲಿ ಕೇಳಲಾಗಿದ್ದ ಪ್ರಶ್ನೆಗೂ ಅವರು ಇದೇ ರೀತಿ ಉತ್ತರ ನೀಡಿದ್ದರು. ‘ಮಲ ಮತ್ತು ಶೌಚಗುಂಡಿ ಶುಚಿ ಮಾಡಿದ್ದರಿಂದ ಮೃತಪಟ್ಟ ಬಗ್ಗೆ ವರದಿಯಾಗಿಲ್ಲ. ಆದರೆ ಶೌಚಗುಂಡಿ ಮತ್ತು ಮ್ಯಾನ್‌ಹೋಲ್ ಅನ್ನು ಅಪಾಯಕಾರಿಯಾದ ರೀತಿಯಲ್ಲಿ ಸ್ವಚ್ಛಮಾಡುವಾಗ ಜನರು ಮೃತಪಟ್ಟ ಬಗ್ಗೆ ವರದಿಯಾಗಿದೆ’ ಎಂದು ಅವರು ಹೇಳಿದ್ದರು.

ಶೌಚಗುಂಡಿ ಮತ್ತು ಮ್ಯಾನ್‌ಹೋಲ್ ಶುಚಿ ಮಾಡುವಾಗ ಕಾರ್ಮಿಕರು ಮೃತಪಟ್ಟ ಪ್ರಕರಣಗಳನ್ನು ಸರ್ಕಾರವು ಮಲಹೊರುವುದರಿಂದ ಮೃತಪಟ್ಟ ಅಥವಾ ಶೌಚಗುಂಡಿ ಶುಚಿ ಮಾಡಿದ್ದರಿಂದ ಮೃತಪಟ್ಟ ಪ್ರಕರಣ ಎಂದು ಪರಿಗಣಿಸುವುದಿಲ್ಲ.

10 ವರ್ಷದಲ್ಲಿ 631 ಸಾವು

ಹತ್ತು ವರ್ಷಗಳಲ್ಲಿ ಶೌಚಗುಂಡಿ ಮತ್ತು ಮ್ಯಾನ್‌ಹೋಲ್ ಶುಚಿ ಮಾಡುವಾಗ 631 ಜನರು ಮೃತಪಟ್ಟಿದ್ದಾರೆ ಎಂದು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗವು 2020ರ ಸೆಪ್ಟೆಂಬರ್‌ನಲ್ಲಿ ವರದಿ ನೀಡಿತ್ತು. 2010ರ ಜನವರಿಯಿಂದ 2020ರ ಮಾರ್ಚ್ ಅಂತ್ಯದವರೆಗಿನ ದತ್ತಾಂಶಗಳನ್ನು ಆಯೋಗವು ನೀಡಿತ್ತು.



*2020ರ ಮಾರ್ಚ್‌ವರೆಗೆ

2021ರ ಜೂನ್ 4ರಂದು ಕರ್ನಾಟಕದ ರಾಮನಗರ ಜಿಲ್ಲೆಯಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸುವಾಗ ಬೆಂಗಳೂರಿನ ಮೂವರು ಪೌರ ಕಾರ್ಮಿಕರು ಮೃತಪಟ್ಟಿದ್ದರು

ಘನತೆ ಕಸಿಯುವ ಹೇಳಿಕೆ: ವಿಲ್ಸನ್

‘10 ವರ್ಷಗಳಲ್ಲಿ 600ಕ್ಕೂ ಹೆಚ್ಚು ಜನರು ಶೌಚಗುಂಡಿ ಸ್ವಚ್ಛ ಮಾಡುವಾಗ ಮೃತಪಟ್ಟಿದ್ದಾರೆ ಎಂದು ಸರ್ಕಾರದ ದಾಖಲೆಗಳೇ ಹೇಳುತ್ತವೆ. ಸ್ವತಃ ಸಚಿವರೇ ಸಂಸತ್ತಿನಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಈಗ ಶೌಚಗುಂಡಿ ಶುಚಿ ಮಾಡುವಾಗ ಯಾರೂ ಸತ್ತಿಲ್ಲ ಎಂದು ಹೇಳುವ ಮೂಲಕ, ಹೀಗೆ ಸತ್ತವರ ಗೌರವವನ್ನು ಅವರು ನಿರಾಕರಿಸಿದ್ದಾರೆ’ ಎಂದು ಸಫಾಯಿ ಕರ್ಮಚಾರಿ ಆಂದೋಲನದ ರಾಷ್ಟ್ರೀಯ ಸಮನ್ವಯಕಾರ ಬೆಜವಾಡ ವಿಲ್ಸನ್ ಅವರು ಟೀಕಿಸಿದ್ದಾರೆ.

‘ಸಚಿವರು ತೀರಾ ತಾಂತ್ರಿಕವಾದ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಒಣ ಮಲ ಶುಚಿ ಮಾಡುವುದನ್ನು ಮಾತ್ರ ಮಲಹೊರುವುದು ಎಂದು ಅವರು ಪರಿಗಣಿಸಿದ್ದಾರೆ. ಇದು ಸರಿಯಲ್ಲ. ಕೆಲವು ಲೋಪಗಳಿಂದ ಈ ಸಾವುಗಳು ಸಂಭವಿಸಿವೆ ಎಂಬುದನ್ನು ಒಪ್ಪಿಕೊಳ್ಳುವ ಧೈರ್ಯವನ್ನು ಸರ್ಕಾರ ತೋರಬೇಕು. ಅವರ ಸಾವಿನ ಲೆಕ್ಕಾಚಾರ ಇಡದೇ ಇರುವ ಮೂಲಕ ಘನತೆಯಿಂದ ಬದುಕುವ ಅವರ ಹಕ್ಕನ್ನು ನಿರಾಕರಿಸಲಾಗುತ್ತಿದೆ.’ ಎಂದಿದ್ದಾರೆ.

ಕಾಯ್ದೆ ಹೇಳುವುದೇನು...

‘ಶೌಚಾಲಯ, ಶೌಚಗುಂಡಿ ಮತ್ತು ತೆರೆದ ಚರಂಡಿಯಿಂದ ಮಲವನ್ನು ಶುಚಿಮಾಡುವ ಅಥವಾ ಸಾಗಿಸುವ ಅಥವಾ ಯಾವುದೇ ರೀತಿಯಲ್ಲಿ ಮಲವನ್ನು ವ್ಯಕ್ತಿಗಳು ನಿರ್ವಹಣೆ ಮಾಡುವುದನ್ನು ‘ಮಲಹೊರುವುದು’ ಎಂದು ಕರೆಯಲಾಗುತ್ತದೆ. ಪೂರ್ಣವಾಗಿ ಕೊಳೆಯದ ಮಲಕ್ಕೆ ಇದು ಅನ್ವಯವಾಗುತ್ತದೆ. ಯಾವುದೇ ಸ್ಥಳ ಮತ್ತು ರೈಲ್ವೆ ಹಳಿಗಳಲ್ಲಿ ಇರುವ ಮಲಕ್ಕೂ ಇದು ಅನ್ವಯವಾಗುತ್ತದೆ’ ಎಂದು ‘ಮಲಹೊರುವ ಪದ್ಧತಿ ನಿಷೇಧ ಮತ್ತು ಪುನರ್ವಸತಿ ಕಾಯ್ದೆ-2013’ ಹೇಳುತ್ತದೆ.

‘ಶೌಚಗುಂಡಿ, ಮ್ಯಾನ್‌ಹೋಲ್, ಒಳಚರಂಡಿ ಕೊಳವೆಯನ್ನು ಯಾವುದೇ ಸುರಕ್ಷಾ ಪರಿಕರಗಳು, ಸುರಕ್ಷಾ ಕ್ರಮಗಳು ಮತ್ತು ಯಂತ್ರ ಇಲ್ಲದೆ, ಬರಿಗೈಲಿ ಸ್ವಚ್ಛ ಮಾಡುವುದನ್ನು ‘ಶೌಚಗುಂಡಿಯನ್ನು ಅಪಾಯಕಾರಿಯಾಗಿ ಸ್ವಚ್ಛಗೊಳಿಸುವುದು’ ಎಂದು ಕಾಯ್ದೆ ಹೇಳುತ್ತದೆ.

ಮಲಹೊರುವುದು ಮತ್ತು ಶೌಚಗುಂಡಿಯನ್ನು ಅಪಾಯಕಾರಿಯಾಗಿ ಸ್ವಚ್ಛಗೊಳಿಸುವುದನ್ನು ಈ ಕಾಯ್ದೆಯು ನಿಷೇಧಿಸಿದೆ.

ಪ್ರಜಾವಾಣಿ DH DECCAN HERALD ಕೋವಿಡ್ ಪರಿಹಾರ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಎಸ್.ವಿ.ದೇಸ್ಕನ್**, ನಂ.959, 27ನೇ ಎ ಮುಖ್ಯರಸ್ತೆ, 9ನೇ ಬ್ಲಾಕ್, ಜಯನಗರ, ಬೆಂಗಳೂರು	2,00,000
2	**ಗೌರಿ ಮತ್ತು ಅದಿತಿ ಉರಾಳ್**, ಬನಶಂಕರಿ 3ನೇ ಹಂತ, ಬೆಂಗಳೂರು	5,000
3	**ಎ.ಎನ್.ಶಿವನಂಜಪ್ಪ**, 50, ವಿನಾಯಕ ಲೇಔಟ್, ಕೆ.ಎಚ್.ಬಿ ಕಾಲೊನಿ, ಬಸವೇಶ್ವರ ನಗರ, ಬೆಂಗಳೂರು	5,000
4	**ಬಿ.ಎ.ಪದ್ಮನಾಭ ರಾವ್ ಮತ್ತು ಕೃಷ್ಣಾಬಾಯಿ**, 223/23, ಶ್ರೀ ಗುರುಕೃಪಾ 5ನೇ ಮುಖ್ಯರಸ್ತೆ, ಕೆ.ಎಸ್.ನಗರ, ಬೆಂಗಳೂರು	3,000
5	**ನಳಿನಿ ಎಸ್.ಎನ್.**, ನಂ.5, ನಾರಾಯಣ ಕೃಪಾ, 12ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು	3,000
6	**ಜಿ.ಆರ್.ಯಜ್ಞನಾರಾಯಣ ಐತಾಳ್**, 89/1, ಎಚ್.ಬಿ.ಸಮಾಜ ಲಿಂಕ್ ರಸ್ತೆ, ಚರಣ್ ಬ್ಯಾಂಕ್ ಹಿಂಭಾಗ, ಬಸವನಗುಡಿ, ಬೆಂಗಳೂರು	2,005
7	**ಇಮಾನ್ಯುವೆಲ್ ರಾಜು**, ನಂ. 2134/6, ಆನಂದ ನಿಲಯ, ಎಂಸಿಸಿ ಎ ಬ್ಲಾಕ್, ದಾವಣಗೆರೆ	2,000
8	**ಲೀಲಾಧರ್ ಭಂಡಾರಿ**, ಕೋರ್ಟ್ ರಸ್ತೆ, ಬಸವೇಶ್ವರ ನಗರ, ತಾಯಿ ನಿಲಯ, ಶಹಾಪುರ, ಯಾದಗಿರಿ ಜಿಲ್ಲೆ	1,500

ಸಂಗ್ರಹವಾದ ಒಟ್ಟು ಮೊತ್ತ: 1,27,32,928

ರೈತರ ಸಾವು: ಜಂಟಿ ಸಂಸದೀಯ ಸಮಿತಿ ತನಿಖೆಗೆ ಆಗ್ರಹ

ನವದೆಹಲಿ: ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ, ದೆಹಲಿಯ ಗಡಿಗಳಲ್ಲಿ ನಡೆಯುತ್ತಿರುವ ಪ್ರತಿಭಟನೆಯ ಸಂದರ್ಭದಲ್ಲಿ ರೈತರ ಸಾವಿನ ಬಗ್ಗೆ ಜಂಟಿ ಸಂಸದೀಯ ಸಮಿತಿಯ ತನಿಖೆಗೆ ಆಗ್ರಹಿಸಿ, ಎಂಟು ವಿರೋಧ ಪಕ್ಷಗಳ ಮುಖಂಡರು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.

ಅಕಾಲಿ ದಳ, ಶಿವಸೇನಾ, ಬಿಎಸ್‌ಪಿ, ಎನ್‌ಸಿಪಿ, ಸಿಪಿಎಂ, ಸಿಪಿಐ, ಆರ್‌ಎಲ್‌ಪಿ ಹಾಗೂ ನ್ಯಾಷನಲ್ ಕಾನ್ಫರೆನ್ಸ್‌ನ ಮುಖಂಡರು, ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಶನಿವಾರ ಭೇಟಿ ಮಾಡಿ, ಕೃಷಿ ಕಾಯ್ದೆಗಳನ್ನು ಹಿಂದೆಗೆದುಕೊಳ್ಳುವಂತೆ ಆಗ್ರಹಿಸಲಿದ್ದಾರೆ.

ಪ್ರತಿಭಟನೆ ಸಂದರ್ಭದಲ್ಲಿ ರೈತರು ಮೃತಪಟ್ಟ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮಾಹಿತಿ ಇಲ್ಲ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ತೋಮರ್ ಸಂಸತ್ತಿನಲ್ಲಿ ಹೇಳಿಕೆ ನೀಡಿದ್ದರು.

'ಕಿಸಾನ್ ಆಂದೋಲನದಲ್ಲಿ ನೂರಾರು ರೈತರು ಜೀವತೆತ್ತಿರುವ ಬಗ್ಗೆ ದಾಖಲೆಗಳಿದ್ದರೂ ಸಚಿವರ ಹೇಳಿಕೆಯು ದೇಶದ ರೈತರಿಗೆ ಅವಮಾನ ಮಾಡಿದೆ. ಸಚಿವ ತೋಮರ್, ರೈತರ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದ್ದಾರೆ.

ಸಂಸದರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ

‘ರಾಜ್ಯದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದೊಂದಿಗೆ ಕೈಜೋಡಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಸಂಸದರಲ್ಲಿ ಮನವಿ ಮಾಡಿದ್ದಾರೆ.

ಸಂಸತ್‌ನ ಮುಂಗಾರು ಅಧಿವೇಶನದ ಹಿನ್ನೆಲೆಯಲ್ಲಿ, ಇಲ್ಲಿನ ಅಶೋಕ ಹೋಟೆಲ್‌ನಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ರಾಜ್ಯದ ಸಂಸದರ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

‘ನಾನು ಪ್ರತಿ ಬಾರಿ ದೆಹಲಿಗೆ ಬಂದಾಗಲೂ ನಿಮ್ಮ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವೆ. ನೀವೂ ರಾಜ್ಯದ ಸಮಗ್ರ ಅಭಿವೃದ್ಧಿ ನಿಟ್ಟಿನಲ್ಲಿ ನನ್ನ ಕೈ ಬಲಪಡಿಸಬೇಕು’ ಎಂದು ಅವರು ಕೋರಿದರು.

ಕೇಂದ್ರ ಸರ್ಕಾರದಲ್ಲಿ ಬಾಕಿ ಇರುವ ರಾಜ್ಯದ ವಿವಿಧ ಯೋಜನೆಗಳಿಗೆ ಅನುಮತಿ ಪಡೆಯುವ ನಿಟ್ಟಿನಲ್ಲಿ ಸಂಸತ್‌ನ ಉಭಯ ಸದನಗಳಲ್ಲಿ ಧ್ವನಿ ಎತ್ತುವಂತೆಯೂ ಅವರು ಈ ಸಂದರ್ಭ ಸಂಸದರನ್ನು ಆಗ್ರಹಿಸಿದರು.

ಕೇಂದ್ರದ ಯೋಜನೆಗಳ ಅನುಷ್ಠಾನ ಹಾಗೂ ಪತ್ರ ವ್ಯವಹಾರದ ನಿಟ್ಟಿನಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಉನ್ನತ ಮಟ್ಟದ ಸಮಿತಿ ರಚಿಸಿ, ಬೆಂಗಳೂರಿನಲ್ಲಿ ಕಚೇರಿ ಆರಂಭಿಸಲಾಗುತ್ತದೆ. ಈ ಕಚೇರಿ ಮೂಲಕವೇ ಕೇಂದ್ರ ಸರ್ಕಾರದ ಕಚೇರಿಗಳನ್ನು ಸಂಪರ್ಕಿಸಲು ಸೂಚಿಸಲಾಗುವುದು ಎಂದು ಅವರು ತಿಳಿಸಿದರು.

ರಾಜ್ಯಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಆಡಳಿತ ಪಕ್ಷದ ಸಂಸದರಾದ ಪ್ರತಾಪ ಸಿಂಹ, ಶ್ರೀನಿವಾಸ ಪ್ರಸಾದ್ ಗೈರು ಹಾಜರಾಗಿದ್ದರು. ವಿಪಕ್ಷಗಳ ಸಂಸದರಾದ ಎಚ್.ಡಿ. ದೇವೇಗೌಡ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಸುರೇಶ್, ಪ್ರಜ್ವಲ್ ರೇವಣ್ಣ, ಜಿ.ಸಿ. ಚಂದ್ರಶೇಖರ್, ನಾಸಿರ್ ಹುಸೇನ್ ಸಭೆಯಲ್ಲಿ ಪಾಲ್ಗೊಳ್ಳಲಿಲ್ಲ.

ಕೇಂದ್ರದ ಸಚಿವರಾದ ಪ್ರಲ್ಹಾದ್ ಜೋಶಿ, ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ ಖೂಬಾ ಹಾಗೂ ಪಕ್ಷೇತರ ಸಂಸದೆ ಸುಮಲತಾ ಅಂಬರೀಷ್ ಹಾಜರಿದ್ದರು.

ಅಧಿಕಾರಿಗಳ ವಿರುದ್ಧ ದೂರು

ನವದೆಹಲಿ: ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಕೊಂಡಿಯಾಗಿ ಕೆಲಸ ಮಾಡಬೇಕಿರುವ ಕರ್ನಾಟಕ ಭವನದ ಅಧಿಕಾರಿಗಳು ಹಾಗೂ ಹಿರಿಯ ಸಿಬ್ಬಂದಿ ರಾಜ್ಯದ ಅಭಿವೃದ್ಧಿ ನಿಟ್ಟಿನಲ್ಲಿ ಯಾವುದೇ ರೀತಿಯ ಕೆಲಸ ಮಾಡದೆ, ಅಸಹಕಾರ ತೋರುತ್ತಿದ್ದಾರೆ ಎಂದು ರಾಜ್ಯದ ಸಂಸದರು ನೂತನ ಮುಖ್ಯಮಂತ್ರಿ ಎದುರು ದೂರಿದರು.

ರಾಜ್ಯದ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿ, ಜನರ ಬವಣೆ ನೀಗಿಸುವ ನಿಟ್ಟಿನಲ್ಲಿ ಕರ್ನಾಟಕ ಭವನಕ್ಕೆ ನಿಯುಕ್ತಿಗೊಂಡಿರುವ ಹಿರಿಯ ಅಧಿಕಾರಿಗಳು ಯಾವುದೇ ರೀತಿಯಲ್ಲಿ ಸ್ಪಂದಿಸುತ್ತಿಲ್ಲ ಎಂದು ಕೆಲವು ಸಂಸದರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಸಮ್ಮುಖದಲ್ಲೇ ಆರೋಪಿಸಿದರು.

ಕರ್ನಾಟಕ ಭವನದಲ್ಲಿ ಐಎಎಸ್, ಐಎಫ್‌ಎಸ್ ಸೇರಿದಂತೆ ನಾಲ್ವರು ಹಿರಿಯ ಅಧಿಕಾರಿಗಳಿದ್ದಾರೆ. ಕೆಳಹಂತದ ಹತ್ತಾರು ಜನ ಅಧಿಕಾರಿಗಳೂ ಇದ್ದಾರೆ. ಆದರೆ, ರಾಜ್ಯದ ಅಭಿವೃದ್ಧಿ ಕುರಿತು ಸಲ್ಲಿಸಲಾದ ಮನವಿಯು ಯಾವ ಹಂತದಲ್ಲಿದೆ ಎಂಬ ಬಗ್ಗೆ ಅವರು ಗಮನವನ್ನೇ ನೀಡುವುದಿಲ್ಲ ಎಂದು ಅವರು ತರಾಟೆಗೆ ತೆಗೆದುಕೊಂಡರು.

ಕೂಡಲೇ ಈ ಕುರಿತು ಗಮನ ಹರಿಸಬೇಕು ಎಂದೂ ಬೊಮ್ಮಾಯಿ ಅವರು ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಶಂಕರಗೌಡ ಪಾಟೀಲ ಅವರಿಗೆ ಸೂಚಿಸಿದರು.

ರಾಷ್ಟ್ರೀಯ ಯೋಜನೆ ಘೋಷಣೆಗೆ ಮುಖ್ಯಮಂತ್ರಿ ಮನವಿ

ನವದೆಹಲಿ: ಕೇಂದ್ರದ ಅಧಿಕ ಪ್ರಮಾಣದ ಅನುದಾನ ಒದಗಿಸುವ ನಿಟ್ಟಿನಲ್ಲಿ, ರಾಜ್ಯದ ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಎತ್ತಿನಹೊಳೆ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳನ್ನಾಗಿ ಘೋಷಿಸುವಂತೆ ಕೇಂದ್ರದ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೆಖಾವತ್ ಅವರನ್ನು ಮುಖ್ಯಮಂತ್ರಿ ಕೋರಿದರು.

ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಾಣ ಕುರಿತ ಸಮಗ್ರ ಯೋಜನಾ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಎದುರು ಇರುವ ಈ ವರದಿಯನ್ನು ಅನುಮೋದಿಸಿ ಯೋಜನೆಗೆ ಆರ್ಥಿಕ ನೆರವು ನೀಡಬೇಕು. ಕೃಷ್ಣಾ ಮೇಲ್ದಂಡೆ ಯೋಜನೆಗೂ ಅಗತ್ಯ ಅನುದಾನ ನೀಡಬೇಕು ಎಂದು ಇದೇ ವೇಳೆ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಮಹದಾಯಿ ಯೋಜನೆ ಕೈಗೆತ್ತಿಕೊಳ್ಳಲು ಅಗತ್ಯವಿರುವ ಪರಿಸರ ಮತ್ತು ಅರಣ್ಯ ಇಲಾಖೆ ಅನುಮತಿಯನ್ನು ಶೀಘ್ರವೇ ಒದಗಿಸಬೇಕು ಎಂದೂ ಆಗ್ರಹಿಸಲಾಯಿತು.

ಕೋವಿಡ್: ಮತ್ತೆ ಹೆಚ್ಚಿದ ಸೋಂಕು

ನವದೆಹಲಿ: ಕೋವಿಡ್ ಪ್ರಕರಣಗಳಲ್ಲಿ ಮತ್ತೆ ತುಸು ಹೆಚ್ಚಳವಾಗಿದ್ದು, ಶುಕ್ರವಾರ ಬೆಳಿಗ್ಗೆ ಕೊನೆಗೊಂಡಂತೆ 24 ಗಂಟೆ ಅವಧಿಯಲ್ಲಿ 44,230 ಮಂದಿಗೆ ಸೋಂಕು ತಗುಲಿದೆ. 555 ಮಂದಿ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.



ಕಾಣೆಯಾದವರ ಹುಡುಕಾಟ

ಹಿಮಾಚಲ ಪ್ರದೇಶದ ಲಾಹೌಲ್ ಜಿಲ್ಲೆಯಲ್ಲಿ ಪ್ರವಾಹದ ನಂತರ ಕಾಣೆಯಾದ ಜನರ ಶೋಧ ಕಾರ್ಯಾಚರಣೆಯಲ್ಲಿ ಶುಕ್ರವಾರ ತೊಡಗಿದ್ದ ಎನ್‌ಡಿಆರ್‌ಎಫ್ ಸಿಬ್ಬಂದಿ. –ಪಿಟಿಐ– ಚಿತ್ರ

ಬಂತೇ ಕೋವಿಡ್ 3ನೇ ಅಲೆ?

ಒಂದನೇ ಪುಟದಿಂದ

ಶೇ 50ಕ್ಕೂ ಅಧಿಕ ಮಂದಿ ಒಂದು ಡೋಸ್ ಲಸಿಕೆಯನ್ನೂ ಪಡೆದಿಲ್ಲ. ಹೀಗಾಗಿ, ಮೂರನೇ ಅಲೆಯಲ್ಲಿ ಮಕ್ಕಳ ಜತೆಗೆ ವಯಸ್ಕರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಕೇರಳದಿಂದ ಬರುವ ಪ್ರಯಾಣಿಕರಲ್ಲಿ ಕೆಲವರು ಕೋವಿಡ್ ನೆಗೆಟಿವ್ ಪರೀಕ್ಷೆಯ ಪ್ರಮಾಣ ಪತ್ರ ಅಥವಾ ಲಸಿಕೆ ಪಡೆದ ಪ್ರಮಾಣ ಪತ್ರವನ್ನು ಜತೆಗೆ ತರುತ್ತಿಲ್ಲ. ಇದರಿಂದಾಗಿ ಪ್ರತಿನಿತ್ಯ ದಕ್ಷಿಣ ಕನ್ನಡದ ತಲಪಾಡಿ ಚೆಕ್‌ಪೋಸ್ಟ್‌ನಲ್ಲಿ ಅಲ್ಲಿಂದ ಬರುವವರಲ್ಲಿ 150ರಿಂದ 170 ಮಂದಿಯ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ.

‘ನೆರೆ ರಾಜ್ಯಗಳಿಂದ ಇಲ್ಲಿಗೆ ಬರುವ 12 ಪ್ರವೇಶ ಕೇಂದ್ರಗಳಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣಗಳ ಏರಿಳಿತ

ರಾಜ್ಯದಲ್ಲಿ ವಾರದಿಂದ ಕೋವಿಡ್ ಹೊಸ ಪ್ರಕರಣಗಳು ಏರಿಳಿತ ಕಂಡಿದ್ದು, 1,890 ಮಂದಿ ಸೋಂಕಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ.

ಹೊಸ ಪ್ರಕರಣಗಳ ಸಂಖ್ಯೆ ಗುರುವಾರ ಎರಡು ಸಾವಿರದ ಗಡಿ ದಾಟಿತ್ತು. ರಾಜ್ಯದ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 396, ಉಡುಪಿಯಲ್ಲಿ 174, ಮೈಸೂರಿನಲ್ಲಿ 157 ಹಾಗೂ ಹಾಸನದಲ್ಲಿ 136 ಪ್ರಕರಣಗಳು ದೃಢಪಟ್ಟಿತ್ತು. ರಾಜಧಾನಿ ಬೆಂಗಳೂರಿನಲ್ಲಿ 500ರ ಗಡಿ ದಾಟಿತ್ತು. ಶುಕ್ರವಾರ ಶೇ 1.30ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 426, ದಕ್ಷಿಣ ಕನ್ನಡದಲ್ಲಿ 345, ಉಡುಪಿಯಲ್ಲಿ 155, ಮೈಸೂರಿನಲ್ಲಿ 142, ಹಾಸನದಲ್ಲಿ 135 ಹಾಗೂ ಬೆಳಗಾವಿಯಲ್ಲಿ 103 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆಕಂಡಿದೆ.

ಸೋಂಕು ಹೆಚ್ಚಳದ ಶೇಕಡಾವಾರು ಪ್ರಮಾಣ*

ಜಿಲ್ಲೆ/ನಗರ	ಶೇ.ಪ್ರಮಾಣ
ಬೆಂಗಳೂರು	34
ದಕ್ಷಿಣ ಕನ್ನಡ	4.09
ಕೊಡಗು	3.51
ಚಿಕ್ಕಮಗಳೂರು	3.48

*ಜು.29ರ ಅಂಕಿ ಅಂಶ

ಜನತೆಗೆ ಸಂಬಂಧಿಸಿದ ವಿಷಯಗಳ ಚರ್ಚೆಗೆ ಸಿದ್ಧ: ಸಚಿವ ಪ್ರಲ್ಹಾದ ಜೋಶಿ

‘ಪೆಗಾಸಸ್ ಪ್ರಕರಣ ಚರ್ಚಾರ್ಹ ವಿಷಯವಲ್ಲ’

ನವದೆಹಲಿ (ಪಿಟಿಐ): ಪೆಗಾಸಸ್ ಗೂಢಚರ್ಯೆ ಪ್ರಕರಣದ ಬಗ್ಗೆ ಚರ್ಚೆ ನಡೆಯಬೇಕು ಎಂದು ಆಗ್ರಹಿಸಿ ಪ್ರತಿಪಕ್ಷಗಳ ಸದಸ್ಯರು ಶುಕ್ರವಾರವೂ ಸಂಸತ್ತಿನಲ್ಲಿ ಪ್ರತಿಭಟನೆ ಮುಂದುವರಿಸಿದವು. ಆದರೆ, ಇದು ಚರ್ಚಾರ್ಹ ಹಾಗೂ ಗಂಭೀರ ವಿಷಯವೇ ಅಲ್ಲ ಎಂದು ಸರ್ಕಾರ ಹೇಳಿದೆ.

ಜನರಿಗೆ ಸಂಬಂಧಿಸಿದ ಸಾಕಷ್ಟು ವಿಷಯಗಳ ಚರ್ಚೆಯಾಗಬೇಕಿದ್ದು, ಅವುಗಳ ಬಗ್ಗೆ ಗಮನ ನೀಡುವಂತೆ ಹೇಳಿದೆ.

ಸತತ ಪ್ರತಿಭಟನೆಯಿಂದಾಗಿ ಸಂಸತ್ತಿನ ಕಲಾಪ ನಡೆಯದೇ ಇರುವುದಕ್ಕೆ ಬೇಸರ ವ್ಯಕ್ತಪಡಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಪೆಗಾಸಸ್ ವಿವಾದವು ಇಲ್ಲಿ ಚರ್ಚೆಯಾಗಬೇಕಾದಂತಹ ಗಂಭೀರ ವಿಷಯವಲ್ಲ. ಸರ್ಕಾರವು, ಜನರಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಸಿದ್ಧವಿದ್ದು, ಪ್ರತಿಭಟನೆ ಕೈಬಿಟ್ಟು ಕಲಾಪ ನಡೆಯಲು ಅವಕಾಶ ಮಾಡಿಕೊಡಬೇಕು ಎಂದು ಹೇಳಿದರು.

ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಎರಡೂ ಸದನಗಳಲ್ಲಿ ಹೇಳಿಕೆ ನೀಡಿದ್ದಾರೆ. ಆದರೂ ಪ್ರತಿಪಕ್ಷಗಳು ಕಲಾಪಕ್ಕೆ ಅಡ್ಡಿ ಮಾಡುತ್ತಿರುವುದು ‘ದುರದೃಷ್ಟಕರ’ ಎಂದರು.

ಕಲಾಪ ಆರಂಭವಾದಾಗ, ಕೆಲವು ವಿಷಯ ಪ್ರಸ್ತಾಪಕ್ಕೆ ಮುಂದಾದ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರಿಗೆ ಅನುಮತಿ ಸಿಗಲಿಲ್ಲ. ಪ್ರಶ್ನೋತ್ತರ ವೇಳೆಯು ಪ್ರತಿಭಟನೆಯ ಗದ್ದಲದಲ್ಲಿಯೇ ಮುಗಿದು ಹೋಯಿತು.

ಸಭಾಧ್ಯಕ್ಷ ಸ್ಥಾನದಲ್ಲಿದ್ದ ರಾಜೇಂದ್ರ ಅಗರ್‌ವಾಲ್, ಕೋವಿಡ್–19 ಪರಿಸ್ಥಿತಿಗೆ ಸಂಬಂಧಿಸಿ ಚರ್ಚೆ ಆರಂಭಿಸುತ್ತಿದ್ದು, ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳುವಂತೆ ಪ್ರತಿಭಟನೆನಿರತ ಸದಸ್ಯರಿಗೆ ಮನವಿ ಮಾಡಿದರು. ಸರ್ಕಾರದ ವಿರುದ್ಧ ಘೋಷಣೆ ಮುಂದುವರಿದಿದ್ದರಿಂದ ಕಲಾಪವನ್ನು ಸೋಮವಾರಕ್ಕೆ (ಆಗಸ್ಟ್ 2) ಮುಂದೂಡಲಾಯಿತು.

ವೆಂಕಯ್ಯ ಅಸಮಾಧಾನ

ಪ್ರತಿಭಟನೆಯ ಹೆಸರಿನಲ್ಲಿ ಕೆಲವು ಸಂಸದರು ನಡೆದುಕೊಂಡ ರೀತಿಗೆ ಅಸಮಾಧಾನ ವ್ಯಕ್ತಪಡಿಸಿರುವ ರಾಜ್ಯಸಭೆಯ ಸಭಾಪತಿ ಎಂ.ವೆಂಕಯ್ಯ ನಾಯ್ಡು, ‘ಕೆಲವರ ವರ್ತನೆ ಸಂಸತ್ತಿನ ಘನತೆಗೆ ಚ್ಯುತಿ ತರುತ್ತಿದ್ದು, ಸದನದ ಸಹನೆಯನ್ನು ಪರೀಕ್ಷಿಸಲು ಮುಂದಾಗಬಾರದು’ ಎಂದು ಎಚ್ಚರಿಸಿದರು.

ಮೂರು ಮಸೂದೆ ಮಂಡನೆ

ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ ಸರ್ಕಾರದ ಷೇರುಗಳನ್ನು ಕಡಿತಗೊಳಿಸಲು ಅವಕಾಶ ನೀಡುವುದಕ್ಕಾಗಿ, ಸಾಮಾನ್ಯ ವಿಮೆ ವ್ಯವಹಾರ (ರಾಷ್ಟ್ರೀಕರಣ) ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು. ಈ ಬಗ್ಗೆ ಸ್ಪಷ್ಟನೆ ನೀಡಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಇದು ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳ ಖಾಸಗೀಕರಣಕ್ಕೆ ದಾರಿಯಾಗುವುದಿಲ್ಲ ಎಂದಿದ್ದಾರೆ.

ರಾಷ್ಟ್ರದ ರಾಜಧಾನಿ ಪ್ರದೇಶ ಹಾಗೂ ಸುತ್ತಲಿನ ನಗರಗಳ ವಾಯು ಗುಣಮಟ್ಟ ನಿರ್ವಹಣೆ ಆಯೋಗ ಮಸೂದೆ–2021 ಹಾಗೂ ಸಾಮಾನ್ಯ ವಿಮೆ ವ್ಯವಹಾರ (ರಾಷ್ಟ್ರೀಕರಣ) ತಿದ್ದುಪಡಿ ವಿಧೇಯಕವನ್ನೂ ಮಂಡಿಸಲಾಯಿತು.

ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (ತಿದ್ದುಪಡಿ) ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಯಿತು.

ಸಂಕ್ಷಿಪ್ತ ಸುದ್ದಿ

‘ಗುರುತು ಚೀಟಿ ಇಲ್ಲದವರಿಗೂ ಲಸಿಕೆ’

ನವದೆಹಲಿ (ಪಿಟಿಐ): ಭಾವಚಿತ್ರವುಳ್ಳ ಗುರುತಿನ ಚೀಟಿಯ ದಾಖಲೆಯು ಇಲ್ಲದಿದ್ದ 3.83 ಲಕ್ಷಕ್ಕೂ ಅಧಿಕ ಜನರಿಗೆ ಕೋ-ವಿನ್ ಮೂಲಕ ಜುಲೈ 26ರವರೆಗೆ ಲಸಿಕೆ ನೀಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ತಿಳಿಸಿದ್ದಾರೆ.

ಭಾರತದಲ್ಲಿ ಲಸಿಕೆ ಪಡೆದಿರುವ ಎಲ್ಲ ಫಲಾನುಭವಿಗಳು ಕೋ-ವಿನ್ ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ ಎಂದು ಲೋಕಸಭೆಯಲ್ಲಿ ಶುಕ್ರವಾರ ನೀಡಿದ ಲಿಖಿತ ಉತ್ತರದಲ್ಲಿ ಅವರು ಹೇಳಿದ್ದಾರೆ.

ಫೋಟೊ ಗುರುತಿನ ಚೀಟಿ ಇಲ್ಲದವರಿಗೆ ಲಸಿಕೆ ನೀಡಲು ಸರ್ಕಾರ ಮಾರ್ಗಸೂಚಿ ಹೊರಡಿಸಿತ್ತು. ಡಿಜಿಟಲ್ ತಂತ್ರಜ್ಞಾನದ ಸೌಲಭ್ಯವಿರದ ಜನರು ಕೋವಿಡ್ ಲಸಿಕೆ ಕೇಂದ್ರದಲ್ಲಿಯೇ ಹೆಸರು ನೋಂದಣಿ ಮಾಡಿಸಬಹುದಿತ್ತು ಎಂದು ಅವರು ತಿಳಿಸಿದ್ದಾರೆ.

ಹೇಳಿಕೆ ಹಿಂಪಡೆದ ಸಾವಂತ್

ಪಣಜಿ (ಪಿಟಿಐ): ಬಾಲಕಿಯರ ಮೇಲಿನ ಸಾಮೂಹಿಕ ಅತ್ಯಾಚಾರದ ಕುರಿತು ನೀಡಿದ ಹೇಳಿಕೆಗೆ ತೀವ್ರ ಟೀಕೆಗಳು ವ್ಯಕ್ತವಾಗಿದ್ದರಿಂದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಆ ಹೇಳಿಕೆಯನ್ನು ಹಿಂದಕ್ಕೆ ಪಡೆದಿದ್ದಾರೆ. ಇದೇ ವೇಳೆ ‘ಅಪ್ರಾಪ್ತರ ಸುರಕ್ಷತೆಯ ಜವಾಬ್ದಾರಿ ಎಲ್ಲರಿಗೂ ಸೇರಿದೆ’ ಎಂದು ಅವರು ಹೇಳಿದ್ದಾರೆ.

‘ಈ ಘಟನೆಯಿಂದ ನನಗೆ ತೀವ್ರ ನೋವುಂಟಾಗಿದೆ. ಪ್ರಕರಣದ ಆರೋಪಿಗಳು ಕಾನೂನಿನಡಿಯಲ್ಲಿ ಅತ್ಯಂತ ಕಠಿಣ ಶಿಕ್ಷೆಗೆ ಗುರಿಯಾಗುತ್ತಾರೆ’ ಎಂದು ಅವರು ತಿಳಿಸಿದ್ದಾರೆ.

ನ್ಯಾಯಾಧೀಶರ ಹತ್ಯೆ; ವರದಿಗೆ ಸೂಚನೆ

ನವದೆಹಲಿ: ಧನಬಾದ್ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಉತ್ತಮ್ ಆನಂದ್ ಹತ್ಯೆ ಬಗ್ಗೆ ವಾರದೊಳಗೆ ವಸ್ತುಸ್ಥಿತಿಯ ವರದಿ ಸಲ್ಲಿಸುವಂತೆ ಜಾರ್ಖಂಡ್ ಮುಖ್ಯ ಕಾರ್ಯದರ್ಶಿ ಮತ್ತು ಡಿಜಿಪಿಗೆ ಸುಪ್ರೀಂಕೋರ್ಟ್ ಶುಕ್ರವಾರ ಸೂಚನೆ ನೀಡಿದೆ.

‘ಈ ಪ್ರಕರಣದ ತನಿಖೆಯ ಮೇಲುಸ್ತುವಾರಿಯನ್ನು ಜಾರ್ಖಂಡ್ ಹೈಕೋರ್ಟ್ ವಹಿಸಲಿದೆ. ದೇಶದಾದ್ಯಂತ ನ್ಯಾಯಾಂಗ ಅಧಿಕಾರಿಗಳ ಮೇಲೆ ದಾಳಿಗಳು ಹೆಚ್ಚಾಗುತ್ತಿವೆ ಎಂಬುದನ್ನು ಪೀಠ ಗಮನಿಸಿದೆ. ಈ ಪ್ರಕರಣದ ಬಗ್ಗೆ ವಿಸ್ತೃತ ಪರಿಶೀಲನೆಯ ಅಗತ್ಯವಿದೆ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಹೇಳಿದೆ.

‘ಹತ್ಯೆ ಹಿನ್ನೆಲೆಯಲ್ಲಿ ಎಲ್ಲ ರಾಜ್ಯಗಳಿಗೂ ನೋಟಿಸ್ ನೀಡಲಾಗಿದೆ. ಮುಂದಿನ ವಿಚಾರಣೆ ವೇಳೆ ಜಾರ್ಖಂಡ್‌ನ ಅಡ್ವೊಕೇಟ್ ಜನರಲ್ ಅವರು ನ್ಯಾಯಾಲಯದಲ್ಲಿ ಹಾಜರಿರಬೇಕು ಎಂದು ಪೀಠ ಹೇಳಿದೆ.

ಉತ್ತಮ್ ಆನಂದ್ ಅವರು ಬುಧವಾರ ಜಡ್ಜಸ್ ಕಾಲೊನಿ ಬಳಿ ವಾಯುವಿಹಾರಕ್ಕೆ ತೆರಳಿದ್ದಾಗ ವಾಹನ ಗುದ್ದಿಸಿ ಹತ್ಯೆ ಮಾಡಲಾಗಿತ್ತು.

‘ಲವ್ಲಿ’ ಪಂಚ್‌ಗೆ ಚಿನ್ ಚೆನ್ ಚಿತ್

ಮಾಜಿ ವಿಶ್ವ ಚಾಂಪಿಯನ್ ಎದುರು ಜಯ; 60 ಕೆಜಿ: ಸಿಮ್ರನ್‌ಜೀತ್ ಕೌರ್‌ಗೆ ನಿರಾಸೆ

ಟೋಕಿಯೊ (ಪಿಟಿಐ): ಅಸ್ಸಾಂನ ಲವ್ಲಿನಾ ಬೊರ್ಗೊಹೈನ್ ಪದಾರ್ಪಣೆಯ ಒಲಿಂಪಿಕ್ಸ್‌ನಲ್ಲೇ ಅಮೋಘ ಸಾಧನೆ ಮಾಡಿದ್ದಾರೆ. ಮಹಿಳೆಯರ ಬಾಕ್ಸಿಂಗ್‌ನಲ್ಲಿ ಅವರು ಸೆಮಿಫೈನಲ್ ಪ್ರವೇಶಿಸಿದ್ದಾರೆ. ಶುಕ್ರವಾರ ನಡೆದ 69 ಕೆಜಿ ವಿಭಾಗದ ಸ್ಪರ್ಧೆಯಲ್ಲಿ ಮಾಜಿ ವಿಶ್ವ ಚಾಂಪಿಯನ್, ಚೀನಾ ತೈಪೆಯ ನೀನ್ ಚಿನ್ ಚೆನ್ ಎದುರು ಲವ್ಲಿನಾ ಭರ್ಜರಿ ಗೆಲುವು ದಾಖಲಿಸಿದರು.

23 ವರ್ಷದ ಭಾರತದ ಬಾಕ್ಸರ್ 4–1ರಿಂದ ಎದುರಾಳಿಯನ್ನು ಮಣಿಸಿದರು. ಅಂತಿಮ ನಾಲ್ಕರ ಘಟ್ಟದಲ್ಲಿ ಅವರು ಹಾಲಿ ವಿಶ್ವ ಚಾಂಪಿಯನ್ ಟರ್ಕಿಯ ಬುಸೆನಾಜ್ ಸುರ್ಮೆನಲಿ ವಿರುದ್ಧ ಸೆಣಸುವರು. ಉಕ್ರೇನ್‌ನ ಅನಾ ಲೈಜೆಂಕೊ ವಿರುದ್ಧ ಗೆದ್ದು ಟರ್ಕಿಯ ಬಾಕ್ಸರ್ ಸೆಮಿಫೈನಲ್ ಹಂತ ಪ್ರವೇಶಿಸಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿ ಕಂಚಿನ ಪದಕ ಗೆದ್ದಿರುವ ಲವ್ಲಿನಾ ಬಲಶಾಲಿ ಪಂಚ್‌ಗಳೊಂದಿಗೆ ಎದುರಾಳಿಯನ್ನು ಕಂಗೆಡಿಸಿದರು. ಆಕ್ರಮಣಕಾರಿ ಆಟದ ಜೊತೆಯಲ್ಲಿ ತಾಳ್ಮೆಯ ರಕ್ಷಣಾ ತಂತ್ರಗಳನ್ನು ಕೂಡ ಪ್ರಯೋಗಿಸಿದ ಅವರು ಅವಕಾಶಗಳನ್ನು ಸೃಷ್ಟಿಸಿಕೊಂಡು ಪಾಯಿಂಟ್‌ಗಳನ್ನು ಕಲೆ ಹಾಕಿದರು.

ಬಾಕ್ಸಿಂಗ್‌ನಲ್ಲಿ ಭಾರತಕ್ಕೆ ಮೊದಲ ಪದಕ ಲಭಿಸಿದ್ದು 2008ರಲ್ಲಿ. ವಿಜೇಂದರ್ ಸಿಂಗ್ ಆ ವರ್ಷ ಕಂಚಿನ ಪದಕ ಗೆದ್ದುಕೊಂಡಿದ್ದರು. 2012ರಲ್ಲಿ ಎಂ.ಸಿ.ಮೇರಿ ಕೋಮ್ ಕಂಚಿನ ಪದಕ ಗಳಿಸಿದ್ದರು. ಆಗಸ್ಟ್ ನಾಲ್ಕರಂದು ನಡೆಯುವ ಸೆಮಿಫೈನಲ್‌ನಲ್ಲಿ ಜಯ ಸಾಧಿಸಿದರೆ ಬಾಕ್ಸಿಂಗ್‌ನಲ್ಲಿ ಭಾರತದ ಗರಿಷ್ಠ ಸಾಧನೆ ಮಾಡುವ ಅವಕಾಶ ಅವರಿಗೆ ಲಭಿಸಲಿದೆ.

ಶುಕ್ರವಾರ 60 ಕೆಜಿ ವಿಭಾಗದ ಬೌಟ್‌ನಲ್ಲಿ ಸಿಮ್ರನ್‌ಜೀತ್ ಕೌರ್ ನೀರಸ ಆಟವಾಡಿ ಥಾಯ್ಲೆಂಡ್‌ನ ಸುದಾಪರ್ನ್ ಸೀಸೊಂಡಿಗೆ 0–5ರಲ್ಲಿ ಮಣಿದರು.

ಆರಂಭದಲ್ಲಿ ಉತ್ತಮ ಆರಂಭ ಕಂಡ ಸಿಮ್ರನ್‌ಜೀತ್ ಗೆಲುವು ಸಾಧಿಸುವ ಭರವಸೆ ಮೂಡಿಸಿದ್ದರು. ಆದರೆ ನಂತರ ಎದುರಾಳಿಯ ಪ್ರತಿದಾಳಿಗೆ ಕಂಗೆಟ್ಟರು.

ಬಾಕ್ಸಿಂಗ್ ಕಣಕ್ಕೆ ಬಂದ ಕಿಕ್ ಬಾಕ್ಸರ್

ಕಿಕ್ ಬಾಕ್ಸಿಂಗ್‌ನಲ್ಲಿ ಮಿಂಚುತ್ತಿದ್ದ ಲವ್ಲಿನಾ ಅವರನ್ನು ಬಾಕ್ಸಿಂಗ್ ಕಣಕ್ಕೆ ಕರೆದುಕೊಂಡು ಬಂದವರು ಭಾರತ ಕ್ರೀಡಾ ಪ್ರಾಧಿಕಾರದ ಕೋಚ್ ಪದಮ್ ಬೋರೊ. ಅಸ್ಸಾಂನ ಗೊಲಾಘಟ್ ಜಿಲ್ಲೆಯ ಮುಖಿಯಾ ಗ್ರಾಮದ ನಿವಾಸಿ ಲವ್ಲಿನಾ ಅವರ ಸಹೋದರಿಯರಾದ ಲಿಚಾ ಮತ್ತು ಲೀಮಾ ಅವರು ಕಿಕ್ ಬಾಕ್ಸಿಂಗ್ ಮಾಡುತ್ತಿದ್ದರು. ಪಾಲಕರಿಂದ ಅವರಿಗೆ ಉತ್ತಮ ಬೆಂಬಲವೂ ಸಿಗುತ್ತಿತ್ತು. ಸಹೋದರಿಯರ ಜೊತೆ ತಾವೂ ‘ಕಿಕ್’ ಮಾಡಲು ಹೋಗುತ್ತಿದ್ದರು.



ಸ್ಕೋರ್ ವಿವರ
ಲವ್ಲಿನಾ 4
ಚಿನ್ ಚೆನ್ 1

ಲವ್ಲಿನಾ ಬೊರ್ಗೊಹೈನ್ –ರಾಯಿಟರ್ಸ್ ಚಿತ್ರ

ಸೋತರೆ ಕಂಚಿನ ಪದಕ

ಸೆಮಿಫೈನಲ್ ಬೌಟ್‌ನಲ್ಲಿ ಸೋತರೂ ಲವ್ಲಿನಾಗೆ ಕಂಚಿನ ಪದಕ ಸಿಗಲಿದೆ. ಬಾಕ್ಸಿಂಗ್‌ನಲ್ಲಿ ಒಟ್ಟು ನಾಲ್ಕು ಪದಕಗಳನ್ನು ನೀಡಲಾಗುತ್ತದೆ. ಫೈನಲ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ನಿರ್ಧಾರವಾದರೆ, ಸೆಮಿಫೈನಲ್‌ನಲ್ಲಿ ಸೋತ ಇಬ್ಬರಿಗೂ ಕಂಚಿನ ಪದಕ ನೀಡಲಾಗುತ್ತದೆ.

ಎದುರಾಳಿಗೆ ಹೆದರಲಿಲ್ಲ

‘ಎದುರಾಳಿ ಮಾಜಿ ವಿಶ್ವ ಚಾಂಪಿಯನ್ ಆಗಿದ್ದರೂ ನಾನು ಯಾವುದೇ ಯೋಜನೆಯೊಂದಿಗೆ ಕಣಕ್ಕೆ ಇಳಿದಿರಲಿಲ್ಲ. ಆಕೆಯ ಎದುರು ಈ ಹಿಂದೆ ನಾಲ್ಕು ಬಾರಿ ಸೋತಿದ್ದೆ. ಪ್ರತೀಕಾರ ತೀರಿಸುವ ಆಸೆ ಮನದಲ್ಲಿತ್ತು. ಆದ್ದರಿಂದ ನಿರಾತಂಕವಾಗಿ ಆಡಿದೆ’ ಎಂದು ಲವ್ಲಿನಾ ಹೇಳಿದರು.



ಸಿಮ್ರನ್‌ಜೀತ್ ಕೌರ್ –ಪಿಟಿಐ ಚಿತ್ರ

ಸ್ಪರ್ಧಾ ಸಮಯ

ಸಮಯ	ಸ್ಪರ್ಧೆ
ಆರ್ಚರಿ	
ಬೆಳಿಗ್ಗೆ 7.18	ಪುರುಷರ ವೈಯಕ್ತಿಕ ವಿಭಾಗದ ಕ್ವಾರ್ಟರ್‌ಫೈನಲ್ (ಅತನು ದಾಸ್)
ಮಧ್ಯಾಹ್ನ 1.15	ಪುರುಷರ ವೈಯಕ್ತಿಕ ವಿಭಾಗದ ಫೈನಲ್
ಅಥ್ಲೆಟಿಕ್ಸ್	
ಬೆಳಿಗ್ಗೆ 5.30	ಮಹಿಳೆಯರ 400 ಮೀ. ಹರ್ಡಲ್ಸ್ ಹೀಟ್ಸ್
ಬೆಳಿಗ್ಗೆ 6ರಿಂದ	ಮಹಿಳಾ ಡಿಸ್ಕಸ್ ಥ್ರೊ ಅರ್ಹತಾ ಸುತ್ತುಗಳು (ಸೀಮಾ ಪುನಿಯಾ, ಕಮಲ್‌ಪ್ರೀತ್ ಕೌರ್)
ಬೆಳಿಗ್ಗೆ 6.10	ಪುರುಷರ ಪೋಲ್ ವಾಲ್ಟ್ ಅರ್ಹತಾ ಸುತ್ತು
ಬೆಳಿಗ್ಗೆ 6.20	ಪುರುಷರ 800 ಮೀ. ಹೀಟ್ಸ್
ಬೆಳಿಗ್ಗೆ 7.15	ಮಹಿಳೆಯರ 100 ಮೀ. ಹರ್ಡಲ್ಸ್ ಹೀಟ್ಸ್
ಮಧ್ಯಾಹ್ನ 3.40	ಪುರುಷರ ಲಾಂಗ್ ಜಂಪ್ ಅರ್ಹತಾ ಸುತ್ತು (ಎಂ. ಶ್ರೀಶಂಕರ್)
ಸಂಜೆ 4.45	ಪುರುಷರ ಡಿಸ್ಕಸ್ ಥ್ರೊ ಫೈನಲ್
ಸಂಜೆ 6.05	4X400 ಮೀ. ರಿಲೇ ಫೈನಲ್
ಸಂಜೆ 6.20	ಮಹಿಳೆಯರ 100 ಮೀ. ಫೈನಲ್
ಬ್ಯಾಡ್ಮಿಂಟನ್	
ಬೆಳಿಗ್ಗೆ 5.30	ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ಸ್
ಮಧ್ಯಾಹ್ನ 2.30	ಮಹಿಳಾ ಸಿಂಗಲ್ಸ್ ಸೆಮಿಫೈನಲ್ಸ್ (ಪಿ.ವಿ.ಸಿಂಧು)
ಮಧ್ಯಾಹ್ನ 2.30	ಪುರುಷರ ಡಬಲ್ಸ್ ಫೈನಲ್
ಬಾಕ್ಸಿಂಗ್	
ಬೆಳಿಗ್ಗೆ 7.30	ಪುರುಷರ ಫ್ಲೈವೇಟ್ ಪ್ರಿಕ್ವಾರ್ಟರ್‌ಫೈನಲ್ (ಅಮಿತ್ ಪಂಘಲ್)
ಮಧ್ಯಾಹ್ನ 3.36	ಮಹಿಳೆಯರ ಮಿಡ್ಲ್‌ವೇಟ್ ಕ್ವಾರ್ಟರ್‌ಫೈನಲ್ (ಪೂಜಾರಾಣಿ)
ಈಕ್ವೆಸ್ಟ್ರಿಯನ್	
ಬೆಳಿಗ್ಗೆ 5 ಗಂಟೆ	ತಂಡ ಮತ್ತು ವೈಯಕ್ತಿಕ ವಿಭಾಗದ ಇವೆಂಟಿಂಗ್ ಡ್ರೆಸೆಜ್ (ಫವಾದ್ ಮಿರ್ಜಾ)
ಗಾಲ್ಫ್	
ಬೆಳಿಗ್ಗೆ 4	ಪುರುಷರ ವೈಯಕ್ತಿಕ ಸ್ಟ್ರೋಕ್ ಪ್ಲೇ ಎರಡನೇ ಸುತ್ತು (ಅನಿರ್ಬನ್ ಲಾಹಿರಿ, ಉದಯನ್ ಮಾನೆ)
ಸೇಲಿಂಗ್	
ಬೆಳಿಗ್ಗೆ 8.35	ಪುರುಷರ ಸ್ಕಿಫ್ 49ಇಆರ್ ರೇಸ್ 10 (ಗಣಪತಿ ಚೆಂಗಪ್ಪ, ವರುಣ್ ಠಕ್ಕರ್)
ಶೂಟಿಂಗ್	
ಬೆಳಿಗ್ಗೆ 8.30	ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಅರ್ಹತಾ ಸುತ್ತು (ಅಂಜುಮ್ ಮೌದ್ಗಿಲ್, ತೇಜಸ್ವಿನಿ ಸಾವಂತ್)
ಮಧ್ಯಾಹ್ನ 12.30	ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಫೈನಲ್
ಈಜು	
ಬೆಳಿಗ್ಗೆ 7 ಗಂಟೆ	ಪುರುಷರ 100 ಮೀ. ಬಟರ್‌ಫ್ಲೈ ಫೈನಲ್
ಬೆಳಿಗ್ಗೆ 7.07	ಮಹಿಳೆಯರ 200 ಮೀ. ಬ್ಯಾಕ್‌ಸ್ಟ್ರೋಕ್ ಫೈನಲ್
ಬೆಳಿಗ್ಗೆ 7.16	ಮಹಿಳೆಯರ 800 ಮೀ. ಫ್ರೀಸ್ಟೈಲ್ ಫೈನಲ್
ಬೆಳಿಗ್ಗೆ 8.13	ಪುರುಷರ 4X100 ಮೀ. ಮೆಡ್ಲೆ ರಿಲೇ ಫೈನಲ್
ಹಾಕಿ (ಮಹಿಳಾ ತಂಡ)	
ಬೆಳಿಗ್ಗೆ 8.45	ಭಾರತ–ದಕ್ಷಿಣ ಆಫ್ರಿಕಾ

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ
ಲೈವ್: ಸೋನಿ ನೆಟ್‌ವರ್ಕ್

ಜಿಮ್ನಾಸ್ಟಿಕ್ಸ್: ಚೀನಾ ಪಾರಮ್ಯ


ಟೋಕಿಯೊ (ರಾಯಿಟರ್ಸ್): ಅಮೋಘ ಸಾಮರ್ಥ್ಯ ತೋರಿದ ಚೀನಾ ಸ್ಪರ್ಧಿಗಳು ಟ್ರ್ಯಾಂಪೊಲಿನ್ ಜಿಮ್ನಾಸ್ಟಿಕ್ಸ್‌ನ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಪಾರಮ್ಯ ಮೆರೆದರು.

ಟೋಕಿಯೊ ಕ್ರೀಡಾಕೂಟದಲ್ಲಿ ಈ ವಿಭಾಗದ ಚಿನ್ನ ಮತ್ತು ಬೆಳ್ಳಿ ಪದಕಗಳು ಶುಕ್ರವಾರ ಚೀನಾದ ಪಾಲಾದವು. 56.635 ಸ್ಕೋರ್ ಗಳಿಸಿದ ಜು ಕ್ಷುಯಿಂಗ್ ಚಿನ್ನದ ಪದಕ ತಮ್ಮದಾಗಿಸಿಕೊಂಡರೆ, 56.350 ಪಾಯಿಂಟ್ಸ್ ಕಲೆಹಾಕಿದ 2014ರ ವಿಶ್ವ ಚಾಂಪಿಯನ್ ಲೀ ಲಿಂಗ್‌ಲಿಂಗ್ ಬೆಳ್ಳಿ ಪದಕಕ್ಕೆ ಮುತ್ತಿಟ್ಟರು.

2012 ಹಾಗೂ 2016ರ ಒಲಿಂಪಿಕ್ಸ್‌ಗಳಲ್ಲಿ ಈ ವಿಭಾಗದಲ್ಲಿ ಚಿನ್ನ ಗೆದ್ದಿದ್ದ ಕೆನಡಾದ ರೋಸಿ ಮೆಕ್‌ಲೆನಾನ್ ಅವರ ಹ್ಯಾಟ್ರಿಕ್ ಜಯದ ಕನಸು ಈಡೇರಲಿಲ್ಲ. ಅವರು ಇಲ್ಲಿ ನಾಲ್ಕನೇ ಸ್ಥಾನ ಗಳಿಸಿದರು.

ಗ್ರೇಟ್ ಬ್ರಿಟನ್‌ನ ಬ್ರಿಯೊನಿ ಪಾಜ್ ಕಂಚಿನ ಪದಕಕ್ಕೆ ಸಮಾಧಾನಪಡಬೇಕಾಯಿತು. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಅವರು ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಒಲಿಂಪಿಕ್ಸ್‌ನಲ್ಲಿ ಟ್ರ್ಯಾಂಪೊಲಿನ್ ವಿಭಾಗದಲ್ಲಿ ಜಂಟಿ 11 ಪದಕಗಳನ್ನು ಗೆದ್ದ ದಾಖಲೆಯನ್ನು ಚೀನಾ ಹೊಂದಿದ್ದರೂ, ಮಹಿಳೆ ಅಥವಾ ಪುರುಷರ ವಿಭಾಗದಲ್ಲಿ ಇಬ್ಬರು ‘ಪೋಡಿಯಂ ಫಿನಿಶ್’ ಮಾಡಿದ್ದು ಇದೇ ಮೊದಲು.



ಟ್ರ್ಯಾಂಪೋಲಿನ್ ಜಿಮ್ನಾಸ್ಟಿಕ್ಸ್‌ನ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದ ಚೀನಾದ ಜು ಕ್ಷುಯಿಂಗ್ – ರಾಯಿಟರ್ಸ್ ಚಿತ್ರ

ಪದಕದ ಆಸೆ ಕೈಚೆಲ್ಲಿದ ದೀಪಿಕಾ



ದೀಪಿಕಾ ಕುಮಾರಿ –ಎಎಫ್‌ಪಿ ಚಿತ್ರ

ಟೋಕಿಯೊ (ಪಿಟಿಐ): ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನದಲ್ಲಿರುವ ಭಾರತದ ಆರ್ಚರ್ ದೀಪಿಕಾ ಕುಮಾರಿ ಮೂರನೇ ಬಾರಿಯೂ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಆಸೆ ಕೈಗೂಡದೆ ಮರಳಿದ್ದಾರೆ. ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಅಗ್ರಶ್ರೇಯಾಂಕಿತೆ, ಕೊರಿಯಾದ ಆ್ಯನ್ ಸ್ಯಾನ್‌ಗೆ ನೇರ ಸೆಟ್‌ಗಳಿಂದ ಅವರು ಮಣಿದರು.

ಬೆಳಿಗ್ಗೆ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ರಷ್ಯಾ ಒಲಿಂಪಿಕ್ ಸಮಿತಿಯ ಪೆರೋವ ಸೇನಿಯಾ ಅವರನ್ನು 6–5ರಲ್ಲಿ ಮಣಿಸಿದ್ದ ದೀಪಿಕಾ ಎಂಟರ ಘಟ್ಟದ ಸೆಣಸಾಟದಲ್ಲಿ ಸುಲಭವಾಗಿ ಸೋಲೊಪ್ಪಿಕೊಂಡರು. ಆರಂಭದಲ್ಲೇ 0–2ರ ಹಿನ್ನಡೆ ಕಂಡಿದ್ದ ಅವರಿಗೆ ಚೇತರಿಸಿಕೊಳ್ಳಲು ಆಗಲೇ ಇಲ್ಲ. ಮೂರು ಬಾರಿ 10 ಸ್ಕೋರು ಸಾಧಿಸಿದರೂ ಅಷ್ಟೇ ಬಾರಿ ಏಳು ಸ್ಕೋರು ಗಳಿಸಿದ್ದು ಅವರಿಗೆ ಮುಳುವಾಯಿತು. ಮೊದಲ ಸೆಟ್‌ನಲ್ಲಿ 30 ಸ್ಕೋರು ಕಲೆ ಹಾಕಿದ್ದ ನಂತರ ತಲಾ 26 ಸ್ಕೋರುಗಳೊಂದಿಗೆ ಜಯ ಸಾಧಿಸಿದರು.

ಅಂಕಗಳ ವಿವರ

ಆ್ಯನ್ ಸ್ಯಾನ್	2	4	6	6
ದೀಪಿಕಾ	0	0	0	0

27 ಕೋವಿಡ್ ಪ್ರಕರಣ ಪತ್ತೆ

ಟೋಕಿಯೊ (ಪಿಟಿಐ): ಶುಕ್ರವಾರ ಒಂದೇ ದಿನ 27 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ ಎಂದು ಒಲಿಂಪಿಕ್ಸ್ ಆಯೋಜಕರು ತಿಳಿಸಿದ್ದಾರೆ. ಇದರಲ್ಲಿ ಮೂವರು ಅಥ್ಲೀಟ್‌ಗಳು ಸೇರಿದ್ದಾರೆ. ಕ್ರೀಡಾಕೂಟದಲ್ಲಿ ದಿನವೊಂದರಲ್ಲಿ ದಾಖಲಾದ ಗರಿಷ್ಠ ಪ್ರಕರಣ ಇದು. ಇದರೊಂದಿಗೆ ಸೋಂಕಿಗೆ ಒಳಗಾದವರ ಒಟ್ಟು ಸಂಖ್ಯೆ 220ಕ್ಕೆ ತಲುಪಿದೆ.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	19	10	11	40
ಜಪಾನ್	17	4	7	28
ಅಮೆರಿಕ	14	16	11	41
ಆರ್‌ಒಸಿ*	10	14	10	34
ಆಸ್ಟ್ರೇಲಿಯಾ	9	2	11	22
ಭಾರತ (51ನೇ ಸ್ಥಾನ)	0	1	0	1

* ರಷ್ಯಾದ ಕ್ರೀಡಾಪಟುಗಳು ರಷ್ಯಾ ಒಲಿಂಪಿಕ್ ಸಮಿತಿಯ ಹೆಸರಿನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

‘ಸ್ಫೂರ್ತಿ ಮೆರೆದ ಬೈಲ್ಸ್’

ಟೋಕಿಯೊ (ಎಎಫ್‌ಪಿ): ಖಿನ್ನತೆಯ ನಡುವೆಯೂ ಅತ್ಯುತ್ತಮ ಸಾಧನೆ ಮಾಡಿದ ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಅವರು ಒಲಿಂಪಿಕ್ಸ್‌ನಲ್ಲಿ ಸ್ಫೂರ್ತಿ ಮೆರೆದಿದ್ದಾರೆ ಎಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಮುಖ್ಯಸ್ಥ ಥಾಮಸ್ ಬಾಕ್ ಅವರು ಅಭಿಪ್ರಾಯಪಟ್ಟಿದ್ದಾರೆ.



ಸಿಮೋನ್ ಬೈಲ್ಸ್

ಶುಕ್ರವಾರ ಮಾತನಾಡಿದ ಅವರು ಮಾನಸಿಕವಾಗಿ ಫಿಟ್ ಇಲ್ಲದೇ ಇರುವುದರಿಂದ ಕಣಕ್ಕೆ ಇಳಿಯಲು ಸಾಧ್ಯವಿಲ್ಲ ಎಂದು ಮುಕ್ತವಾಗಿ ಹೇಳುವ ಮೂಲಕ ಬೈಲ್ಸ್ ಅಸಾಮಾನ್ಯ ಧೈರ್ಯ ಪ್ರದರ್ಶಿಸಿದ್ದಾರೆ ಎಂದರು.

ಕೊರೊನಾದಿಂದಾಗಿ ಉಂಟಾಗಿರುವ ವಿಷಮ ಸ್ಥಿತಿಯಿಂದಾಗಿ ಕ್ರೀಡಾಪಟುಗಳು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು ಈ ಬಾರಿ ಒಲಿಂಪಿಕ್ಸ್ ಆರಂಭಕ್ಕೂ ಮೊದಲೇ ಇದು ಚರ್ಚಾ ವಿಷಯವಾಗಿತ್ತು.



ಅಮೆರಿಕದ ಅಲೆಕ್ಸ್ ಮಾರ್ಗನ್ (ಬಲ) ಮತ್ತು ನೆದರ್ಲೆಂಡ್ಸ್‌ನ ಸ್ಟೆಫನಿ ವ್ಯಾನ್ ಡೆರ್ ಚೆಂಡಿಗಾಗಿ ಪೈಪೋಟಿ ನಡೆಸಿದರು –ಎಎಫ್‌ಪಿ ಚಿತ್ರ

ಫುಟ್‌ಬಾಲ್: ಅಮೆರಿಕ ಮಹಿಳಾ ತಂಡದ ಜಯಭೇರಿ

ಟೋಕಿಯೊ: ಮೆಗಾನ್ ರಪಿನೊ ಮತ್ತು ಗೋಲ್‌ಕೀಪರ್ ಅಲಿಸಾ ನಹೆರ್ ಅವರ ಅಮೋಘ ಆಟದ ಬಲದಿಂದ ಅಮೆರಿಕ ಮಹಿಳಾ ತಂಡ ಒಲಿಂಪಿಕ್ಸ್‌ನ ಮಹಿಳಾ ಫುಟ್‌ಬಾಲ್‌ನಲ್ಲಿ ನೆದರ್ಲೆಂಡ್ಸ್ ವಿರುದ್ಧ ಜಯ ಗಳಿಸಿತು. ನಿಗದಿತ ಅವಧಿಯಲ್ಲಿ ಎರಡೂ ತಂಡಗಳು 2–2ರ ಸಮಬಲ ಸಾಧಿಸಿದ್ದವು. ಹೀಗಾಗಿ ಪೆನಾಲ್ಟಿ ಕಿಕ್ ಮೊರೆ ಹೋಗಬೇಕಾಯಿತು. ಅಮೆರಿಕ 4–2ರಲ್ಲಿ ಜಯ ಗಳಿಸಿತು.

18ನೇ ನಿಮಿಷದಲ್ಲಿ ಗೋಲು ಗಳಿಸಿದ ಮೆಡೀಮಾ ಅವರು ನೆದರ್ಲೆಂಡ್ಸ್‌ಗೆ ಮುನ್ನಡೆ ಗಳಿಸಿಕೊಟ್ಟರು. 28ನೇ ನಿಮಿಷದಲ್ಲಿ ಮೀವಿಸ್ ಗೋಲು ಗಳಿಸಿ ಅಮೆರಿಕಕ್ಕೆ ಸಮಬಲ ಗಳಿಸಿಕೊಟ್ಟರು. 31ನೇ ನಿಮಿಷದಲ್ಲಿ ವಿಲಿಯಮ್ಸ್ ಗೋಲಿನೊಂದಿಗೆ ಅಮೆರಿಕ ಮುನ್ನಡೆ ಗಳಿಸಿತು. 54ನೇ ನಿಮಿಷದಲ್ಲಿ ಮೆಡೀಮಾ ಮತ್ತೊಮ್ಮೆ ಮಿಂಚಿದರು. ಸ್ಯಾಮ್ ಕೆರ್ ಗಳಿಸಿದ ಎರಡು ಗೋಲುಗಳ ಬಲದಿಂದ ಬ್ರಿಟನ್ ವಿರುದ್ಧ ಆಸ್ಟ್ರೇಲಿಯಾ 4–3ರ ಜಯ ಸಾಧಿಸಿತು. ಈ ಮೂಲಕ ಸೆಮಿಫೈನಲ್‌ಗೆ ಲಗ್ಗೆ ಇರಿಸಿತು.

20ನೇ ಸ್ಥಾನದಲ್ಲಿ ಲಾಹಿರಿ

ಟೋಕಿಯೊ (ಎಎಫ್‌ಪಿ): ಮೊದಲ ಸುತ್ತಿನಲ್ಲಿ ಉತ್ತರ ಆರಂಭ ಮಾಡಿದ್ದ ಭಾರತದ ಗಾಲ್ಫ್ ಆಟಗಾರ ಅನಿರ್ಬನ್ ಲಾಹಿರಿ ಎರಡನೇ ಸುತ್ತಿನಲ್ಲಿ ಹಿಂದೆ ಬಿದ್ದರು. ಒಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಅಂತ್ಯಕ್ಕೆ ಅವರು ಜಂಟಿ 20ನೇ ಸ್ಥಾನ ಗಳಿಸಿದರು.

ಇಲ್ಲಿನ ಕಸುಮಿಗಾಸೆಕಿ ಗಾಲ್ಫ್ ಅಂಗಣದಲ್ಲಿ ಶುಕ್ರವಾರ ಪ್ರತಿಕೂಲ ಹವಾಮಾನವು ಆಟಗಾರರಿಗೆ ಅಡ್ಡಿಯಾಯಿತು. ಹೀಗಾಗಿ ನಿಗದಿತ ಅವಧಿಗೂ ಮೊದಲೇ ಕೆಲವು ಸ್ಪರ್ಧೆಗಳನ್ನು ಸ್ಥಗಿತಗೊಳಿಸಲಾಯಿತು. ಶನಿವಾರ ಎರಡನೇ ಸುತ್ತಿನ ಈ ಸ್ಪರ್ಧೆಗಳನ್ನು ನಡೆಸಿ ಬಳಿಕ ಮೂರನೇ ಸುತ್ತುಗಳನ್ನು ಆರಂಭಿಸಲಾಗುತ್ತದೆ.

ಉದಯನ್ ಮಾನೆ 57ನೇ ಸ್ಥಾನ ಗಳಿಸಿದರು.



ಅನಿರ್ಬನ್

ಪೋಷಾಕಿನ ಮೇಲೆ ಹೆಸರೇಕಿಲ್ಲ: ಮೇರಿ ಪ್ರಶ್ನೆ

ಟೋಕಿಯೊ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಭಾರತದ ಕೆಲವು ಬಾಕ್ಸರ್‌ಗಳ ಪೋಷಾಕಿನ ಹಿಂಬದಿಯಲ್ಲಿ ಹೆಸರು ಮತ್ತು ದೇಶದ ಮಾಹಿತಿ ಹಾಕುತ್ತಿಲ್ಲ. ಈ ರೀತಿ ಖಾಲಿ ಇಟ್ಟಿರುವುದು ಯಾಕೆ ಎಂದು ಅನುಭವಿ ಬಾಕ್ಸರ್ ಎಂ.ಸಿ. ಮೇರಿ ಕೋಮ್ ಪ್ರಶ್ನಿಸಿದ್ದಾರೆ.

ಗುರುವಾರ ನಡೆದ ಪ್ರೀ ಕ್ವಾರ್ಟರ್‌ಫೈನಲ್‌ನಲ್ಲಿ ಮೇರಿ ಮತ್ತು ಶುಕ್ರವಾರದ ಕ್ವಾರ್ಟರ್‌ಫೈನಲ್‌ನಲ್ಲಿ ಲವ್ಲಿನಾ ಬೊರ್ಗೊಹೈನ್ ಧರಿಸಿದ್ದ ಪೋಷಾಕಿನ ಮೇಲೆ ಅವರ ಮತ್ತು ದೇಶದ ಹೆಸರು ಇರಲಿಲ್ಲ.

‘ಪಂದ್ಯದ ಆರಂಭವಾಗುವ ಐದು ನಿಮಿಷಗಳ ಮೊದಲು ನನಗೆ ರಿಂಗ್ ಡ್ರೆಸ್ ಬದಲಿಸಿ ಬರಲು ಸೂಚಿಸಿದ್ದರು. ಆಗ ನನ್ನ ಹೆಸರು ಘೋಷಿಸಿ ಆಗಿತ್ತು. ಇದು ಯಾಕೆ ಎಂದು ಅರ್ಥವಾಗಲಿಲ್ಲ‘ ಎಂದರು.

ಮೇರಿ 16ರ ಘಟ್ಟದ ಪಂದ್ಯದಲ್ಲಿ 2–3ರಿಂದ ಕೊಲಂಬಿಯಾದ ವೆಲೆನ್ಸಿಯಾ ಎದುರು ಸೋತಿದ್ದರು. ನಿರ್ಣಾಯಕರ ತೀರ್ಪು ಕುರಿತು ಕಿಡಿ ಕಾರಿದ್ದರು.

ಪೋಷಾಕು ಕುರಿತು ಪ್ರತಿಕ್ರಿಯಿಸಿರುವ ಭಾರತ ಬಾಕ್ಸಿಂಗ್ ಹೈಪರ್ಫಾರ್ಮೆನ್ಸ್ ನಿರ್ದೇಶಕ ಸ್ಯಾಂಟಿಯಾಗೊ ನಿವಾ, ‘ತಮ್ಮ ಪೋಷಾಕಿನ ಮೇಲೆ ಆಟಗಾರರು ತಮ್ಮ ಹೆಸರಿನ ಕೊನೆಯ ಭಾಗ ಅಥವಾ ಆರಂಭಿಕ ಭಾಗ ಬರೆಸಿಕೊಳ್ಳಲು ಅವಕಾಶ ಇದೆ. ಪೂರ್ಣ ಹೆಸರು ಹಾಕುವುದಿಲ್ಲ. ಮೇರಿ ಕೋಮ್ ಟೀಶರ್ಟ್‌ನಲ್ಲಿ ಮಾಂಗ್ಟೆ ಅಥವಾ ಕೋಮ್ ಇದ್ದರೆ ನಡೆಯುತ್ತಿತ್ತು. ಆದರೆ ಪೂರ್ಣ ಹೆಸರು ಇತ್ತು. ಲವ್ಲಿನಾ ಅವರದ್ದು ಇದೇ ಸಮಸ್ಯೆ. ಆದರೆ ಅವರಿಗೆ ಸೆಮಿಫೈನಲ್‌ನಲ್ಲಿ ಸೂಕ್ತವಾದ ಟೀಶರ್ಟ್ ನೀಡಲಾಗುತ್ತಿದೆ‘ ಎಂದರು.



ಮೇರಿ ಕೋಮ್

ಮಕಿಯಾನ, ತತಿಯಾನ ಮಿಂಚು

ಟೋಕಿಯೊ (ಪಿಟಿಐ/ರಾಯಿಟರ್ಸ್): ಆಸ್ಟ್ರೇಲಿಯಾದ ಎಮಾ ಮಕಿಯನ್ ಶುಕ್ರವಾರ ಈಜುಕೊಳದಲ್ಲಿ ತಮ್ಮ ಛಾಪು ಮೂಡಿಸಿದರು.

ಮಹಿಳೆಯರ 100 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಚಿನ್ನ ಗೆದ್ದು ಸಂಭ್ರಮಿಸಿದ ಅವರು ನೂತನ ಒಲಿಂಪಿಕ್ ದಾಖಲೆಯನ್ನೂ ತಮ್ಮದಾಗಿಸಿಕೊಂಡರು.

ಹಾಂಗ್‌ಕಾಂಗ್‌ನ ಸಿಯಬನ್ ಹಾಗ್ಗೈ ಮತ್ತು ಮತ್ತು ಆಸ್ಟ್ರೇಲಿಯಾದ ಕೇಟ್ ಕ್ಯಾಂಪ್‌ಬೆಲ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಈ ಕೂಟದಲ್ಲಿ ಇದು ಅವರ ಮೊದಲ ವೈಯಕ್ತಿಕ ಚಿನ್ನದ ಪದಕವಾಗಿದೆ. 4X100 ಮೀಟರ್ಸ್ ಫ್ರೀಸ್ಟೈಲ್ ರಿಲೆಯಲ್ಲಿ ಚಿನ್ನ ಮತ್ತು 100 ಮೀಟರ್ ಬಟರ್‌ಫ್ಲೈ, 4X200 ಮೀ ರಿಲೆಯಲ್ಲಿ ಅವರು ಕಂಚಿನ ಪದಕ ಗಳಿಸಿದ್ದಾರೆ.

‘ಒಲಿಂಪಿಕ್ ಮತ್ತು ವಿಶ್ವ ಕೂಟದಲ್ಲಿ ವೈಯಕ್ತಿಕ ಪ್ರಶಸ್ತಿ ಗೆದ್ದಿರಲಿಲ್ಲ. ಈ ಒಲಿಂಪಿಕ್ ನನಗೆ ವಿಶೇಷ. ಇಲ್ಲಿಯ ವಿಜಯವೇದಿಕೆಯಲ್ಲಿ ನಿಂತುಕೊಳ್ಳುವುದೇ ಹೆಮ್ಮೆಯ ಸಂಗತಿ’ ಎಂದು ಎಮಾ ಸಂತಸ ಹಂಚಿಕೊಂಡರು.

27 ವರ್ಷದ ಎಮಾ ಅವರ ಅಪ್ಪ ಮತ್ತು ಅಣ್ಣ ಇಬ್ಬರೂ ಒಲಿಂಪಿಯನ್ ಈಜುಪಟುಗಳು. ನ್ಯೂಸೌತ್‌ವೇಲ್ಸ್‌ನ ವೊಲ್‌ಗಾಂಗ್‌ನಲ್ಲಿ ನೆಲೆಸಿರುವ ಎಮಾ, ಹೋದ ಬಾರಿ ರಿಯೊದಲ್ಲಿ 4X100 ರಿಲೆ ಚಿನ್ನ ಸೇರಿದಂತೆ ನಾಲ್ಕು ಪದಕ ಜಯಿಸಿದ್ದರು.

ರೈಲೊವ್ ದಾಖಲೆ

ಪುರುಷರ ವಿಭಾಗದಲ್ಲಿ ರಷ್ಯಾ (ಐಒಸಿ ಧ್ವಜದಡಿಯಲ್ಲಿ ಸ್ಪರ್ಧಿಸಿದೆ) ತಂಡದ ಎವಾಗ್ನಿ ರೈಲೊವ್ ನೂತನ ದಾಖಲೆ ನಿರ್ಮಿಸಿದರು. ಅವರು 200 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ 1ನಿಮಿಷ, 53.27 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಸ್ಪರ್ಧೆಯಲ್ಲಿ ಅವರು ಅಮೆರಿಕದ ರಯಾನ್ ಮರ್ಫಿಯನ್ನು ಹಿಂದಿಕ್ಕಿದರು. ಅಮೆರಿಕದ ಕೆಲೆಬ್ ಡ್ರೆಸೆಲ್ ಅವರು ಪುರುಷರ 100 ಮೀಟರ್ ಬಟರ್‌ಫ್ಲೈ ಸೆಮಿಫೈನಲ್‌ನಲ್ಲಿ ದಾಖಲೆ ಬರೆದರು.



ತತಿಯಾನ ಶೂಮೇಕರ್ –ಎಎಫ್‌ಪಿ ಚಿತ್ರ



ಎಮಾ ಮಕಿಯಾನ –ಎಎಫ್‌ಪಿ ಚಿತ್ರ

ಫಲಿತಾಂಶಗಳು

ಮಹಿಳೆಯರು: 100 ಮೀ ಫ್ರೀಸ್ಟೈಲ್: ಎಮಾ ಮಕಿಯಾನ್ (ಆಸ್ಟ್ರೇಲಿಯಾ; 51.96ಸೆ, ದಾಖಲೆ)–1, ಸಿಯಬನ್ ಹಾಗ್ಗೈ (ಹಾಂಗ್‌ಕಾಂಗ್; 52.27ಸೆ)–2, ಕೇಟ್ ಕ್ಯಾಂಪ್‌ಬೆಲ್ (ಆಸ್ಟ್ರೇಲಿಯಾ; 52.52ಸೆ)–3. **200 ಮೀ ಬ್ರೆಸ್ಟ್‌ಸ್ಟ್ರೋಕ್:** ತತಿಯಾನಾ ಶೂಮೇಕರ್ (ದಕ್ಷಿಣ ಆಫ್ರಿಕಾ; 2ನಿ,18.95ಸೆ) –1, ಲಿಲಿ ಕಿಂಗ್ (ಅಮೆರಿಕ; 2ನಿ,20.84ಸೆ)–2, ಆ್ಯನಿ ಲೇಜರ್ (ಅಮೆರಿಕ; 2ನಿ,20.84ಸೆ)–3. **ಪುರುಷರು: 200 ಮೀ ಬ್ಯಾಕ್‌ಸ್ಟ್ರೋಕ್:** ಇವಾಗ್ನಿ ರೈಲೊವ್ (ರಷ್ಯಾ; 1ನಿ,53.27ಸೆ, ದಾಖಲೆ)–1, ರೈನ್ ಮರ್ಫಿ (ಅಮೆರಿಕ;1ನಿ,54.15ಸೆ)–2, ಲೂಕ್ ಗ್ರೀನ್‌ಬ್ಯಾಂಕ್ (ಜರ್ಮನಿ; 1ನಿ,54.72ಸೆ)–3.



ಇವಾಗ್ನಿ –ಎಎಫ್‌ಪಿ ಚಿತ್ರ

ಮಿಶ್ರ ರಿಲೆ ಪದಾರ್ಪಣೆ ಇಂದು

ಒಲಿಂಪಿಕ್ಸ್ ಈಜು ಕ್ರೀಡೆಯಲ್ಲಿ ಇದೇ ಮೊದಲ ಬಾರಿಗೆ ಮಿಶ್ರ ರಿಲೆ ಫೈನಲ್ ಶನಿವಾರ ನಡೆಯಲಿದೆ. 4X100 ಮೀಟರ್ಸ್ ರಿಲೆ ನಡೆಯಲಿದ್ದು, ಪ್ರತಿ ತಂಡದಲ್ಲಿ ಇಬ್ಬರು ಪುರುಷ ಮತ್ತು ಇಬ್ಬರು ಮಹಿಳಾ ಈಜುಪಟುಗಳು ಇರುತ್ತಾರೆ.

ಬ್ಯಾಕ್‌ಸ್ಟ್ರೋಕ್, ಬ್ಯಾಕ್‌ಸ್ಟ್ರೋಕ್, ಬ್ರೆಸ್ಟ್‌ಸ್ಟ್ರೋಕ್, ಬಟರ್‌ಫ್ಲೈ ಮತ್ತು ಫ್ರೀಸ್ಟೈಲ್ ಇದರಲ್ಲಿರಲಿವೆ.

ತತಿಯಾನ ಅಚ್ಚರಿ ಜಯ

ಮಹಿಳೆಯರ 200 ಮೀಟರ್ಸ್ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ದಕ್ಷಿಣ ಆಫ್ರಿಕಾದ ತತಿಯಾನ ಶೂಮೇಕರ್ ಅಚ್ಚರಿಯ ಅಲೆ ಎಬ್ಬಿಸಿದರು. ಅವರು ಅಮೆರಿಕದ ಲಿಲಿ ಕಿಂಗ್ ಅವರನ್ನು ಹಿಂದಿಕ್ಕಿ ಚಿನ್ನದ ಪದಕ ಜಯಿಸಿದರು. ಲಿಲಿ ಬೆಳ್ಳಿ ಮತ್ತು ಆ್ಯನಿ ಲೇಜರ್ ಕಂಚಿನ ಪದಕ ಗಳಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಚೀನಾ ಪ್ರಾಬಲ್ಯ

ಟೋಕಿಯೊ (ರಾಯಿಟರ್ಸ್): ಒಲಿಂಪಿಕ್ಸ್ ಬ್ಯಾಡ್ಮಿಂಟನ್‌ನ ಮಿಶ್ರ ಡಬಲ್ಸ್ ವಿಭಾಗದ ಚಿನ್ನ ಮತ್ತು ಬೆಳ್ಳಿಯ ಪದಕ ಚೀನಾ ದೇಶದ ಪಾಲಾಯಿತು.

ಶುಕ್ರವಾರ ನಡೆದ ಫೈನಲ್‌ನಲ್ಲಿ ವಾಂಗ್ ಯಿಲ್ಯು ಮತ್ತು ಹುವಾಂಗ್ ಡೊಂಗ್‌ಪಿಂಗ್ 21–17, 17–21, 21–19ರಿಂದ ತಮ್ಮದೇ ದೇಶದ ಜೆಂಗ್ ಸಿವೀ ಮತ್ತು ಹುವಾಂಗ್ ಯಾಗಿಯೊಂಗ್ ಅವರನ್ನು ಸೋಲಿಸಿದರು. ಈ ಹಣಾಹಣಿಯಲ್ಲಿ ಪಾಲ್ಗೊಂಡಿದ್ದ ನಾಲ್ವರೂ, ಪ್ರತಿದಿನ ಜೊತೆಯಾಗಿಯೇ ಅಭ್ಯಾಸ ನಡೆಸುತ್ತಾರೆ. ಹೀಗಾಗಿ ಈ ಪಂದ್ಯ ಎಲ್ಲರ ಆಕರ್ಷಣೆಯಾಗಿತ್ತು. 69 ನಿಮಿಷ ನಡೆದ ಈ ಹೋರಾಟದಲ್ಲಿ ಚುರುಕಿನ ಡ್ರಾಪ್, ಆಕರ್ಷಕ ಸ್ಮ್ಯಾಷ್ ಮತ್ತು ದೀರ್ಘ ರ‍್ಯಾಲಿ ಕಂಡುಬಂದಿತು.

ಎರಡನೇ ಸೆಮಿಯಲ್ಲಿ ಚೀನಾ!

ಮಹಿಳಾ ಸಿಂಗಲ್ಸ್‌ನ ಇನ್ನೊಂದು ಸೆಮಿಫೈನಲ್‌ನಲ್ಲಿ ಚೀನಾದ ಇಬ್ಬರು ಆಟಗಾರ್ತಿಯರು ಮುಖಾಮುಖಿಯಾಗಲಿದ್ದಾರೆ.

ಚೆನ್ ಯೂ ಫೀ ಮತ್ತು ಹೀ ಬಿಂಗ್ ಜಿಯಾವೊ ಹಣಾಹಣಿ ನಡೆಸುವರು.



ಪಿ.ವಿ. ಸಿಂಧು ಸಂಭ್ರಮ

ಜಪಾನ್ ಆಟಗಾರ್ತಿಯ ಸವಾಲು ಮೀರಿದ ಭಾರತದ ತಾರೆ: ನಾಲ್ಕರ ಘಟ್ಟದಲ್ಲಿ ಕಠಿಣ ಸವಾಲು

ಸೆಮಿಗೆ ಸಿಂಧು

ಟೋಕಿಯೊ (ಪಿಟಿಐ): ವಿಶ್ವ ಚಾಂಪಿಯನ್ ಪಿ.ವಿ.ಸಿಂಧು ಸತತ ಎರಡು ಒಲಿಂಪಿಕ್ಸ್‌ಗಳಲ್ಲಿ ಸೆಮಿಫೈನಲ್ ಹಂತಕ್ಕೆ ಪ್ರವೇಶಿಸಿದ ಭಾರತದ ಮೊದಲ ಬ್ಯಾಡ್ಮಿಂಟನ್ ಆಟಗಾರ್ತಿಯಾದರು.

ಶುಕ್ರವಾರ ಮುಸಾಶಿನೊ ಫಾರೆಸ್ಟ್ ಪ್ಲಾಜಾದಲ್ಲಿ ನಡೆದ ರೋಚಕ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಸಿಂಧು 21–13, 22–20ರಿಂದ ಆತಿಥೇಯ ದೇಶದ ಅಕಾನೆ ಯಾಮಗುಚಿ ವಿರುದ್ಧ ಜಯಿಸಿದರು.

2016ರ ರಿಯೊ ಒಲಿಂಪಿಕ್ಸ್‌ನ ಬೆಳ್ಳಿ ಪದಕ ವಿಜೇತರಾಗಿರುವ ಸಿಂಧು ಈ ಬಾರಿ ಬಂಗಾರದ ಪದಕ ಜಯಿಸುವ ಭರವಸೆ ಮೂಡಿಸಿದ್ದಾರೆ. ಶನಿವಾರ ಮಧ್ಯಾಹ್ನ ನಡೆಯಲಿರುವ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸಿಂಧುಗೆ ಕಠಿಣ ಪೈಪೋಟಿ ಎದುರಾಗಿದೆ. ಅಗ್ರಶ್ರೇಯಾಂಕದ ಆಟಗಾರ್ತಿ, ಥೈವಾನ್ ದೇಶದ ತೈ ಜು ಯಿಂಗ್ ವಿರುದ್ಧ ಸಿಂಧು ಸೆಣಸಲಿದ್ದಾರೆ.

ಎಂಟರ ಘಟ್ಟದ ಮೊದಲ ಗೇಮ್‌ನಲ್ಲಿ ಸುಲಭ ಜಯ ಸಾಧಿಸಿದ ಹೈದರಾಬಾದ್ ಹುಡುಗಿ, ಎರಡನೇ ಸುತ್ತಿನಲ್ಲಿ ಬಹಳಷ್ಟು ಪ್ರಯಾಸಪಡಬೇಕಾಯಿತು. ಒಟ್ಟು 56 ನಿಮಿಷಗಳ ಪಂದ್ಯದಲ್ಲಿ ಅತ್ಯಂತ ರೋಚಕವಾಗಿದ್ದ ಗೇಮ್‌ನಲ್ಲಿ ಸಿಂಧು ತಮ್ಮ ಅನುಭವ ಮತ್ತು ಶಕ್ತಿಯನ್ನು ಪಣಕ್ಕೊಡ್ಡಿದರು.

‘ಮೊದಲ ಗೇಮ್‌ನಲ್ಲಿ ಸಂಪೂರ್ಣ ನಿಯಂತ್ರಣ ಸಾಧಿಸಿದ್ದೆ. ಆದರೆ, ಎರಡನೇಯದ್ದರಲ್ಲಿ ಅವರು ದಿಟ್ಟ ಪ್ರತಿಕ್ರಿಯೆ ನೀಡಿದರು. ಕೊನೆಯ ಹಂತದಲ್ಲಿ ಲೀಡ್ ನಿರ್ವಹಿಸಿ ಜಯಗಳಿಸಿದೆ’ ಎಂದು ಆರನೇ ಶ್ರೇಯಾಂಕದ ಸಿಂಧು ಹೇಳಿದರು.

ಮೊದಲ ಗೇಮ್ ಆರಂಭದಲ್ಲಿ ಯಾಮಗುಚಿ 2–4ರ ಮುನ್ನಡೆ ಸಾಧಿಸಿದ್ದರು. ಈ ಹಂತದಲ್ಲಿ ಆಕ್ರಮಣಶೀಲ ಆಟವಾಡಿದ ಸಿಂಧು 6–6ಕ್ಕೆ ಸಮಬಲ ಸಾಧಿಸಿ, ಅಲ್ಲಿಂದ ಮುಂದೆ ಸತತ ಮುನ್ನಡೆ ಸಾಧಿಸಿದರು. ಕ್ರಾಸ್‌ಕೋರ್ಟ್ ಸ್ಮ್ಯಾಷ್‌ಗಳ ಆಟ ಗಮನ ಸೆಳೆಯಿತು.

ಆದರೆ ಎರಡನೇ ಗೇಮ್‌ನಲ್ಲಿ ತಮ್ಮ ಲಾಂಗ್ ರ‍್ಯಾಲಿ ಆಟವಾಡಿದ ಯಾಮಗುಚಿ ಸ್ಪರ್ಧೆಯೊಡ್ಡಿದರು. ಈ ಗೇಮ್‌ನ ಅರ್ಧವಿರಾಮಕ್ಕೆ ಸಿಂಧು 11–7ರಿಂದ ಮುಂದಿದ್ದರು. ಆದರೆ ಅದರ ನಂತರದ ಆಟದಲ್ಲಿ ಜಪಾನ್ ಆಟಗಾರ್ತಿ 16–15ರ ಮುನ್ನಡೆ ಸಾಧಿಸಿದರು. 54 ಸ್ಟ್ರೋಕ್‌ಗಳು ವಿನಿಯಮವಾದ ಒಂದೇ ರ‍್ಯಾಲಿಯಲ್ಲಿ ಯಾಮಗುಚಿ ಪಾಯಿಂಟ್ ಪಡೆದರು. ಇಬ್ಬರೂ ಬಹಳಷ್ಟು ಆಯಾಸಗೊಂಡಿದ್ದರು. 18 ಪಾಯಿಂಟ್‌ಗಳ ನಂತರ ತಮ್ಮ ಆಟವನ್ನು ಚುರುಕುಗೊಳಿಸಿದ ಸಿಂಧು ಗೆಲುವಿನ ಕೇಕೆ ಹಾಕಿದರು.

19ನೇ ಬಾರಿ ಇವರು ಮುಖಾಮುಖಿಯಾಗಿದ್ದರು. ಸಿಂಧು 12ನೇ ಸಲ ಗೆದ್ದರು.

23 ಮೊದಲ ಗೇಮ್ ನಡೆದ ಅವಧಿ

33 ಎರಡನೇ ಗೇಮ್‌ನ ಅವಧಿ

21 ಪಂದ್ಯದಲ್ಲಿ ಸಿಂಧು ಸರ್ವ್‌ಗಳ ಮೂಲಕ ಕಲೆಹಾಕಿದ ಪಾಯಿಂಟ್ಸ್.

ಪಂದ್ಯದ ಅವಧಿ
56 ನಿಮಿಷ



ಯಾಮಗುಚಿ ನಿರಾಸೆಯ ಕ್ಷಣ –ರಾಯಿಟರ್ಸ್ ಚಿತ್ರ



ಗೆಲುವಿನ ಖುಷಿಯಲ್ಲಿ ತೈ ಜು ಯಿಂಗ್ –ಎಎಫ್‌ಪಿ ಚಿತ್ರ

ತೈ ಜು ಯಿಂಗ್ ಬಗ್ಗೆ

ಸದ್ಯ ಅಗ್ರಶ್ರೇಯಾಂಕದ ಆಟಗಾರ್ತಿ, ಥೈವಾನ್‌ನ ತೈ ಜು ಯಿಂಗ್ ಕ್ವಾರ್ಟರ್‌ಫೈನಲ್‌ನಲ್ಲಿ 14–21, 21–18, 21–18ರಿಂದ ಥಾಯ್ಲೆಂಡ್‌ನ ರಚನಾಕ್ ಇಂಟನಾನ್ ವಿರುದ್ಧ ಜಯಿಸಿದರು. 27 ವರ್ಷದ ತೈ ಜು ಕ್ರಾಸ್‌ಕೋರ್ಟ್ ಸ್ಮ್ಯಾಷ್ ಮತ್ತು ನೆಟ್ ಡ್ರಾಪ್‌ಗಳಲ್ಲಿ ಪರಿಣತರಾಗಿದ್ದಾರೆ. ದೀರ್ಘ ರ‍್ಯಾಲಿಗಳ ಮೂಲಕ ಎದುರಾಳಿ ಮೇಲೆ ಒತ್ತಡ ಹಾಕಬಲ್ಲರು. ಹೋದ ಮೂರು ಮುಖಾಮುಖಿಗಳಲ್ಲಿ ಸಿಂಧು ಎದುರು ತೈಜು ಮೇಲುಗೈ ಸಾಧಿಸಿದ್ದಾರೆ.

ಬಲಾಬಲ		
	ಮುಖಾಮುಖಿ	20
	ತೈಜು ಜಯ	13
	ಸಿಂಧು ಜಯ	7

ಜೊಕೊವಿಚ್ ಚಿನ್ನದ ಕನಸು ಭಗ್ನ

ಟೋಕಿಯೊ (ಪಿಟಿಐ): ಸರ್ಬಿಯಾದ ನೊವಾಕ್ ಜೊಕೊವಿಚ್‌ಗೆ ಒಲಿಂಪಿಕ್ಸ್ ಚಿನ್ನ ಕೈಗೆಟುಕದಾಗಿದೆ.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಈ ಬಾರಿ ಅವರು ಚಿನ್ನದ ಪದಕ ಗೆದ್ದೇ ಗೆಲ್ಲುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದ ಅಭಿಮಾನಿಗಳಿಗೆ ಶುಕ್ರವಾರ ನಿರಾಸೆ ಕಾಡಿದೆ.


ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ವಿರುದ್ಧದ ಸೆಮಿಫೈನಲ್‌ನಲ್ಲಿ ಸರ್ಬಿಯಾದ ಆಟಗಾರ 6–1, 3–6, 1–6ರಿಂದ ಆಘಾತ ಕಂಡರು. ಇದರೊಂದಿಗೆ ಅವರ ‘ಗೋಲ್ಡನ್ ಗ್ರ್ಯಾನ್‌ಸ್ಲಾಮ್’ ಕನಸೂ ಕಮರಿತು.

ನಾಲ್ಕನೇ ಶ್ರೇಯಾಂಕದ ಆಟಗಾರ ಜ್ವೆರೆವ್ ಎದುರಿನ ಪಂದ್ಯದಲ್ಲಿ ನಿರಾಯಾಸವಾಗಿ ಮೊದಲ ಸೆಟ್ ಜಯಿಸಿದ ಅವರು 45 ನಿಮಿಷ ನಡೆದ ಎರಡನೇ ಸೆಟ್‌ನ ಶುರುವಿನಲ್ಲೂ ಮುನ್ನಡೆ ಹೊಂದಿದ್ದರು. ಹೀಗಾಗಿ ಅವರ ಗೆಲುವು ಸಲೀಸು ಎಂದೇ ಭಾವಿಸಲಾಗಿತ್ತು. ಆದರೆ ಜ್ವೆರೆವ್ ಬಲಿಷ್ಠ ಸರ್ವ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದರು.

ಮೂರನೇ ಹಾಗೂ ನಿರ್ಣಾಯಕ ಸೆಟ್‌ನಲ್ಲಿ ಜೊಕೊವಿಚ್ ಸಂಪೂರ್ಣವಾಗಿ ಮಂಕಾದರು. ಅವರು ಎರಡು ಬಾರಿ ಸರ್ವ್ ಕಳೆದುಕೊಂಡರು.

ಮಿಶ್ರ ಡಬಲ್ಸ್‌ನಲ್ಲೂ ನಿರಾಸೆ: ಮಿಶ್ರ ಡಬಲ್ಸ್‌ನಲ್ಲಿ ನೀನಾ ಸ್ಟೊಜಾನೊವಿಚ್ ಜೊತೆಗೂಡಿ ಕಣಕ್ಕಿಳಿದಿದ್ದ ಜೊಕೊವಿಚ್‌ಗೆ ಸೆಮಿಫೈನಲ್‌ನಲ್ಲಿ ನಿರಾಸೆ ಎದುರಾಯಿತು.

ಜೊಕೊವಿಚ್ ಮತ್ತು ನೀನಾ 6–7, 5–7ರಿಂದ ಅಸ್ಲಾನ್ ಕರಾತ್ಸೆವ್ ಮತ್ತು ಎಲಿನಾ ವೆಸ್ನಿನಾ ಎದುರು ಶರಣಾದರು. ಎರಡು ಕಂಚಿನ ಪದಕಗಳನ್ನು ಗೆಲ್ಲುವ ಅವಕಾಶ ಈಗ ಜೊಕೊವಿಚ್ ಎದುರಿದೆ.



ಪಂದ್ಯ ಜಯಿಸಿದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಅವರನ್ನು ಸರ್ಬಿಯಾದ ಆಟಗಾರ ನೊವಾಕ್ ಜೊಕೊವಿಚ್ (ಬಲ) ಅಭಿನಂದಿಸಿದರು –ಎಎಫ್‌ಪಿ ಚಿತ್ರ

ನವನೀತ್ ಕೌರ್ ಮಿಂಚು

ಟೋಕಿಯೊ: ಗೆಲ್ಲಲೇಬೇಕಾದ ಅನಿವಾರ್ಯತೆಯೊಂದಿಗೆ ಕಣಕ್ಕಿಳಿದಿದ್ದ ಮಹಿಳಾ ತಂಡ ‘ಎ’ ಗುಂಪಿನ ಹೋರಾಟದಲ್ಲಿ 1–0 ಗೋಲಿನಿಂದ ಐರ್ಲೆಂಡ್ ತಂಡವನ್ನು ಸೋಲಿಸಿತು.

57ನೇ ನಿಮಿಷದಲ್ಲಿ ಮಿಂಚಿದ ನವನೀತ್, ಭಾರತದ ಪಾಳಯದಲ್ಲಿ ಸಂಭ್ರಮ ಮೇಳೈಸುವಂತೆ ಮಾಡಿದರು.

ಕ್ವಾರ್ಟರ್ ಲೆಕ್ಕಾಚಾರ

ಭಾರತ ತಂಡ ಎಂಟರ ಘಟ್ಟಕ್ಕೆ ಲಗ್ಗೆ ಇಡಬೇಕಾದರೆ ತನ್ನ ಪಾಲಿನ ಅಂತಿಮ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು ಪರಾಭವಗೊಳಿಸಬೇಕು. ಜೊತೆಗೆ ಐರ್ಲೆಂಡ್ ತಂಡದ ಸೋಲಿಗಾಗಿ ಪ್ರಾರ್ಥಿಸಬೇಕು!

‘ಎ’ ಗುಂಪಿನಲ್ಲಿ ಅಗ್ರ ನಾಲ್ಕು ಸ್ಥಾನ ಪಡೆಯುವ ತಂಡಗಳು ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಗಳಿಸಲಿವೆ. ನೆದರ್ಲೆಂಡ್ಸ್, ಜರ್ಮನಿ ಮತ್ತು ಬ್ರಿಟನ್ ಈಗಾಗಲೇ ಎಂಟರ ಘಟ್ಟ ಪ್ರವೇಶಿಸಿವೆ.

ಇನ್ನೊಂದು ಸ್ಥಾನಕ್ಕಾಗಿ ಐರ್ಲೆಂಡ್ ಮತ್ತು ಭಾರತದ ನಡುವೆ ಪೈಪೋಟಿ ಏರ್ಪಟ್ಟಿದೆ. ಐರ್ಲೆಂಡ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದ್ದು, ಭಾರತ ನಂತರದ ಸ್ಥಾನ ಹೊಂದಿದೆ. ತನ್ನ ಪಾಲಿನ ಕೊನೆಯ ಪಂದ್ಯದಲ್ಲಿ ಐರ್ಲೆಂಡ್, ಬ್ರಿಟನ್ ಎದುರು ಸೆಣಸಲಿದೆ.



ಭಾರತದ ನವನೀತ್ ಕೌರ್ (ಬಿಳಿ ಪೋಷಾಕು) ಹಾಗೂ ಐರ್ಲೆಂಡ್‌ನ ಹನ್ನಾ ಮ್ಯಾಥ್ಯೂ ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಪ್ರಯತ್ನಿಸಿದರು –ರಾಯಿಟರ್ಸ್ ಚಿತ್ರ

ಹಾಕಿ ಅಂಗಳದಲ್ಲಿ ಗೆಲುವಿನ ಸಿಹಿ

ಟೋಕಿಯೊ (ಪಿಟಿಐ): ಹಾಕಿ ಅಂಗಳದಲ್ಲಿ ಭಾರತದ ಪುರುಷರ ಹಾಗೂ ಮಹಿಳೆಯರ ತಂಡಗಳು ಗೆಲುವಿನ ಸಿಹಿ ಸವಿದಿವೆ.

ಈಗಾಗಲೇ ಕ್ವಾರ್ಟರ್ ಫೈನಲ್ ಪ್ರವೇಶಿಸಿರುವ ಮನ್‌ಪ್ರೀತ್ ಸಿಂಗ್ ಸಾರಥ್ಯದ ಪುರುಷರ ತಂಡ ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ 5–3 ಗೋಲುಗಳಿಂದ ಆತಿಥೇಯ ಜಪಾನ್ ತಂಡವನ್ನು ಮಣಿಸಿತು. ಇದರೊಂದಿಗೆ ‘ಎ’ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು.

ಹಿಂದಿನ ಪಂದ್ಯದಲ್ಲಿ ಬಲಿಷ್ಠ ಅರ್ಜೆಂಟೀನಾವನ್ನು ಸೋಲಿಸಿ ವಿಶ್ವಾಸದ ಉತ್ತುಂಗದಲ್ಲಿದ್ದ ಭಾರತ, 13ನೇ ನಿಮಿಷದಲ್ಲೇ ಖಾತೆ ತೆರೆಯಿತು. ಪೆನಾಲ್ಟಿ ಕಾರ್ನರ್‌ನಲ್ಲಿ ಹರ್ಮನ್‌ಪ್ರೀತ್ ಸಿಂಗ್ ಕೈಚಳಕ ತೋರಿದರು.

ಎರಡನೇ ಕ್ವಾರ್ಟರ್‌ನಲ್ಲಿ ಸ್ಟ್ರೈಕರ್ ಗುರ್ಜಂತ್ ಸಿಂಗ್ ಮತ್ತು ಸಿಮ್ರನ್‌ಜೀತ್ ಆಕ್ರಮಣಕಾರಿ ಆಟದ ಮೂಲಕ ಎದುರಾಳಿಗಳ ಮೇಲೆ ಒತ್ತಡ ಹೇರುವ ತಂತ್ರ ಅನುಸರಿಸಿದರು. ಇದರಲ್ಲಿ ಈ ಜೋಡಿ ಯಶಸ್ವಿಯೂ ಆಯಿತು. 17ನೇ ನಿಮಿಷದಲ್ಲಿ ಸಿಮ್ರನ್‌ಜೀತ್ ಬಾರಿಸಿದ ಚೆಂಡನ್ನು ಜಪಾನ್‌ನ ಗೋಲ್‌ಕೀಪರ್ ಯಾಮಸಕಿ ತಡೆದರು. ಮತ್ತೆ ತಮ್ಮತ್ತ ಬಂದ ಚೆಂಡನ್ನು ಸಿಮ್ರನ್‌ಜೀತ್, ಗುರ್ಜಂತ್ ಅವರತ್ತ ವರ್ಗಾಯಿಸಿದರು. ಅದನ್ನು ಗುರ್ಜಂತ್ ಗುರಿ ಮುಟ್ಟಿಸಿ ಸಂಭ್ರಮಿಸಿದರು. ಇದರ ಬೆನ್ನಲ್ಲೇ (19) ಜಪಾನ್ ತಂಡದ ಕೆಂಟಾ ಟನಕಾ ಗೋಲು ಗಳಿಸಿ ಹಿನ್ನಡೆ ತಗ್ಗಿಸಿದರು. ದ್ವಿತೀಯಾರ್ಧದ ಶುರುವಿನಲ್ಲೇ (33) ಆತಿಥೇಯ ತಂಡದ ಆಟಗಾರ ಕೊಟಾ ವತನಬೆ ಮಿಂಚಿದರು. ಹೀಗಾಗಿ ಪಂದ್ಯ 2–2ರಿಂದ ಸಮಬಲಗೊಂಡಿತ್ತು. ಈ ಖುಷಿ ಜಪಾನ್ ಪಾಳಯದಲ್ಲಿ ಹೆಚ್ಚು ಕಾಲ ಉಳಿಯಲು ಭಾರತದ ಶಂಷೇರ್ ಸಿಂಗ್ ಅವಕಾಶ ನೀಡಲಿಲ್ಲ. 34ನೇ ನಿಮಿಷದಲ್ಲಿ ಗೋಲು ಬಾರಿಸಿದ ಅವರು ಭಾರತಕ್ಕೆ ಮತ್ತೆ ಮುನ್ನಡೆ ದೊರಕಿಸಿಕೊಟ್ಟರು. ನೀಲಕಂಠ ಅವರ ಪಾಸ್‌ನಲ್ಲಿ ಶಂಷೇರ್, ಸೊಗಸಾದ ರೀತಿಯಲ್ಲಿ ಚೆಂಡನ್ನು ಗುರಿ ಸೇರಿಸಿದರು.

ಮೂರನೇ ಕ್ವಾರ್ಟರ್‌ನಲ್ಲಿ ಭಾರತಕ್ಕೆ ಮತ್ತೊಂದು ಪೆನಾಲ್ಟಿ ಕಾರ್ನರ್ ಲಭಿಸಿತ್ತು. ಈ ಅವಕಾಶವನ್ನು ಹರ್ಮನ್‌ಪ್ರೀತ್ ಕೈಚೆಲ್ಲಿದರು. 51ನೇ ನಿಮಿಷದಲ್ಲಿ ನೀಲಕಂಠ ಶರ್ಮಾ ಹಾಗೂ 56ನೇ ನಿಮಿಷದಲ್ಲಿ ಗುರ್ಜಂತ್ ಮೋಡಿ ಮಾಡಿ ತಂಡದ ಗೆಲುವನ್ನು ಖಾತರಿಪಡಿಸಿದರು. 59ನೇ ನಿಮಿಷದಲ್ಲಿ ಜಪಾನ್‌ನ ಕಜುಮಾ ಮುರಾತ ಭಾರತದ ರಕ್ಷಣಾಕೋಟೆ ಭೇದಿಸಿ ಗೋಲು ಬಾರಿಸಿದರು. ಇದರಿಂದ ಆತಿಥೇಯರಿಗೆ ಯಾವ ಲಾಭವೂ ಆಗಲಿಲ್ಲ.

ಸೆಲೊಮನ್‌ಗೆ ಚಿನ್ನ; ಅಮೆರಿಕಕ್ಕೆ ಆಘಾತ

ಟೋಕಿಯೊ (ಎಎಫ್‌ಪಿ): ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನ ಮೊದಲ ಚಿನ್ನ ಇಥಿಯೋಪಿಯಾದ ಸೆಲೊಮನ್ ಬರೇಗ ಕೊರಳನ್ನು ಅಲಂಕರಿಸಿತು.

ಶುಕ್ರವಾರ ಸಂಜೆ ನಡೆದ ಪುರುಷರ 10 ಸಾವಿರ ಮೀಟರ್ಸ್ ಓಟದಲ್ಲಿ ಅವರು ಉಗಾಂಡದ ಚೆಪ್ಟೆಗಿ ಜೋಶುವಾ ಮತ್ತು ಕಿಪ್ಲಿಮೊ ಜೇಕಬ್ ಅವರನ್ನು ಹಿಂದಿಕ್ಕಿ ಮೊದಲಿಗರಾದರು. ಚೆಪ್ಟೆಗಿ ಹಾಗೂ ಕಿಪ್ಲಿಮೊ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

ಮೂವರೂ ಓಟಗಾರರ ನಡುವೆ ಆರಂಭದಿಂದಲೇ ಭಾರಿ ಪೈಪೋಟಿ ಇತ್ತು. ಕೊನೆಯ ಲ್ಯಾಪ್‌ನಲ್ಲಿ ವೇಗ ವರ್ಧಿಸಿಕೊಂಡ ಸೆಲೊಮನ್ ಬರೇಗ 27 ನಿಮಿಷ 43.22 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಚೆಪ್ಟೆಗಿ ಮತ್ತು ಕಿಪ್ಲಿಮೊ ಗುರಿ ತಲುಪಲು ಕ್ರಮವಾಗಿ 27 ನಿಮಿಷ 43.63 ಸೆಕೆಂಡು ಮತ್ತು 27 ನಿಮಿಷ 43.88 ಸೆಕೆಂಡು ತೆಗೆದುಕೊಂಡರು.

ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿ ಸೇರ್ಪಡೆಗೊಳಿಸಿರುವ 4x400 ಮಿಶ್ರ ರಿಲೆಯಲ್ಲಿ ಪದಕ ಗೆಲ್ಲುವ ನೆಚ್ಚಿನ ತಂಡ ಎನಿಸಿದ್ದ ಅಮೆರಿಕ ಆಘಾತ ಅನುಭವಿಸಿತು. ಹೀಟ್ಸ್‌ನಲ್ಲಿ ಪೋಲೆಂಡ್ ಅಗ್ರಸ್ಥಾನ ಗಳಿಸಿದರೆ ಅಮೆರಿಕ ಅನರ್ಹಗೊಂಡಿತು. ಎಲಿಜಾ ಗಾಡ್ವಿನ್, ಲೀನಾ ಇರ್ಬಿ, ಟೇಲರ್ ಮ್ಯಾನ್ಸನ್ ಮತ್ತು ಬ್ರೈಸ್ ಡೆಡ್ಮಾನ್ ಅವರನ್ನೊಳಗೊಂಡ ಅಮೆರಿಕ ತಂಡ ಹೀಟ್ಸ್‌ನಲ್ಲಿ ಮೊದಲ ಸ್ಥಾನಗಳಿಸಿತ್ತು. ಬ್ಯಾಟನ್ ಹಸ್ತಾಂತರಿಸುವಾಗ ನಿಯಮ ಉಲ್ಲಂಘಿಸಿದ್ದರಿಂದ ತಂಡವನ್ನು ಅನರ್ಹಗೊಳಿಸಲಾಯಿತು.



ಚಿನ್ನ ಗಳಿಸಿದ ಸೆಲೊಮನ್ ಬರೇಗ ಅಂತಿಮ ಗೆರೆ ದಾಟಿದಾಕ್ಷಣ ಸಂಭ್ರಮಿಸಿದರು. ಬೆಳ್ಳಿ ಗೆದ್ದ ಚೆಪ್ಟೆಗಿ ಜೋಶುವಾ (ಮಧ್ಯ) ಮತ್ತು ಕಂಚಿನ ಪದಕ ಗಳಿಸಿದ ಕಿಪ್ಲಿಮೊ ಜೇಕಬ್ ಇದ್ದಾರೆ –ರಾಯಿಟರ್ಸ್ ಚಿತ್ರ

ಭಾರತಕ್ಕೆ ಮೊದಲ ದಿನವೇ ನಿರಾಸೆ

3000 ಮೀಟರ್ಸ್ ಸ್ಟೀಪಲ್‌ಚೇಸ್‌ನಲ್ಲಿ ಅವಿನಾಶ್ ಸಬ್ಲೆ ತಮ್ಮದೇ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆ ಉತ್ತಮಪಡಿಸಿದ್ದು ಬಿಟ್ಟರೆ ಮೊದಲ ದಿನ ಭಾರತದ ಅಥ್ಲೀಟ್‌ಗಳು ನಿರಾಸೆ ಅನುಭವಿಸಿದರು. ದಾಖಲೆ ಬರೆದರೂ ಫೈನಲ್ ಪ್ರವೇಶಿಸಲು ಸಬ್ಲೆ ವಿಫಲರಾದರು. ಸ್ಪ್ರಿಂಟರ್ ದ್ಯುತಿ ಚಾಂದ್ ನಿರೀಕ್ಷಿತ ಸಾಮರ್ಥ್ಯ ತೋರಲು ಸಾಧ್ಯವಾಗದೆ ವಾಪಸಾದರು.

ಪುರುಷರ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ಎಂ.ಪಿ. ಜಬೀರ್ ವೈಫಲ್ಯ ಕಂಡರೆ 4x400 ಮೀಟರ್ಸ್ ರಿಲೇಯ ಎರಡನೇ ಹೀಟ್ಸ್‌ನಲ್ಲಿ ಭಾರತ ತಂಡ ಕೊನೆಯ ಸ್ಥಾನ ಗಳಿಸಿ ಹೊರಬಿದ್ದಿತು. ಎರಡನೇ ಹೀಟ್ಸ್‌ನಲ್ಲಿ ಸ್ಪರ್ಧಿಸಿದ್ದ ಸಬ್ಲೆ 8 ನಿಮಿಷ 18.12 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಏಳನೆಯವರಾದರು. ಮಾರ್ಚ್‌ನಲ್ಲಿ ನಡೆದಿದ್ದ ಫೆಡರೇಷನ್ ಕಪ್‌ನಲ್ಲಿ ಅವರು 8 ನಿಮಿಷ 20.20 ಸೆಕೆಂಡುಗಳ ಸಾಧನೆ ಮಾಡಿದ್ದರು.

11.17 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ರಾಷ್ಟ್ರೀಯ ದಾಖಲೆ ಬರೆದಿದ್ದ ದ್ಯುತಿ ಚಾಂದ್ ಹೀಟ್ಸ್‌ನಲ್ಲಿ 11.54 ಸೆಕೆಂಡುಗಳಲ್ಲಿ ಗುರಿ ತಲುಪಿ ಏಳನೇ ಹೀಟ್ಸ್‌ನಲ್ಲಿ ಐದನೇ ಸ್ಥಾನ ಹಾಗೂ ಒಟ್ಟಾರೆ 45ನೇ ಸ್ಥಾನಕ್ಕೆ ಕುಸಿದರು. ಜಬೀರ್ 50.77 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಐದನೇ ಹೀಟ್ಸ್‌ನಲ್ಲಿ ಕೊನೆಯವರಾದರು. ಮಿಶ್ರ ರಿಲೇಯಲ್ಲಿ ಮುಹಮ್ಮದ್ ಅನಾಸ್ ಯಾಹಿಯಾ, ರೇವತಿ ವೀರಮಣಿ, ಶುಭಾ ವೆಂಕಟೇಶ್ ಮತ್ತು ಆರೋಕ್ಯ ರಾಜೀವ್ 3 ನಿಮಿಷ 19.93 ಸೆಕೆಂಡುಗಳಲ್ಲಿ ಗುರಿ ತಲುಪಿ ಈ ಋತುವಿನ ಶ್ರೇಷ್ಠ ಸಾಧನೆ ಮಾಡಿದರು. ಆದರೆ ಕೊನೆಯ ಸ್ಥಾನದಲ್ಲಿ ಉಳಿದರು.

ಈಕ್ವೆಸ್ಟ್ರಿಯನ್: 7ನೇ ಸ್ಥಾನದಲ್ಲಿ ಫವಾದ್



ಟೋಕಿಯೊ (ಪಿಟಿಐ): ಬೆಂಗಳೂರಿನ ಫವಾದ್ ಮಿರ್ಜಾ ಒಲಿಂಪಿಕ್ಸ್‌ನಲ್ಲಿ ಶುಕ್ರವಾರ ಆರಂಭವಾದ ಈಕ್ವೆಸ್ಟ್ರಿಯನ್ ಸ್ಪರ್ಧೆಯ ಡ್ರೆಸೆಜ್ ವಿಭಾಗದಲ್ಲಿ ಕಣಕ್ಕಿಳಿದರು.

ಮೊದಲ ದಿನ ನಡೆದ ವೈಯಕ್ತಿಕ ವಿಭಾಗದಲ್ಲಿ ಫವಾದ್, ಸಿನೊರ್ ಮೆಡಿಕಾಟ್ ಅಶ್ವದೊಂದಿಗೆ ಸ್ಪರ್ಧಿಸಿದರು. 21 ರೈಡರ್‌ಗಳ ಪೈಕಿ ಏಳನೇ ಸ್ಥಾನ ಪಡೆದರು. ಅವರ ಖಾತೆಯಲ್ಲಿ ಈಗ 28.00 ಪೆನಾಲ್ಟಿಸ್ ಇವೆ ಎಂದು ಮಿರ್ಜಾ ಅವರು ನೀಡಿರುವ ಮಾಹಿತಿಯನ್ನು ಎಂಬೆಸಿ ಸಮೂಹದ ಪ್ರಕಟಣೆ ತಿಳಿಸಿದೆ.

ಮೊದಲ ದಿನ 42 ರೈಡರ್‌ಗಳು ಭಾಗವಹಿಸಿದ್ದರು. ಶನಿವಾರ ಇನ್ನೂ 21 ರೈಡರ್‌ಗಳು ಸ್ಪರ್ಧಿಸುವರು. ಸದ್ಯ ಒಲಿವರ್ ಟೌನೆಂಡ್ 23.6 ಪೆನಾಲ್ಟಿಗಳೊಂದಿಗೆ ಮೊದಲ ಸ್ಥಾನದಲ್ಲಿದ್ದಾರೆ.

ವಿಟಾಲಿನ ದಾಖಲೆಯ ಸಂಭ್ರಮ

ಟೋಕಿಯೊ (ರಾಯಿಟರ್ಸ್): ರೋಚಕ ಹಣಾಹಣಿಯಲ್ಲಿ ಶೂಟ್‌ಆಫ್ ಮೂಲಕ ಕೊರಿಯಾದ ಎದುರಾಳಿಯನ್ನು ಹಿಂದಿಕ್ಕಿದ ರಷ್ಯಾದ ವಿಟಾಲಿನ ಬಟ್ಸರಸ್ಕಿನ ಅವರು ಒಲಿಂಪಿಕ್ಸ್ ಶೂಟಿಂಗ್‌ನ ಎರಡನೇ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಶುಕ್ರವಾರ ನಡೆದ ಮಹಿಳೆಯರ 25 ಮೀಟರ್ಸ್ ಪಿಸ್ತೂಲು ಸ್ಪರ್ಧೆಯ ಫೈನಲ್‌ನಲ್ಲಿ ಕಿಮ್ ಮಿನ್ ಜಂಗ್ ಅವರನ್ನು ವಿಟಾಲಿನಾ ಮಣಿಸಿದರು. ಒಲಿಂಪಿಕ್ಸ್‌ನ ಒಂದೇ ಆವೃತ್ತಿಯ ಶೂಟಿಂಗ್‌ನಲ್ಲಿ ಮೂರು ಪದಕ ಗೆದ್ದ ಮೊದಲ ಮಹಿಳೆ ಎಂಬ ದಾಖಲೆಯನ್ನೂ ಬರೆದರು.

ಇಬ್ಬರೂ ಶೂಟರ್‌ಗಳು ಒಲಿಂಪಿಕ್ ದಾಖಲೆಯ 38 ಸ್ಕೋರು ಸಂಪಾದಿಸಿದರು. ಹೀಗಾಗಿ ಶೂಟ್ ಆಫ್ ಮೊರೆಹೋಗಲಾಯಿತು. ಈ ಹಂತದಲ್ಲೂ ಜಿದ್ದಾಜಿದ್ದಿಯ ಹೋರಾಟ ಕಂಡುಬಂತು. ಆದರೆ ರಷ್ಯಾ ಶೂಟರ್ ಪದಕ ಗೆದ್ದು ಸಂಭ್ರಮಿಸಿದರು. ಚೀನಾದ ಕ್ಸಿಯಾವೊ ಜಿಯಾರುಕ್ಸುವಾನ್ ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಂಡರು. ವಿಟಾಲಿನ 10 ಮೀಟರ್ಸ್ ಪಿಸ್ತೂಲು ವಿಭಾಗದಲ್ಲೂ ಚಿನ್ನ ಗಳಿಸಿದ್ದ ಅವರು 10 ಮೀಟರ್ಸ್ ಏರ್ ಪಿಸ್ತೂಲು ವಿಭಾಗದಲ್ಲಿ ಬೆಳ್ಳಿ ಪದಕವನ್ನೂ ಗೆದ್ದಿದ್ದರು.

10 ಮೀಟರ್ಸ್ ಪಿಸ್ತೂಲು ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದ ಬಲ್ಗೇರಿಯಾದ ಅಂಟೋನೆಟಾ ಕೊಸ್ತದಿನೊವ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಗಳಿಸಿದ್ದರು. ಆದರೆ ಫೈನಲ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದರು. ರಿಯೊ ಒಲಿಂಪಿಕ್ಸ್‌ನಲ್ಲಿ ಚಾಂಪಿಯನ್ ಆಗಿದ್ದ ಗ್ರೀಸ್‌ನ ಅನಾ ಕೊರಾಕಕಿ ಆರನೇ ಸ್ಥಾನ ಗಳಿಸಿದರು. ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಬಲ್ಗೇರಿಯಾದ ಮರಿಯಾ ಗೊಸ್ಡೇವ ಫೈನಲ್ ಪ್ರವೇಶಿಸಲು ಸಾಧ್ಯವಾಗದೆ ಮರಳಿದರು. ವಿಶ್ವ ಚಾಂಪಿಯನ್ ಉಕ್ರೇನ್‌ನ ಒಲೆನಾ ಕೊಸ್ಟೆವಿಚ್ ಕೂಡ ನಿರಾಸೆ ಅನುಭವಿಸಿದರು.



ವಿಟಾಲಿನ ಪದಕದ ಸಂಭ್ರಮ – ರಾಯಿಟರ್ಸ್ ಚಿತ್ರ

ಕ್ರಿಕೆಟ್: ಕನ್ನಡಿಗ ಕೃಷ್ಣಪ್ಪ ಗೌತಮ್, ಸ್ಪಿನ್ನರ್ ಯಜುವೇಂದ್ರ ಚಾಹಲ್‌ಗೆ ಸೋಂಕು

ಭಾರತ ತಂಡದಲ್ಲಿ ಕೋವಿಡ್ ಹಾವಳಿ

ಕೊಲಂಬೊ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರರಾದ ಯಜುವೇಂದ್ರ ಚಾಹಲ್ ಹಾಗೂ ಕನ್ನಡಿಗ ಕೃಷ್ಣಪ್ಪ ಗೌತಮ್ ಅವರಿಗೆ ಕೊರೊನಾ ಸೋಂಕು ತಗುಲಿರುವುದು ಶುಕ್ರವಾರ ಖಚಿತಪಟ್ಟಿದೆ. ಹೀಗಾಗಿ ಶ್ರೀಲಂಕಾದಲ್ಲಿ ಸರಣಿ ಆಡಲು ತೆರಳಿರುವ ಅವರು ಪ್ರತ್ಯೇಕವಾಸಕ್ಕಾಗಿ ಅಲ್ಲಿಯೇ ಉಳಿದುಕೊಳ್ಳುವಂತಾಗಿದೆ.

ಕೋವಿಡ್ ತಗುಲಿರುವ ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಅವರು ಈಗಾಗಲೇ ದ್ವೀಪರಾಷ್ಟ್ರದಲ್ಲಿ ಪ್ರತ್ಯೇಕವಾಸದಲ್ಲಿದ್ದಾರೆ.

ಏಕದಿನ ಹಾಗೂ ಟಿ–20 ಸರಣಿಗಳು ಮುಗಿದ ಬಳಿಕ ಭಾರತ ತಂಡ ತವರಿಗೆ ಹಿಂತಿರುಗುವ ವೇಳೆ ಆಟಗಾರರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗಿತ್ತು.



ಯಜುವೇಂದ್ರ ಚಾಹಲ್– ರಾಯಿಟರ್ಸ್ ಚಿತ್ರ

‘ಭಾರತತಂಡವು ಕೊಲಂಬೊದಿಂದ ತೆರಳಲು ಸಿದ್ಧವಾಗಿದೆ. ಆದರೆ ಸೋಂಕು ಪ್ರಕರಣಗಳು ಪತ್ತೆಯಾದ ಕಾರಣ ವಿಮಾನ ನಿಲ್ದಾಣದಲ್ಲೇ ಕಾಯಬೇಕಾಗಿದೆ. ಸಂಜೆ ವೇಳೆಗೆ ತೆರಳಬಹುದು‘ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಈ ಮೊದಲು ಹೇಳಿದ್ದರು.

‘ಕೃಣಾಲ್ ಪಾಂಡ್ಯ ಅವರನ್ನು ಹೊರತುಪಡಿಸಿ ತಂಡದ ಉಳಿದ ಆಟಗಾರರು ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಬೇಕಿತ್ತು. ಆದರೆ ಇದೇ ವೇಳೆ ಚಾಹಲ್ ಮತ್ತು ಗೌತಮ್ ಅವರಿಗೆ ಸೋಂಕು ಖಚಿತಪಟ್ಟಿದೆ. ನಿಯಮಗಳ ಅನ್ವಯ ಈ ಇಬ್ಬರೂ ಆಟಗಾರರು ಶ್ರೀಲಂಕಾದಲ್ಲಿ ಏಳು ದಿನಗಳ ಪ್ರತ್ಯೇಕವಾಸದಲ್ಲಿರಬೇಕಾಗುತ್ತದೆ‘ ಎಂದು ಅಧಿಕಾರಿ ವಿವರಿಸಿದರು.



ಕೃಷ್ಣಪ್ಪ ಗೌತಮ್– ಪ್ರಜಾವಾಣಿ ಚಿತ್ರ

ಕೃಣಾಲ್ ಅವರ ನಿಕಟ ಸಂಪರ್ಕ ಹೊಂದಿದ್ದರು ಎಂದು ಗುರುತಿಸಲಾದ ಎಂಟು ಮಂದಿ ಆಟಗಾರರಲ್ಲಿ ಗೌತಮ್ ಮತ್ತು ಚಾಹಲ್ ಕೂಡ ಇದ್ದರು. ಈ ಅವರಿಗೆ ಸೋಂಕು ಇರುವುದು ಖಚಿತಪಟ್ಟಿದೆ. ಇನ್ನುಳಿದ ಆರು ಆಟಗಾರರಾದ ಹಾರ್ದಿಕ್ ಪಾಂಡ್ಯ, ಮನೀಷ್ ಪಾಂಡೆ, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ಪೃಥ್ವಿ ಶಾ ಮತ್ತು ದೀಪಕ್ ಚಾಹರ್ ಅವರಿಗೆ ಭಾರತಕ್ಕೆ ಮರಳಲು ಅನುಮತಿ ದೊರೆತಿದೆ.

ಪೃಥ್ವಿ ಶಾ ಸೂರ್ಯಕುಮಾರ್ ಯಾದವ್ ಅವರು ಇಂಗ್ಲೆಂಡ್‌ನಲ್ಲಿರುವ ಭಾರತ ಟೆಸ್ಟ್ ತಂಡವನ್ನು ಸೇರಲು ತೆರಳಬೇಕಿದೆ. ಗಾಯಗೊಂಡಿರುವ ಆವೇಶ್ ಖಾನ್ ಹಾಗೂ ವಾಷಿಂಗ್ಟನ್ ಸುಂದರ್ ಬದಲಿಗೆ ಅವರು ಅವಕಾಶ ಪಡೆದಿದ್ದಾರೆ.

ವಿರಾಮ ಬಯಸಿದ ಬೆನ್

ಲಂಡನ್ (ಪಿಟಿಐ): ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುವ ಉದ್ದೇಶದಿಂದ ಕ್ರಿಕೆಟ್‌ನಿಂದ ಅನಿರ್ದಿಷ್ಟಾವಧಿಗೆ ವಿರಾಮ ತೆಗೆದುಕೊಳ್ಳಲು ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ನಿರ್ಧರಿಸಿದ್ದಾರೆ. ಹೀಗಾಗಿ ಆಗಸ್ಟ್ 4ರಿಂದ ಭಾರತದ ವಿರುದ್ಧ ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಅವರು ಕಣಕ್ಕಿಳಿಯುತ್ತಿಲ್ಲ

‘ಎಡಗೈ ತೋರುಬೆರಳಿನ ಗಾಯ ಸಂಪೂರ್ಣ ವಾಸಿಯಾಗದ ಕಾರಣದಿಂದಲೂ ಅವರು ಕ್ರಿಕೆಟ್‌ನಿಂದ ಕೆಲ ಕಾಲ ದೂರ ಉಳಿಯುತ್ತಿರುವುದಾಗಿ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯು (ಇಸಿಬಿ) ಹೇಳಿಕೆ ನೀಡಿದೆ.

‘ಸ್ಟೋಕ್ಸ್ ಅವರ ನಿರ್ಧಾರವನ್ನು ಇಸಿಬಿ ಬೆಂಬಲಿಸಲಿದೆ. ತಮ್ಮ ನೋವು ಮತ್ತು ಆರೋಗ್ಯದ ಕುರಿತು ಅವರು ಹೇಳಿಕೊಳ್ಳುವ ಧೈರ್ಯ ಮಾಡಿದ್ದಾರೆ. ಎಲ್ಲ ಆಟಗಾರರ ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮದ ಕಡೆಗೆ ನಮ್ಮ ಗಮನವಿರುತ್ತದೆ’ ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ವ್ಯವಸ್ಥಾಪಕ ನಿರ್ದೇಶಕ ಆ್ಯಶ್ಲೆ ಗೈಲ್ಸ್ ಹೇಳಿದ್ದಾರೆ.

ಎಟಿಕೆ– ಕೃಷ್ಣ ಒಪ್ಪಂದ ವಿಸ್ತರಣೆ

ಕೋಲ್ಕತ್ತ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಎಟಿಕೆ ಮೋಹನ ಬಾಗನ್ (ಎಟಿಕೆಎಂಬಿ) ತಂಡವು ರಾಯ್ ಕೃಷ್ಣ ಜೊತೆಗಿನ ಒಪ್ಪಂದವನ್ನು ವಿಸ್ತರಿಸಿಕೊಂಡಿದೆ.

‘ಕ್ಲಬ್‌ನೊಂದಿಗೆ ಮುಂದುವರಿಯುತ್ತಿದ್ದೇನೆ. ಎಲ್ಲರ ಸಹಕಾರ ಮೊದಲಿನಂತೆಯೇ ಇರಲಿದೆ ಎಂಬ ವಿಶ್ವಾಸವಿದೆ’ ಎಂದು ಕೃಷ್ಣ ಹೇಳಿದ್ದಾರೆ.

ಪೂರ್ಣಾವಧಿಗೆ ಕೋಚ್: ಯೋಚಿಸಿಲ್ಲ– ದ್ರಾವಿಡ್

ಕೊಲಂಬೊ (ಪಿಟಿಐ): ಭಾರತ ತಂಡದ ಪೂರ್ಣಾವಧಿ ಕೋಚ್ ಆಗುವ ಬಗ್ಗೆ ಈವರೆಗೆ ಯೋಚನೆ ಮಾಡಿಲ್ಲ ಎಂದು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ, ಮಾಜಿ ಆಟಗಾರ ರಾಹುಲ್ ದ್ರಾವಿಡ್ ಹೇಳಿದ್ದಾರೆ.

ದ್ರಾವಿಡ್ ಅವರು ಶ್ರೀಲಂಕಾ ವಿರುದ್ಧ ಸೀಮಿತ ಓವರ್‌ಗಳ ಸರಣಿಯಲ್ಲಿ ಆಡಿದ್ದ ಶಿಖರ್ ಧವನ್ ನಾಯಕತ್ವದ ಭಾರತ ತಂಡಕ್ಕೆ ತರಬೇತಿ ನೀಡಿದ್ದರು.

‘ಶ್ರೀಲಂಕಾದಲ್ಲಿ ಭಾರತ ತಂಡಕ್ಕೆ ತರಬೇತಿ ನೀಡಿದ್ದು ಬಹಳಷ್ಟು ಖುಷಿ ಕೊಟ್ಟಿದೆ. ಇದಕ್ಕಿಂತ ಹೆಚ್ಚಿನದನ್ನು ಏನೂ ಯೋಚಿಸಿಲ್ಲ‘ ಎಂದು ಗುರುವಾರ ಮೂರನೇ ಟಿ–20 ಪಂದ್ಯದ ಬಳಿಕ ನಡೆದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಅವರು ನುಡಿದರು.

ತಂಡದ ಕೋಚ್ ಆಗಿ ಪೂರ್ಣಾವಧಿಗೆ ಮುಂದುವರಿಯಲು ಅವಕಾಶ ಸಿಕ್ಕರೆ ಏನು ಮಾಡುತ್ತೀರಿ ಎಂಬ ಪ್ರಶ್ನೆಗೆ ಉತ್ತರಿಸಿದ ದ್ರಾವಿಡ್, ನಾನೀಗ ಏನು ಮಾಡುತ್ತಿದ್ದೇನೆಯೋ ಆ ಬಗ್ಗೆ ನನಗೆ ತೃಪ್ತಿ ಇದೆ. ಈ ಪ್ರವಾಸದ ಹೊರತಾಗಿ ಬೇರೇನನ್ನೂ ಯೋಚಿಸಿಲ್ಲ ಎಂದಿದ್ದಾರೆ.



ರಾಹುಲ್ ದ್ರಾವಿಡ್

ಲಂಕಾ ವಿರುದ್ಧ ಗುರುವಾರ ರಾತ್ರಿ ನಡೆದ ಮೂರನೇ ಮತ್ತು ಅಂತಿಮ ಟಿ–20 ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ಸೋಲುವ ಮೂಲಕ ಭಾರತ 2-1 ಅಂತರದಲ್ಲಿ ಸರಣಿಯನ್ನು ಕೈಚೆಲ್ಲಿತ್ತು.

ರಾಹುಲ್ ದ್ರಾವಿಡ್ ಅವರು ಇದುವರೆಗೆ 19 ವರ್ಷದೊಳಗಿನವರ ಮತ್ತು ಭಾರತ 'ಎ' ತಂಡಕ್ಕೆ ತರಬೇತಿ ನೀಡಿ ಯಶಸ್ವಿಯಾಗಿದ್ದಾರೆ. ಸೀನಿಯರ್ ತಂಡದ ತರಬೇತುದಾರರಾಗಿ ಮೊದಲ ಬಾರಿ ಅವರು ಶ್ರೀಲಂಕಾ ಪ್ರವಾಸ ಕೈಗೊಂಡಿದ್ದರು.

ರೇಸ್ ಆಯೋಜನೆಗೆ ಬಿಟಿಸಿ ಸಿದ್ಧತೆ

ಬೆಂಗಳೂರು: ಬೇಸಿಗೆ ಋತುವಿನ ರೇಸ್‌ಗಳನ್ನು ಆಯೋಜಿಸಲು ರಾಜ್ಯ ಸರ್ಕಾರದಿಂದ ಅನುಮತಿ ದೊರೆತಿದ್ದು ಭಾನುವಾರದಿಂದ ಈ ಕುರಿತು ಈ ಚಟುವಟಿಕೆಗಳನ್ನು ಆರಂಭಿಸುವುದಾಗಿ ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ತಿಳಿಸಿದೆ.

ಆಗಸ್ಟ್ 1ರಿಂದ ಹೈದರಾಬಾದ್ ಆಫ್‌ಕೋರ್ಸ್ ಬೆಟ್ಟಿಂಗ್‌ನೊಂದಿಗೆ, ಬಿಟಿಸಿ ಹಾಗೂ ಮೈಸೂರು ರೇಸ್ ಕ್ಲಬ್ ಚಟುವಟಿಕೆಗಳು ಆರಂಭವಾಗಲಿವೆ. ಆಗಸ್ಟ್ 7ರಂದು ಮೊದಲ ರೇಸ್ ನಡೆಯಲಿದೆ ಎಂದು ಬಿಟಿಸಿ ಶನಿವಾರ ತಿಳಿಸಿದೆ.

ಸೆಪ್ಟೆಂಬರ್ 25ರವರೆಗೆ ರೇಸ್‌ಗಳು ನಡೆಯಲಿವೆ.

‘ರೇಸ್‌ಗಳನ್ನು ಆರಂಭಿಸಲು ಅನುಮತಿ ನೀಡಿರುವ ರಾಜ್ಯ ಸರ್ಕಾರಕ್ಕೆ ಧನ್ಯವಾದಗಳು; ಸಂತಸವಾಗಿದೆ. ಕೋವಿಡ್‌ನ ಎರಡನೇ ಅಲೆಯು ರೇಸಿಂಗ್ ಸೇರಿದಂತೆ ಹಲವು ಚಟುವಟಿಕೆಗಳ ಮೇಲೆ ಪರಿಣಾಮ ಬೀರಿತ್ತು. ಕೋವಿಡ್ ಮುಂಜಾಗ್ರತೆಗಳನ್ನು ಕೈಗೊಂಡು ರೇಸ್‌ಗಳನ್ನು ಆರಂಭಿಸಲಾಗುವುದು‘ ಎಂದು ಬಿಟಿಸಿ ಮುಖ್ಯಸ್ಥ ವಿನೋದ್ ಶಿವಪ್ಪ ತಿಳಿಸಿದ್ದಾರೆ.

ಫುಟ್‌ಬಾಲ್: ವಿಜಯನಗರ ಯುನೈಟೆಡ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಶ್ರೂತವಂದನ ಗೋಪಾಲ್ ಅವರು ಗಳಿಸಿದ ಎರಡು ಗೋಲುಗಳ ನೆರವಿನಿಂದ ವಿಜಯನಗರ ಯುನೈಟೆಡ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ–ಬಿಡಿಎಫ್‌ಎ ‘ಸಿ’ ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಶುಕ್ರವಾರ ನಡೆದ ಪಂದ್ಯದಲ್ಲಿ ಛತ್ರಪತಿ ಶಿವಾಜಿ ಎಫ್‌ಸಿ ತಂಡವನ್ನು 5–3ರಿಂದ ಮಣಿಸಿತು.

ಗೋಪಾಲ್ ಅವರು ಎರಡು ಮತ್ತು 63ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ವಿಜೇತ ತಂಡದ ಪರ ಶಿವು ಶಂಕರ (47ನೇ ನಿಮಿಷ), ಹೇಮಂತ್ (48ನೇ ನಿಮಿಷ) ಮತ್ತು ನೇಹಲ್ (54ನೇ ನಿಮಿಷ) ಗೋಲು ಹೊಡೆದರು. ಛತ್ರಪತಿ ಶಿವಾಜಿ ಎಫ್‌ಸಿ ತಂಡದ ಶಿವ (6ನೇ ನಿಮಿಷ), ಅಜಿತ್ (35 ಮತ್ತು 51ನೇ ನಿಮಿಷ) ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಒಲಿಂಪಿಯನ್ ರಾಮನ್ ಎಫ್‌ಸಿ ಪೆನಾಲ್ಟಿ ಶೂಟೌಟ್ ಮೂಲಕ ಚಿನ್ನಪ್ಪ ಗಾರ್ಡನ್ ಎಫ್‌ಸಿ ತಂಡವನ್ನು ಮಣಿಸಿತು. ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಎರಡು ಗೋಲು ದಾಖಲಿಸಿದ್ದವು. ಹೀಗಾಗಿ ಫಲಿತಾಂಶ ನಿರ್ಧರಿಸಲು ಪೆನಾಲ್ಟಿ ಶೂಟೌಟ್ ಮೊರೆಹೋಗಲಾಯಿತು. ಇಲ್ಲಿ ಒಲಿಂಪಿಯನ್ ರಾಮನ್ ತಂಡವು ನಾಲ್ಕು ಗೋಲು ಗಳಿಸಿದರೆ, ಎದುರಾಳಿ ಆಟಗಾರರು ಎರಡರಲ್ಲಿ ಮಾತ್ರ ಯಶಸ್ವಿಯಾದರು.

ಪೆನಾಲ್ಟಿ ಶೂಟೌಟ್ ಕಂಡ ಇನ್ನೊಂದು ಪಂದ್ಯದಲ್ಲಿ ರೊನಾಲ್ಡೊ ಎಫ್‌ಸಿ ತಂಡವು ಕಿಕ್‌ಸ್ಟಾರ್ಟ್ ಅಕಾಡೆಮಿಯನ್ನು ಸೋಲಿಸಿತು. ನಿಗದಿತ ಅವಧಿಯಲ್ಲಿ ಎರಡೂ ತಂಡಗಳು ತಲಾ ಎರಡು ಗೋಲು ಗಳಿಸಿದ್ದವು. ಶೂಟೌಟ್‌ನಲ್ಲಿ ರೊನಾಲ್ಡೊ ಎಫ್‌ಸಿ ಮೂರು ಮತ್ತು ಕಿಕ್‌ಸ್ಟಾರ್ಟ್ ಒಂದು ಗೋಲು ದಾಖಲಿಸಿದವು.

ಶನಿವಾರ ನಡೆಯುವ ಪಂದ್ಯಗಳಲ್ಲಿ ರಿಚಮಂಡ್ ಪ್ಯಾಂಥರ್ಸ್ ಎಫ್‌ಸಿ–ತಮರಾಯಿಕಣ್ಣನ್ ಎಫ್‌ಸಿ, ಶಮಂತ್ ಎಫ್‌ಸಿ–ಅಲ್ ಫತೇಹ್ ಎಫ್‌ಸಿ, ರೂಟ್ಸ್ ಅಕಾಡೆಮಿ– ವಿಲಿಯಮ್ ಎಫ್‌ಸಿ ತಂಡಗಳು ಸೆಣಸಲಿವೆ.



ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜ್ಯ ‘ಎ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ಎಎಸ್‌ಸಿ ತಂಡದ ಇಸಾಕ್ (ಎಡ) ಹಾಗೂ ಮಂಗಳೂರು ಬಿಸಿ ತಂಡದ ಶಶಾಂಕ್ ರೈ ನಡುವೆ ಚೆಂಡಿಗಾಗಿ ಪೈಪೋಟಿ. ಈ ಪಂದ್ಯದಲ್ಲಿ ಎಎಸ್‌ಸಿ ತಂಡವು 75–67ರಿಂದ ಗೆದ್ದಿತು – ಪ್ರಜಾವಾಣಿ ಚಿತ್ರ

ಲಂಕಾ ಆಟಗಾರರಿಗೆ ಶಿಕ್ಷೆ

ಕೊಲೊಂಬೊ(ಪಿಟಿಐ): ಇಂಗ್ಲೆಂಡ್ ಪ್ರವಾಸದ ಸಂದರ್ಭದಲ್ಲಿ ಕೋವಿಡ್ ನಿಯಂತ್ರಣ ಶಿಷ್ಟಾಚಾರ ಉಲ್ಲಂಘಿಸಿದ ಶ್ರೀಲಂಕಾದ ಮೂವರು ಆಟಗಾರರಿಗೆ ಶಿಕ್ಷೆ ನೀಡಲಾಗಿದೆ.

‘ತಂಡದ ಉಪನಾಯಕ ಕುಶಾಲ್ ಮೆಂಡಿಸ್, ಆರಂಭಿಕ ಆಟಗಾರ ಧನುಷ್ಕಾ ಗುಣತಿಲಕ ಮತ್ತು ವಿಕೆಟ್ ಕೀಪರ್ ನಿರೋಶನ್ ಡಿಕ್ವೆಲ್ಲಾ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದ ಹಿಂದಿನ ದಿನ ರಾತ್ರಿ ಡರ್ಹಾಮ್‌ನಲ್ಲಿ ಓಡಾಡುತ್ತಿರುವ ದೃಶ್ಯ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿದೆ. ಇದೇ ಹಿನ್ನೆಲೆಯಲ್ಲಿ ಈ ಮೂವರು ಆಟಗಾರರಿಗೆ ಒಂದು ವರ್ಷದ ನಿಷೇಧ ಮತ್ತು 50 ಸಾವಿರ ಡಾಲರ್ ದಂಡ ವಿಧಿಸಲಾಗಿದೆ‘ ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ ತಿಳಿಸಿದೆ.



ಕುಶಾಲ್ ಮೆಂಡಿಸ್

‘ತಾಲಿಬಾನಿಗಳಿಂದ ಸಿದ್ದಿಕಿ ಕ್ರೂರ ಹತ್ಯೆ’

ವಾಷಿಂಗ್ಟನ್ (ಪಿಟಿಐ): ಭಾರತೀಯ ಫೋಟೊ ಜರ್ನಲಿಸ್ಟ್, ರಾಯಿಟರ್ಸ್ ಸುದ್ದಿ ಸಂಸ್ಥೆಗಾಗಿ ಕೆಲಸ ಮಾಡುತ್ತಿದ್ದ ಡ್ಯಾನಿಷ್ ಸಿದ್ದಿಕಿ ಅಫ್ಗಾನಿಸ್ತಾನದಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಕೊಲ್ಲಲ್ಪಟ್ಟಿಲ್ಲ, ಅವರ ಗುರುತನ್ನು ಪರಿಶೀಲಿಸಿದ ನಂತರ ತಾಲಿಬಾನಿಗಳು ‘ಕ್ರೂರವಾಗಿ ಹತ್ಯೆ ಮಾಡಿದ್ದಾರೆ’ ಎಂದು ಅಮೆರಿಕ ಮೂಲದ ನಿಯತಕಾಲಿಕೆಯೊಂದರಲ್ಲಿ ಪ್ರಕಟವಾದ ವರದಿ ತಿಳಿಸಿದೆ.

38 ವರ್ಷದ ಸಿದ್ದಿಕಿ ಅವರು ಅಫ್ಗಾನಿಸ್ತಾನದ ಕಂದಹಾರ್‌ನ ಸ್ಪಿನ್ ಬೋಲ್ಡಾಕ್ ಜಿಲ್ಲೆಯಲ್ಲಿ ಆಫ್ಗಾನ್ ಪಡೆಗಳು ಮತ್ತು ತಾಲಿಬಾನ್ ನಡುವಿನ ಘರ್ಷಣೆಯನ್ನು ವರದಿ ಮಾಡುತ್ತಿದ್ದಾಗ ಹತ್ಯೆಯಾಗಿದ್ದರು ಎಂದು ಈ ಹಿಂದೆ ವರದಿಯಾಗಿತ್ತು.

ವಾಷಿಂಗ್ಟನ್ ಎಕ್ಸಾಮಿನರ್ ಮ್ಯಾಗಜಿನ್ ವರದಿಯ ಪ್ರಕಾರ, ಪಾಕಿಸ್ತಾನಕ್ಕೆ ಸಂಪರ್ಕ ಕಲ್ಪಿಸುವ ಗಡಿ ನಿಯಂತ್ರಿಸುವ ವಿಚಾರವಾಗಿ ಆಫ್ಗಾನ್ ಪಡೆಗಳು ಮತ್ತು ತಾಲಿಬಾನ್ ನಡುವೆ ನಡೆಯುತ್ತಿದ್ದ ಸಂಘರ್ಷವನ್ನು ವರದಿ ಮಾಡಲು ಸಿದ್ದಿಕಿ ಆಫ್ಗಾನ್ ರಾಷ್ಟ್ರೀಯ ಸೇನಾ ಪಡೆಯೊಂದಿಗೆ ಸ್ಪಿನ್ ಬೋಲ್ಡಾಕ್ ಪ್ರದೇಶಕ್ಕೆ ಪ್ರಯಾಣ ಬೆಳೆಸಿದ್ದರು.

ಕಸ್ಟಮ್ಸ್ ಪೋಸ್ಟ್ ಸ್ವಲ್ಪ ದೂರದಲ್ಲಿರುವಾಗ ತಾಲಿಬಾನ್ ದಾಳಿಯಿಂದಾಗಿ ಸೇನಾ ತಂಡ ಚದುರಿತು. ಈ ಸಂದರ್ಭ ಸೇನಾ ಕಮಾಂಡರ್‌ಗಳು ಸಿದ್ದಿಕಿಯಿಂದ ಬೇರ್ಪಟ್ಟರು. ಬಳಿಕ, ಅವರು ಇತರ ಮೂವರು ಅಫ್ಗನ್ ಸೈನಿಕರ ಜೊತೆ ಇದ್ದರು.

ದಾಳಿ ತೀವ್ರಗೊಳ್ಳುತ್ತಿದ್ದಂತೆ ಸಿದ್ದಿಕಿ ಮತ್ತು ಮೂವರು ಸೈನಿಕರು ಸಮೀಪದ ಮಸೀದಿಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಆಶ್ರಯ ಪಡೆದಿದ್ದರು. ಒಬ್ಬ ಪತ್ರಕರ್ತ ಮಸೀದಿಯಲ್ಲಿದ್ದಾನೆಂಬ ಸುದ್ದಿ ಹರಡುತ್ತಿದ್ದಂತೆ, ತಾಲಿಬಾನ್ ದಾಳಿ ಮಾಡಿ ಸೈನಿಕರು ಹಾಗೂ ಸಿದ್ದಿಕಿ ಅವರನ್ನು ಹತ್ಯೆ ಮಾಡಲಾಗಿದೆ’ ಎಂದು ತಿಳಿದುಬಂದಿರುವುದಾಗಿ ಮ್ಯಾಗಜಿನ್ ತಿಳಿಸಿದೆ.

ಕೆಎಸ್‌ಪಿಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೋಜ್ (19 ಪಾಯಿಂಟ್ಸ್) ಹಾಗೂ ಸುಭಾಷ್ (17 ಪಾಯಿಂಟ್ಸ್) ಅವರ ಅಮೋಘ ಆಟವು ಕೆಎಸ್‌ಪಿ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟಿತು. ಎಂ.ಸಿ.ಶ್ರೀನಿವಾಸ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ‘ಬಿ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ತಂಡವು 95–48ರಿಂದ ಬಾಶ್ ತಂಡವನ್ನು ಮಣಿಸಿತು.

ಬಾಶ್ ತಂಡದ ಪರ ವಿಜಯ್ (24 ಪಾಯಿಂಟ್ಸ್) ಮಿಂಚಿದರು.

ಕೋರಮಂಗಲ ಎಸ್‌ಸಿ ತಂಡವು 87–31ರಿಂದ ರೋವರ್ಸ್ ಧಾರವಾಡ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ ರವೀಶ್ ಮತ್ತು ಕರಣ್ ತಲಾ 14 ಪಾಯಿಂಟ್ಸ್ ಕಲೆಹಾಕಿದರು.

ಇನ್ನೊಂದು ಪಂದ್ಯದಲ್ಲಿ ಎಂ.ಎನ್.ಕೆ. ರಾವ್ ಪಾರ್ಕ್ ಬಿಸಿ ತಂಡವು 70–53ರಿಂದ ಕನಕ ಕೋಲಾರ ಎದುರು ಜಯ ಸಾಧಿಸಿತು. ವಿಜೇತ ತಂಡದ ಪ್ರಜ್ಞೇಶ್ 23 ಮತ್ತು ಪ್ರಶಾಂತ್ 10 ಪಾಯಿಂಟ್ಸ್ ಕಲೆಹಾಕಿದರು. ಮತ್ತೊಂದು ಪಂದ್ಯದಲ್ಲಿ ಎಂಇಜಿ 77–37ರಿಂದ ಪ್ರೊಟೆಕ್ ಅಸೋಸಿಯೇಷನ್ ಮೈಸೂರು ತಂಡವನ್ನು ಸೋಲಿಸಿತು.

ಡೀಲರ್ ಸುಭಾಷ್ ಕಪೂರ್‌ಗೆ ಸಂಬಂಧಿಸಿದ 13 ಕಲಾಕೃತಿಗಳು

14 ಕಲಾಕೃತಿ ಹಿಂತಿರುಗಿಸಲಿರುವ ಆಸ್ಟ್ರೇಲಿಯಾ

ಮೆಲ್ಬರ್ನ್ (ಪಿಟಿಐ): ಕಂಚು ಮತ್ತು ಕಲ್ಲಿನ ಶಿಲ್ಪಗಳು ಸೇರಿದಂತೆ ಮತ್ತೆ 14 ಮಹತ್ವದ ಕಲಾಕೃತಿಗಳನ್ನು ಭಾರತಕ್ಕೆ ಹಿಂತಿರುಗಿಸಲು ಆಸ್ಟ್ರೇಲಿಯಾ ನಿರ್ಧರಿಸಿದೆ.

ಇವುಗಳಲ್ಲಿ ಆರು ಕಲಾಕೃತಿಗಳನ್ನು ಕಳ್ಳತನದಿಂದ ಮತ್ತು ಕಾನೂನುಬಾಹಿರವಾಗಿ ಭಾರತದಿಂದ ಆಸ್ಟ್ರೇಲಿಯಾಗೆ ಸಾಗಿಸಿರುವ ಸಾಧ್ಯತೆ ಇದೆ ಎಂದು ನ್ಯಾಷನಲ್ ಗ್ಯಾಲರಿ ಆಫ್ ಆಸ್ಟ್ರೇಲಿಯಾ (ಎನ್‌ಜಿಎ) ತಿಳಿಸಿದೆ.


‘ಏಷ್ಯಾ ಕಲಾಕೃತಿಗಳ ಸಂಗ್ರಹದಲ್ಲಿನ ಈ ಕಲಾಕೃತಿಗಳನ್ನು ಭಾರತ ಸರ್ಕಾರಕ್ಕೆ ಹಿಂತಿರುಗಿಸಲಾಗುವುದು’ ಎಂದು ಎನ್‌ಜಿಎ ತಿಳಿಸಿದೆ.

ಭಾರತದ ಕಲಾಕೃತಿಗಳ ಡೀಲರ್ ಸುಭಾಷ್ ಕಪೂರ್ ಅವರಿಗೆ ಸಂಬಂಧಿಸಿದ 13 ಕಲಾಕೃತಿಗಳು ಮತ್ತು ಇನ್ನೊಬ್ಬ ಕಲಾಕೃತಿಗಳ ಡೀಲರ್ ವಿಲ್ಲಿಯಂ ವಾಲ್ಫ್ ಅವರಿಂದ ವಶಪಡಿಸಿಕೊಂಡಿದ್ದ ಒಂದು ಕಲಾಕೃತಿ ಇವುಗಳಲ್ಲಿ ಸೇರಿವೆ. ಇವುಗಳನ್ನೇ ಈಗ ಹಿಂತಿರುಗಿಸಲಾಗುತ್ತಿದೆ.



ಭಾರತಕ್ಕೆ ಎನ್‌ಜಿಎ ಹಿಂತಿರುಗಿಸಲಿರುವ ಶಿಲ್ಪ ಕಲಾಕೃತಿ– ಎಎಫ್‌ಪಿ ಚಿತ್ರ

ಕಪೂರ್ ಅವರಿಂದ ಖರೀದಿಸಲಾಗಿದ್ದ ಕಲಾಕೃತಿಗಳನ್ನು ಭಾರತಕ್ಕೆ ಹಿಂತಿರುಗಿಸುತ್ತಿರುವುದು ನಾಲ್ಕನೇ ಬಾರಿಯಾಗಿದೆ. 2014, 2016 ಮತ್ತು 2019ರಲ್ಲಿಯೂ ಆಸ್ಟ್ರೇಲಿಯಾ ಕಲಾಕೃತಿಗಳನ್ನು ಹಿಂತಿರುಗಿಸಿತ್ತು.



ಭಾರತಕ್ಕೆ ಎನ್‌ಜಿಎ ಹಿಂತಿರುಗಿಸಲಿರುವ ಶಿಲ್ಪ ಕಲಾಕೃತಿ. ಇದು 12ನೇ ಶತಮಾನದ್ದು ಎಂದು ಹೇಳಲಾಗಿದೆ.

ಕಲಾಕೃತಿಗಳ ಅಕ್ರಮ ಸಾಗಣೆಯ ಆರೋಪಕ್ಕಾಗಿ ಕಪೂರ್ ಭಾರತದಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ. ಇನ್ನು ಮುಂದೆ ಕಪೂರ್ ಅವರಿಂದ ಪಡೆದುಕೊಳ್ಳಲಾದ ಯಾವುದೇ ಕಲಾಕೃತಿಗಳನ್ನು ನ್ಯಾಷನಲ್ ಗ್ಯಾಲರಿಯಲ್ಲಿ ಇರುವುದಿಲ್ಲ.

ಹಲವು ವರ್ಷಗಳಿಂದ ಕಪೂರ್ ಅವರ ‘ಆರ್ಟ್ ಆಫ್ ದ ಪಾಸ್ಟ್’ ಗ್ಯಾಲರಿಯಿಂದ 22 ಕಲಾಕೃತಿಗಳನ್ನು ಎನ್‌ಜಿಎ 1.07 ಕೋಟಿ ಡಾಲರ್‌ಗೆ (₹79.51 ಕೋಟಿ) ಖರೀದಿಸಿತ್ತು. ಇದರಲ್ಲಿ ಆಕರ್ಷಕವಾದ 11ನೇ ಶತಮಾನದ ಚೋಳರ ಕಾಲದ ಶಿವ ನಟರಾಜನ ಕಂಚಿನ ಶಿಲ್ಪವು ಸೇರಿತ್ತು. 2008ರಲ್ಲಿ ಈ ಶಿಲ್ಪವನ್ನು 50 ಲಕ್ಷ ಡಾಲರ್‌ಗೆ (37.15 ಕೋಟಿ) ಖರೀದಿಸಿತ್ತು.

‘ನೈತಿಕವಾಗಿ ಮತ್ತು ಪಾರದರ್ಶಕ ವ್ಯವಸ್ಥೆಯಲ್ಲಿ ಪಡೆದ ಕಲಾಕೃತಿಗಳನ್ನು ಗ್ಯಾಲರಿಯಲ್ಲಿಡಲಾಗುವುದು’ ಎಂದು ನ್ಯಾಷನಲ್ ಗ್ಯಾಲರಿ ಆಫ್ ಆಸ್ಟ್ರೇಲಿಯಾ ನಿರ್ದೇಶಕ ನಿಕ್ ಮಿಟ್‌ಝೆವಿಕ್ ತಿಳಿಸಿದ್ದಾರೆ. ನ್ಯಾಷನಲ್ ಗ್ಯಾಲರಿ ನಿರ್ಧಾರವನ್ನು ಆಸ್ಟ್ರೇಲಿಯಾದಲ್ಲಿನ ಭಾರತದ ಹೈಕಮಿಷನರ್ ಮನ್‌ಪ್ರೀತ್ ವೊಹ್ರಾ ಸ್ವಾಗತಿಸಿದ್ದಾರೆ.